
॥ ಶ್ರೀ ಗಣೇಶಾಯ ನಮಃ ॥

# ಜ್ಞಾನ ಬಿಂದು



ಆಧ್ಯಾತ್ಮಿಕ ಸಾಂಸ್ಕೃತಿಕ ದ್ವೈಮಾಸಿಕ

ಸಂಪುಟ : 18 ಸಂಚಿಕೆ : 2 ಮಾರ್ಚ್-ಏಪ್ರಿಲ್ 2013

# ಒಳಗಿನ ಪುಟಗಳಲ್ಲಿ


| | | ಪುಟಸಂಖ್ಯೆ |
|---|---|---|
| 1. | ಪ್ರಾರ್ಥನೆ | 1 |
| 2. | ಅಧ್ಯಕ್ಷರ ಸಂದೇಶ | 7 |
| 3. | ಸಂಪಾದಕೀಯ | 8 |
| 4. | ಅವಲೋಕನ | 11 |
| 5. | ಸಂಸ್ಮರಣೆ | 13 |
| 6. | ಬಾಳು ಬೆಳಗಲು ಚಿಂತನ | 16 |
| 7. | ಗೀತಾ ಚಿಂತನೆ | 18 |
| 8. | ವ್ಯಕ್ತಿ ಪರಿಚಯ | 20 |
| 9. | ಮಾಹಿತಿ | 22 |
| 10. | ವಿಶೇಷ ಲೇಖನ | 23 |
| 11. | ಒಂದು ಸಲಹೆ | 25 |
| 12. | ಚಿಂತನ | 28 |
| 13. | ಕೇಂದ್ರ ಸಂಸ್ಥೆಯ ವಾರ್ತೆಗಳು | 30 |
| 14. | ವಾರ್ತಾ ಸಂಚಯ | 32 |
| 15. | ದೇಣಿಗೆ ನೀಡಿದ ಭಕ್ತರ ವಿವರ | 41 |
| 14. | ಬಿಲಿಯನ್ ಫೌಂಡೇಶನ್ ವಾರ್ತೆಗಳು | 43 |



'ಕೂಟಬಂಧು' ಪತ್ರಿಕೆಗೆ ಲೇಖನ ಹಾಗೂ ಮಾಹಿತಿಗಳಿಗೆ
ಡಾ। ನಿಟಲಾಪುರ ಕೃಷ್ಣಮೂರ್ತಿ ಕಾರಂತ
ಗೌರವ ಸಂಪಾದಕರು, 'ಕೂಟಬಂಧು'
ಯೋಗಾನಂದ
ಇಂದ್ರಾಣಿ ದೇವಸ್ಥಾನದ ಬಳಿ
ಅಂಚೆ : ಉಡುಪಿ – 576 102
Email : nitilapurakm@yahoo.co.uk
ದೂ. ವಾ. (0820)2573443 (ಮ)



'ಕೂಟಬಂಧು' ಪತ್ರಿಕೆಗೆ ಸಂಬಂಧಿಸಿದ ವ್ಯವಹಾರಗಳಿಗೆ
ಬಿ. ನಾರಾಯಣ ಸೋಮಯಾಜಿ
ಕಾರ್ಯನಿರ್ವಹಣಾಧಿಕಾರಿ, ಕೂಟಬಂಧು ಟ್ರಸ್ಟ್
ಗಜಾನನ ಇಂಡಸ್ಟ್ರಿಯಲ್ ಎಂಟರ್‌ಪೈಸಸ್
ಅಂಚೆ ಜೋಡುಮಾರ್ಗ – 574 219
ದೂ. ವಾ. (08255) 233268 (ಆ)
232468 (ಮ) ಮೊಬೈಲ್ : 9448858868
Email : narayana.somayaji@gmail.com



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅಭಿಪ್ರಾಯಕ್ಕೆ ಆಯಾ ಲೇಖಕರೇ ಜವಾಬ್ದಾರರು. ಅದಕ್ಕೆ ಸಂಪಾದಕರು ಅಥವಾ ಕೂಟ ಮಹಾಜಗತ್ತು ಹೊಣೆಯಲ್ಲ

ಸಂಪಾದಕ



**ಶ್ರೀ ಗುರು ನರಸಿಂಹ ದೇವಸ್ಥಾನ**
**ಸಾಲಿಗ್ರಾಮ, ಉಡುಪಿ ಜಿಲ್ಲೆ**
**ದೂರವಾಣಿ : 2564544, 3204544**
**ಮೊಬೈಲ್ : 9449545714**
**ಅಂಜನೇಯ ದೇವಸ್ಥಾನ : 2564004**

# ಕೂಟಬಂಧು ಬಳಗಕ್ಕೆ ನೀವು ಸೇರಿ ಇತರರನ್ನೂ ಸೇರಿಸಿರಿ

ಕೂಟಬಂಧು ದ್ವೈಮಾಸಿಕ ಪತ್ರಿಕೆಯು ಕೂಟ ಮಹಾಜಗತ್ತು ಸಾಲಿಗ್ರಾಮ (ರಿ) ಇದರ ಮುಖವಾಣಿ, ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದ ಎಲ್ಲೆಡೆ ಹಾಗೂ ವಿಶ್ವಾದ್ಯಂತ ಚೆದರಿ ಹೋಗಿರುವ ಕೂಟ ಬ್ರಾಹ್ಮಣರ ನಡುವೆ ಸಂಪರ್ಕ ಮಾಧ್ಯಮವಾದ, ಸಾಲಿಗ್ರಾಮದ ಶ್ರೀ ಯೋಗಾನಂದ ಗುರುನರಸಿಂಹ ದೇವಸ್ಥಾನದ ಹಾಗೂ ಕೂಟ ಮಹಾಜಗತ್ತಿನ ಅಂಗಸಂಸ್ಥೆಗಳ ವಾರ್ತೆಯನ್ನು ಸಮಾಜಬಾಂಧವರಿಗೆ ತಲುಪಿಸುವುದು ಇದರ ಉದ್ದೇಶ. ಉಪಯುಕ್ತ ಲೇಖನಗಳನ್ನು ಹೊತ್ತು ಕೂಟಬಂಧು ನಿಮ್ಮೆಡೆಗೆ ಬರಲಿದ್ದಾನೆ. ದಯವಿಟ್ಟು ಈ ಬಂಧುವನ್ನು ಸ್ವಾಗತಿಸಿರಿ. ಕೂಟಬಂಧುವಿನ ಬಳಗಕ್ಕೆ ನೀವು ಸೇರಿರಿ ; ಇತರರನ್ನೂ ಸೇರಿಸಿರಿ.

| | | | |
|---|---|---|---|
| ಸದಸ್ಯತ್ವದ ವಿವರ : | **ಪ್ರಾಯೋಜಕ ಸದಸ್ಯತ್ವ :** | **ರೂ.** | **15,000/-** |
| | **ಪೋಷಕ ಸದಸ್ಯತ್ವ :** | **ರೂ.** | **650/-** |
| | **ಮಹಾಪೋಷಕ ಸದಸ್ಯತ್ವ :** | **ರೂ.** | **2100/-** |
| | **ಪಂಚವಾರ್ಷಿಕ ಸದಸ್ಯತ್ವ :** | **ರೂ.** | **250/-** |

ಸದಸ್ಯ ಶುಲ್ಕಗಳನ್ನು ಧನಾದೇಶ ಮಾಡುವವರು, ವಿಜಯಾ ಬ್ಯಾಂಕ್, ಬಿ. ಸಿ.ರೋಡ್ ಶಾಖೆಯ ಖಾತೆ ನಂಬ್ರ **101201010012557 (NEFT) Branch Code : IFSC VIJB0001012** ಡ್ರಾಫ್ಟ್ ಕಳಿಸುವವರು ಬಂಟ್ವಾಳ, ಬಿ. ಸಿ. ರೋಡಿನ ಯಾವುದೇ ಶಾಖೆಗೂ ಅಂಚೆ ಮೂಲಕ ಕಳಿಸುವವರು ನೇರವಾಗಿ ಕಾರ್ಯದರ್ಶಿಯವರ ಕಛೇರಿ ವಿಳಾಸಕ್ಕೂ ಕಳುಹಿಸಬೇಕಾಗಿ ವಿನಂತಿ. ಚೆಕ್ ಕಳುಹಿಸುವವರು **ರೂ. 75/-ನ್ನು** ಸೇರಿಸಿ ಕಳುಹಿಸತಕ್ಕದ್ದು. ಡಿಡಿಯನ್ನು ಕೂಟಬಂಧು ಟ್ರಸ್ಟ್ (ರಿ.) ಈ ಹೆಸರಿಗೆ ತೆಗೆಯತಕ್ಕದ್ದು. ಜೊತೆಯ ಪತ್ರದಲ್ಲಿ ನಿಮ್ಮ ವಿಳಾಸವನ್ನು ಪಿನ್‌ಕೋಡ್ ಸಹಿತ ಸ್ಪಷ್ಟವಾಗಿ ಬರೆದಿರಬೇಕು.

ಚಂದಾದಾರಿಕೆಗೆ ಸಂಬಂಧಿಸಿದ ಪತ್ರವ್ಯವಹಾರದಲ್ಲಿ ಈಗಾಗಲೇ ಚಂದಾದಾರರಾದವರು ಚಂದಾ ನಂಬ್ರ ನಮೂದಿಸಲೇಬೇಕು. ಇಲ್ಲವಾದಲ್ಲಿ ಆ ಕಡೆಗೆ ಗಮನಿಸಲು ಸಾಧ್ಯವಾಗುವುದಿಲ್ಲ.

**ಉತ್ತರಕ್ಕಾಗಿ ರಿಪ್ಲೈ ಕಾರ್ಡಿನೊಂದಿಗೆ ಪತ್ರ ಬರೆಯಿರಿ.**

**ವಿಳಾಸ : ಬಿ. ನಾರಾಯಣ ಸೋಮಯಾಜಿ, ಕಾರ್ಯ ನಿರ್ವಹಣಾಧಿಕಾರಿ,**

**ಕೂಟಬಂಧು ಟ್ರಸ್ಟ್ (ರಿ.), ಅಂಚೆ : ಜೋಡುಮಾರ್ಗ - 574219, ಬಂಟ್ವಾಳ ತಾಲೂಕು. ಮೊ : 9448858868**

Kootabandhu Bimonthly digest Regd. with the registrar of news papers for India under No. 65915 / 96 dt. 12-5-97



**ಕೆಬಿಎಲ್ ಅಪ್ನಾ ಘರ್**

ನಿಮ್ಮ ಮನೆಯ ಕನಸನ್ನು ನನಸಾಗಿಸಲು ಇನ್ನೇಕೆ ತಡ ...?

• ಗೃಹ ನಿರ್ಮಾಣ • ನಿವೇಶನ ಖರೀದಿ • ಗೃಹ ನಿರ್ಮಾಣ • ಪೂರ್ವನಿರ್ಮಿತವಾದ ಗೃಹ ಅಥವಾ ಫ್ಲಾಟ್ ಖರೀದಿಗೆ • ವಾಸವಿರುವ ಗೃಹ / ಫ್ಲಾಟ್ - ನವೀಕರಣ / ದುರಸ್ತಿ / ವಿಸ್ತರಣಾ ಕಾರ್ಯ / ಪುನರ್ ನಿರ್ಮಾಣಕ್ಕೆ




**ಕೆಬಿಎಲ್ ಕಾರು ಲೋನ್**

ಕಾರು ಖರೀದಿ ಇದೀಗ ಸುಲಭ

ಹೊಸ ಕಾರುಗಳಿಗೆ
ಶೇ. 85 ರವರೆಗೆ ಸಾಲ ಸೌಲಭ್ಯ

ಸೆಕೆಂಡ್ ಹ್ಯಾಂಡ್ ಕಾರುಗಳಿಗೂ
ಸಾಲದ ಸೌಲಭ್ಯವಿದೆ

**ಕರ್ಣಾಟಕ ಬ್ಯಾಂಕ್ ಲಿ.**

Published by B. Narayana Somayaji on behalf of Koota Maha Jagattu Saligrama (R.) at Bantwal
Editor: Dr. Krishnamoorthy Nitalapura. ₹. 7.50

॥ ಶ್ರೀಮದ್ ಯೋಗಾನಂದ ಗುರುನರಸಿಂಹಾಯ ನಮಃ ॥

# ಕೂಟಬಂಧು

ಅಧ್ಯಾತ್ಮಿಕ, ಸಾಂಸ್ಕೃತಿಕ, ಹಾಗೂ ಸಾಮಾಜಿಕ ಔನತ್ಯಕ್ಕೆ ಮೀಸಲಾದ ದ್ವೈಮಾಸಿಕ.
ಬ್ರಾಹ್ಮಣ ಸಮಾಜ ಬಾಂಧವರಲ್ಲಿ ಖಾಸಗಿ ಪ್ರಸಾರಕ್ಕಾಗಿ ಮಾತ್ರ.

ಸಂಪುಟ ೧೮ ಸಂಚಿಕೆ ೨ ಮಾರ್ಚ್ – ಎಪ್ರಿಲ್ 2013

**ಪ್ರಾರ್ಥನೆ**

## ಶ್ರೀ ನರಸಿಂಹ ಸಹಸ್ರನಾಮ ಸ್ತೋತ್ರ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

**ವ್ಯಾಲಯಜ್ಞೋಪವೀತಾಯ ವ್ಯಾಘ್ರದೇಹಾಯ ವೈ ನಮಃ ।**
**ವ್ಯಾಘ್ರಪಾದಾಯ ಚ ವ್ಯಾಘ್ರಕರ್ಮಣೇ ವ್ಯಾಪಕಾಯ ಚ ॥೨೬॥**

170 **ವ್ಯಾಲಯಜ್ಞೋಪವೀತಾಯ ನಮಃ :** ವ್ಯಡನ ಎಂದರೆ ಕೊಲ್ಲುವ ಯತ್ನ. ಅದನ್ನು ಹೊಂದಿದ ವ್ಯಾಡ ಅಥವಾ ಡ-ಲಗಳಿಗೆ ಅಭೇದವಿರುವುದರಿಂದ ವ್ಯಾಲ. ಎಂದರೆ ಸರ್ಪ. ಯೋಗಶಾಸ್ತ್ರದ ಅರ್ಥದಲ್ಲಿ ಕುಂಡಲಿನೀ. ಅದನ್ನೇ ಯಜ್ಞೋಪವೀತವಾಗಿ ಧರಿಸಿದವನು. ಅಂಥವನಿಗೆ ನಮಸ್ಕಾರ.

171 **ವ್ಯಾಘ್ರದೇಹಾಯ ನಮಃ :** ವ್ಯಾಘ್ರ ಎಂದರೆ ಹುಲಿ. ಹುಲಿಯಂತೆ ಭಯಂಕರ ದೇಹವನ್ನು ಹೊಂದಿದವನು ನರಸಿಂಹ. ಅವನಿಗೆ ನಮಸ್ಕಾರ.

172 **ವ್ಯಾಘ್ರಪಾದಾಯ ನಮಃ** : ಹುಲಿಯ ಪಾದದಂತೆ ಕಾಲುಗಳನ್ನು ಹೊಂದಿದವನು. ಪಾದವು ಚಲನೆಗೆ ಸಂಕೇತ ಹಾಗೂ ನಿಲ್ಲಲು ಆಧಾರ. ಹುಲಿಯಂತೆ ಗಂಭೀರವಾದ ಚಲನೆ ಹಾಗೂ ನಿಲುಮೆಯುಳ್ಳವನು. ಅವನಿಗೆ ನಮಸ್ಕಾರ.

173 **ವ್ಯಾಘ್ರಕರ್ಮಣೇ ನಮಃ :** ವ್ಯಾಘ್ರದಂತೆ ಕ್ರೌರ್ಯ, ಶೌರ್ಯ ಹಾಗೂ ಗಾಂಭೀರ್ಯದ ಕರ್ಮಗಳನ್ನು ಮಾಡುವವನು. ಅಂಥವನಿಗೆ ನಮಸ್ಕಾರ.

174 **ವ್ಯಾಪಕಾಯ ನಮಃ :** ವ್ಯಾಪಕ ಎಂದರೆ ಹಬ್ಬಿಕೊಂಡಿರುವವನು. ಪರಮಾತ್ಮನು ಅಣು, ರೇಣು, ತೃಣ, ಕಾಷ್ಠವನ್ನೂ ಬಿಡದೆ ಎಲ್ಲೆಲ್ಲೂ ಹಬ್ಬಿಕೊಂಡಿದ್ದಾನೆ. ಎಲ್ಲದರ ಒಳಗೂ, ಹೊರಗೂ ಹರಡಿಕೊಂಡಿದ್ದಾನೆ. ಅವನಿಲ್ಲದ ಜಾಗವೇ ಇಲ್ಲ. ಆದ್ದರಿಂದಲೇ, ಯಾರೂ ಇಲ್ಲದಲ್ಲಿ ತಿನ್ನಬೇಕೆಂದು ಗುರುಗಳು ಕೊಟ್ಟ ಬಾಳೆಯ ಹಣ್ಣನ್ನು ಕನಕದಾಸರು ಮರುದಿನ ಗುರುಗಳಿಗೇ ಹಿಂತಿರುಗಿಸಿ, ಭಗವಂತ ಎಲ್ಲೆಡೆ ಇದ್ದಾನೆ. ಹಾಗಾಗಿ ಯಾರೂ ಇಲ್ಲದ ಜಾಗವೇ ಸಿಗಲಿಲ್ಲ ಎನ್ನುತ್ತಾರೆ. ಅಂತಹ ವ್ಯಾಪಕನಿಗೆ ನಮಸ್ಕಾರ.

**ವಿಕಟಾಸ್ಯಾಯ ವೀರ್ಯಾಯ ವಿಷ್ಟರಶ್ರವಸೇ ನಮಃ ।**
**ವಿಕೀರ್ಣನಖದಂಷ್ಟ್ರಾಯ ನಖದಂಷ್ಟ್ರಾಯುಧಾಯ ಚ॥೨೭॥**

**ಅಧ್ಯಕ್ಷರು :-**
ಶ್ರೀ ಪಿ. ವೆಂಕಟ್ರಾವ್,
ನಂ.243, 11ನೇ ಅಡ್ಡ ರಸ್ತೆ,
ಬಿ.ಇ.ಎಮ್.ಎಲ್. ಬಡಾವಣೆ, 1ನೇ ಹಂತ,
ಬಸವೇಶ್ವರ ನಗರ,
ಬೆಂಗಳೂರು – 560079.
ಮೊಬೈಲ್ : 09845186732.
ಈಮೈಲ್ : pvr9555@yahoo.com

**ಕಾರ್ಯದರ್ಶಿ :-**

ಶ್ರೀ ಜಿ. ರಾಮಕೃಷ್ಣ ಐತಾಳ,
'ಶ್ರಾವಣ' – ಗುಂಡ್ಮಿ,
ಅಂಚೆ : ಸಾಸ್ತಾನ – 576226.
ಉಡುಪಿ ತಾಲೂಕು ಹಾಗೂ ಜಿಲ್ಲೆ,
ಫೋನ್ : 0820-2564276.
ಮೊಬೈಲ್: 09343573922.
ಈಮೈಲ್: rg_aithal@rediffmail.com

**ಕೋಶಾಧಿಕಾರಿ :-**

ಶ್ರೀ ಕೆ. ತಾರಾನಾಥ ಹೊಳ್ಳ,
103, ವೀರಾ ಅಪಾರ್ಟ್‌ಮೆಂಟ್,
ಕೊಡಿಯಾಲ್ ಬೈಲ್ ಗುತ್ತು – ಪೂರ್ವ,
ಕೊಡಿಯಾಲ್‌ಬೈಲ್,
ಮಂಗಳೂರು – 575003.
ಫೋನ್ : 0824-2494479.
ಮೊಬೈಲ್:09449034479.

## ಖಾಯಂ ಪ್ರತಿನಿಧಿಗಳು

**ಮುಖ್ಯ ಕಾರ್ಯನಿರ್ವಹಣಾಧಿಕಾರಿ:-**
ಶ್ರೀ ಬಿ. ನಾರಾಯಣ ಸೋಮಯಾಜಿ,
ಕೂಟಬಂಧು ಟ್ರಸ್ಟ್ (ರಿ),
ಗಜಾನನ ಇಂಡಸ್ಟ್ರಿಯಲ್ ಎಂಟರ್‌ಪ್ರೈಸಸ್,
ಅಂಚೆ : ಜೋಡುಮಾರ್ಗ – 574 219.
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ.
ಮೊಬೈಲ್ :9448858868.
E-mail : narayana.somayaji@gmail.com

**ಗೌರವ ಸಂಪಾದಕರು:-**
ಶ್ರೀ ಡಾ|| ನಿಟಿಲಾಪುರ ಕೃಷ್ಣಮೂರ್ತಿ ಕಾರಂತ,
ಕೂಟಬಂಧು ಟ್ರಸ್ಟ್ (ರಿ),
"ಯೋಗಾನಂದ"
ಇಂದ್ರಾಣಿ ದೇವಸ್ಥಾನದ ಬಳಿ,
ಅಂಚೆ : ಉಡುಪಿ - 576 102.
Ph : 0820-2573443.
E-mail : nitilapurakm@yahoo.co.uk

ಶ್ರೀ ಡಾ|| ಕೆ. ಪ್ರಭಾಕರ ಹೊಳ್ಳ
ಕೆ. ಎನ್. ಎಚ್. ಹಾಸ್ಪಿಟಲ್
ಉಪ್ಪಳ – 671 322
ಕಾಸರಗೋಡು ಜಿಲ್ಲೆ.
ಮೊಬೈಲ್ : 09495895854.

**ನಾಮನಿರ್ದೇಶಕರು:-**
ಶ್ರೀ ಚಂದ್ರಶೇಖರ ಕಾರಂತ,
'ಸಂತೃಪ್ತಿ' 40, ಮೊದಲನೇ ಅಡ್ಡರಸ್ತೆ,
ಚೌಡಯ್ಯ ಬ್ಲಾಕ್, HMT ಲೇಔಟ್,
R.T. ನಗರ ಪೋಸ್ಟ್,
ಬೆಂಗಳೂರು - 560 99032.
ಫೋನ್ : 080-23439750.
ಮೊಬೈಲ್: 09448686862.

ಶ್ರೀ ಬಿ. ವೆಂಕಟರಮಣ ರಾವ್,
C/o ನಂದನ ಟಯರ್ಸ್,
C-8 ಕೈಗರಿಕಾ ಘಟಕ, ಕಾಳಬೆಟ್ಟು, ಲ್ಯಾಲ,
ಅಂಚೆ:ಲ್ಯಾಲ– 574 040.
ಬೆಳ್ತಂಗಡಿ ತಾಲೂಕು.
ಮೊಬೈಲ್ : 09448889057/ 09481381438.

ಶ್ರೀ ಶಿರಿಯ ಸುಬ್ರಾಯ ಕಾರಂತ,
S/o ವಾಸುದೇವ ಕಾರಂತ,
S. N. ದೇವಸ್ಥಾನದ ಹತ್ತಿರ, ಶಿರಿಯ,
ಪೋಸ್ಟ್ : ಶಿರಿಯ – 671 321.
ವೈಯಾ – ಕುಂಬ್ಳೆ,
ಕಾಸರಗೋಡು ಜಿಲ್ಲೆ.
ಫೋನ್ : 04998231945.
ಮೊಬೈಲ್:09497230766.

**ಸದಸ್ಯರು :-**
ಶ್ರೀ ಪಿ. ಎನ್. ಶ್ರೀನಿವಾಸ ಹೆಬ್ಬಾರ್,
452, III Cross,
ವಿಲ್ಸನ್ ಗಾರ್ಡನ್,
ಬೆಂಗಳೂರು.
ಮೊಬೈಲ್ : 09945421106.

ಶ್ರೀ ಶಂಕರನಾರಾಯಣ ರಾವ್,
ಶಿಕ್ಷಕರು, ಪುತ್ರೊಟಿಬೈಲು ಮನೆ,
ಅಂಚೆ : ನರಿಕೊಂಬು – 574 231.
ಬಂಟ್ವಾಳ ತಾಲೂಕು,
ಮೊಬೈಲ್ : 09449081024.

175 **ವಿಕಟಾಸ್ಯಾಯ ನಮಃ :** ವಿಕಟ ಎಂದರೆ ಅಸಹಜ. ಸಹಜವಲ್ಲದ್ದು ಹಾಸ್ಯಕ್ಕೆ ಅಥವಾ ಭೀತಿಗೆ ಕಾರಣವಾಗುತ್ತದೆ. ಮನುಷ್ಯನ ದೇಹಕ್ಕೆ ಸಿಂಹದ ಮುಖವು ಸಹಜವಲ್ಲ. ಹೀಗೆ ವಿಕಟವಾದ ಮುಖವುಳ್ಳವನಿಗೆ ನಮಸ್ಕಾರ.

176 **ವೀರ್ಯಾಯ ನಮಃ :** ವೀರ್ಯ ಎಂದರೆ ಸಾಮರ್ಥ್ಯಕ್ಕೆ, ಸೃಷ್ಟಿಗೆ ಬೇಕಾದ ಪುರುಷತ್ವದ ಶಕ್ತಿ. ಭಗವಂತನು ಸೃಷ್ಟಿಗೋಸ್ಕರ ಪುರುಷ ಹಾಗೂ ಮಾಯೆಯ ರೂಪದಲ್ಲಿ ಆವಿರ್ಭವಿಸುತ್ತಾನೆ. ಪುರುಷನಾಗಿ ವೀರ್ಯವನ್ನು ಮಾಯಾ ಸ್ತ್ರೀತ್ವದಲ್ಲಿ ಇಡುತ್ತಾನೆ ಮತ್ತು ಸೃಷ್ಟಿಯನ್ನು ವೃದ್ಧಿ ಮಾಡುತ್ತಾನೆ. ಪುರುಷನಿಗೆ ವೀರ್ಯವೇ ಪುರುಷತ್ವ. ಅದನ್ನು ಹೊಂದಿದವನಿಗೆ ನಮಸ್ಕಾರ.

177 **ವಿಷ್ಟರಶ್ರವಸೇ ನಮಃ** : ವಿಷ್ಟರ ಎಂದರೆ ವಿಸ್ತಾರ. ಶ್ರವ ಎಂದರೆ ಕೀರ್ತಿ. ವಿಸ್ತಾರವಾದ ಕೀರ್ತಿಯುಳ್ಳವನಿಗೆ ನಮಸ್ಕಾರ.

178 **ವಿಕೀರ್ಣನಖದಂಷ್ಟ್ರಾಯ ನಮಃ :** ವಿಕೀರ್ಣ ಎಂದರೆ ಹಬ್ಬಿದ, ವಿಶಾಲವಾಗಿ ಹರಡಿದ. ನಖ ಎಂದರೆ ಉಗುರು. ದಂಷ್ಟ್ರ ಎಂದರೆ ಕೋರೆದಾಡೆ. ವಿಸ್ತೃತವಾಗಿ ಹರಡಿದ ಉಗುರು ಮತ್ತು ಕೋರೆದಾಡೆಯುಳ್ಳವನಿಗೆ ನಮಸ್ಕಾರ.

179 **ನಖದಂಷ್ಟ್ರಾಯುಧಾಯ ನಮಃ :** ಉಗುರುಗಳು ಮತ್ತು ಕೋರೆದಾಡೆಗಳೇ ಆಯುಧಗಳಾಗಿ ಉಳ್ಳವನು ನಖದಂಷ್ಟ್ರಾಯುಧ. ಮುಪ್ಪು-ಸಾವು ಇಲ್ಲದ ಅಜರಾಮರತ್ವವನ್ನು ನೀಡಲು ಸಾಧ್ಯವಿಲ್ಲವೆಂದು ಬ್ರಹ್ಮದೇವನು ಹೇಳಿದಾಗ, ಹಿರಣ್ಯಕಶಿಪು ಕ್ಲಿಷ್ಟವಾದ ವರವನ್ನು ಕೇಳಿ, ಯಮನನ್ನೋ, ದೇವರನ್ನೋ ಪೇಚಿಗೆ ಸಿಕ್ಕಿಸಿ, ಆ ಮೂಲಕ ಮರಣವನ್ನು ತಪ್ಪಿಸಿಕೊಳ್ಳುವ ಉಪಾಯ ಮಾಡುತ್ತಾನೆ. ಮನುಷ್ಯರಿಂದಲೂ ಪ್ರಾಣಿಗಳಿಂದಲೂ ಸಾವು ಬರಬಾರದು, ಆಯುಧದಿಂದಲೂ ಮರಣ ಉಂಟಾಗಬಾರದು, ಆಯುಧವಿಲ್ಲದೆಯೂ ಮರಣ ಬರಬಾರದು – ಎಂದೆಲ್ಲ ಬುದ್ಧಿವಂತಿಕೆಯ ಬೇಡಿಕೆ ಮುಂದಿಟ್ಟು ತನ್ನ ಚಾತುರ್ಯದಿಂದ ಸೃಷ್ಟಿಕರ್ತನನ್ನೇ ಸೋಲಿಸಿಬಿಟ್ಟುದಾಗಿ ಬೀಗುತ್ತಾನೆ. ಇದರಿಂದಾಗಿ ಅವನ ವಧೆಗೆ ಭಗವಂತನು ಮನುಷ್ಯನೂ ಅಲ್ಲದ, ಪ್ರಾಣಿಯೂ ಅಲ್ಲದ ಅದ್ಭುತ ನರಸಿಂಹಾವತಾರ ತಾಳಬೇಕಾಯಿತು. ನರಸಿಂಹನು ಆಯುಧವೂ ಅಲ್ಲದ, ಆಯುಧವಲ್ಲದ್ದೂ ಅಲ್ಲದ ಉಗುರುಗಳು ಮತ್ತು ಕೋರೆಹಲ್ಲುಗಳಿಂದ ರಾಕ್ಷಸನ ಹೊಟ್ಟೆಯನ್ನು ಸೀಳಿ, ಕರುಳನ್ನು ಹೊರತೆಗೆದು, ಕಚ್ಚಿ ಕೊಲ್ಲುತ್ತಾನೆ.

ಉಗುರುಗಳು ಮತ್ತು ಕೋರೆಹಲ್ಲುಗಳು ಆಯುಧಗಳಲ್ಲ. ಆಯುಧಗಳಿಂದಾಗುವ ಸೀಳುವಿಕೆ ಹಾಗೂ ಚಿವುಟುವಿಕೆಯನ್ನು ಉಗುರುಗಳಿಂದ ಮಾಡಬಹುದು. ಹಾಗೆಯೇ, ಹಲ್ಲುಗಳಿಂದ ಕಚ್ಚಿ ತುಂಡರಿಸಬಹುದು. ಹೀಗೆ ಉಗುರುಗಳನ್ನು ಮತ್ತು ಕೋರೆದಾಡೆಗಳನ್ನೇ ಆಯುಧಗಳನ್ನಾಗಿ ಹೊಂದಿದ ನರಸಿಂಹನಿಗೆ ನಮಸ್ಕಾರ.

**ವಿಶ್ವಕ್ಸೇನಾಯ ಸೇನಾನ್ಯೈ ವಿಜ್ವಲಾಯ ಬಲಾಯ ಚ ।**
**ವಿರೂಪಾಕ್ಷಾಯ ವೀರಾಯ ವಿಶೇಷಜ್ಞಾಯ ಸಾಕ್ಷಿಣೇ ॥೨೮॥**

180 ವಿಶ್ವಕ್ಸೇನಾಯ ನಮಃ : ವಿಶ್ವಕ್ ಎಂದರೆ ವಿಶ್ವವ್ಯಾಪಿಯಾದ ಸೇನೆಯುಳ್ಳವನು. (ವಿಶ್ವವ್ಯಾಪಿನೀಸೇನಾ ಯಸ್ಯಾಸೌ). ಸಮರಕ್ಕೆ ಬರುತ್ತಿರುವ ಇವನನ್ನು ನೋಡಿ, ದೈತ್ಯರ

ಸೇನೆಗಳು ಎಲ್ಲ ದಿಕ್ಕಿಗೆ ಪಲಾಯನ ಮಾಡುವುದರಿಂದ ಇವನು ವಿಶ್ವಕ್ಸೇನ. (ವಿಷು ಸರ್ವತಃ ಅಂಚಂತಿ ಪಲಾಯಂತೇ ಯಸ್ಯ ಪ್ರಯಾಣೋದ್ಯೋಗೇ ದೈತ್ಯಾನಾಂ ಸೇನಾಃ ಇತಿ ವಿಷ್ವಕ್ಸೇನಃ) ಹಾಗೆಯೇ, ಯಾರ ಸೇನೆ ಎಲ್ಲೆಡೆ ಪೂಜಿಸಲ್ಪಡುವುದೋ ಅವನು ವಿಶ್ವಕ್ಸೇನ. (ವಿಷು ಸರ್ವತಃ ಅಂಚ್ಯತೇ ಪೂಜ್ಯತೇ ಸೇನಾ ಯಸ್ಯ ಇತಿ) (ಅಂಚು = ಗತಿ ಪೂಜನಯೋಃ). ವಿಷ್ಣುವಿನ ನಿರ್ಮಾಲ್ಯ ದೇವತೆ ವಿಶ್ವಕ್ಸೇನ ಎಂಬುದಾಗಿ ತಾಂತ್ರಿಕ ವಿಚಾರ. ಅವತಾರಗಳಿಗೆ ಕೂಡ ವಿಶ್ವಕ್ಸೇನನೇ ನಿರ್ಮಾಲ್ಯದೇವತೆ. ಅಂತಹ ವಿಶ್ವಕ್ಸೇನನಿಗೆ ನಮಸ್ಕಾರ.

181 **ಸೇನಾನ್ಯೈ ನಮಃ** : ಸೇನಾನಿ ಎಂದರೆ ಸೇನಾಪತಿ. ಜೀವ ಸಮೂಹಗಳದ್ದೇ ಒಂದು ವಿಸ್ತಾರವಾದ ಸೇನೆ. ಅದರ ಅಧಿಪತಿಗೆ ನಮಸ್ಕಾರ.

182 **ವಿಜ್ವಲಾಯ ನಮಃ** : ಜ್ವಲ ಎಂದರೆ ಉರಿಯುವ ಅಥವಾ ಪ್ರಕಾಶಮಾನವಾದ. ಪ್ರಪಂಚದ ಉರಿಯುವ ವಸ್ತುಗಳಲ್ಲಿ ಉತ್ತಮವಾದವನೆಂದರೆ ಸೂರ್ಯ. ಆ ಸೂರ್ಯನಿಗೇ ಪ್ರಕಾಶವನ್ನು ನೀಡುವ ವಿಜ್ವಲನಿಗೆ ನಮಸ್ಕಾರ.

183 **ಬಲಾಯ ನಮಃ** : ಬಲ ಎಂದರೆ ಸಾಮರ್ಥ್ಯ. ದೇಹ ಬಲ, ಮನೋಬಲ, ಬುದ್ಧಿ ಬಲ, ಜ್ಞಾನ ಬಲ, ಧ್ಯಾನಬಲ, ದೈವ ಬಲಗಳು ಬಲದ ವಿಭಾಗಗಳು. ನಮ್ಮ ಶರೀರ, ಮನಸ್ಸು ಮತ್ತು ಮಾತುಗಳ ಬಲಗಳಿಂದ ನಾವು ಅಹಂಕಾರ ಪಡುತ್ತೇವೆ. ಅಹಂಕಾರವನ್ನು ಬಿಟ್ಟು, ಈ ಬಲಗಳಿಗೆಲ್ಲ ಭಗವಂತನೇ ಕಾರಣ ಎಂಬ ತಿಳುವಳಿಕೆ ನಮ್ಮಲ್ಲಿ ಮೂಡಿದಾಗ ಶ್ರೇಯಸ್ಸು ಉಂಟಾಗುತ್ತದೆ. ತನ್ನ ಬುದ್ಧಿಬಲದ ಬಗ್ಗೆ ಭಾರೀ ಅಹಂಕಾರವಿತ್ತು ಹಿರಣ್ಯಕಶಿಪುವಿಗೆ. ತನ್ನ ಬುದ್ಧಿಬಲದಿಂದ ಬ್ರಹ್ಮನನ್ನೇ ಸೋಲಿಸಿ ಬಿಟ್ಟೆ ಎಂದು ಹೆಮ್ಮೆ ಪಟ್ಟಿದ್ದ. ತಾನು ಹಗಲು ಸಾಯಬಾರದು, ರಾತ್ರಿಯೂ ಸಾಯಬಾರದು, ಒಳಗೂ ಸಾಯಬಾರದು, ಹೊರಗೂ ಸಾಯಬಾರದು, ಮೇಲೂ ಸಾಯಬಾರದು, ಕೆಳಗೂ ಸಾಯಬಾರದು, ಮನುಷ್ಯರೂ ತನ್ನನ್ನು ಕೊಲ್ಲಬಾರದು, ಪ್ರಾಣಿಗಳೂ ಕೊಲ್ಲಬಾರದು, ಆಯುಧದಿಂದಲೂ ತನಗೆ ಸಾವು ಬಾರಬಾರದು, ಆಯುಧವಿಲ್ಲದೆಯೂ ಮರಣ ಬರಬಾರದು – ಎಂದೆಲ್ಲ ಬಹಳ ಬುದ್ಧಿವಂತಿಕೆಯ ಬೇಡಿಕೆಗಳನ್ನು ಮುಂದಿಟ್ಟಾಗ ಬ್ರಹ್ಮ 'ತಥಾಸ್ತು' ಎಂದು ಬಿಟ್ಟ. ಹಾಗಾಗಿ ತನಗಿನ್ನು ಮರಣ ಸಂಭವಿಸಲಾರದು. ಏಕೆಂದರೆ ತನ್ನ ಬುದ್ಧಿಬಲದಿಂದ ಹಾಕಿದ ಶರ್ತಗಳನ್ನು ಪೂರೈಸುವುದು ಅಸಾಧ್ಯವೆಂದೇ ಹಿರಣ್ಯಕಶಿಪು ಭಾವಿಸಿದ್ದ.

ಆದರೆ, ಭಗವಂತ ತನ್ನ ಅದ್ಭುತವಾದ ನರಸಿಂಹಾವತಾರದಲ್ಲಿ ದೈತ್ಯನ ಎಲ್ಲ ಶರತ್ತುಗಳನ್ನು ಪೂರೈಸಿ ಅವನನ್ನು ಕೊಲ್ಲುತ್ತಾನೆ – ಹಗಲೂ ಅಲ್ಲ, ರಾತ್ರಿಯೂ ಅಲ್ಲದ ಮುಸ್ಸಂಜೆ ಹೊತ್ತಿನಲ್ಲಿ, ಒಳಗೂ ಅಲ್ಲ, ಹೊರಗೂ ಅಲ್ಲದ ಹೊಸ್ತಿಲಲ್ಲಿ, ಮೇಲೂ ಅಲ್ಲ, ಕೆಳಗೂ ಅಲ್ಲದ ಅಂತರಾಳದಲ್ಲಿ ತನ್ನ ತೊಡೆಗಳ ಮೇಲೆ, ಮನುಷ್ಯನೂ ಅಲ್ಲ, ಪ್ರಾಣಿಯೂ ಅಲ್ಲದ ನರಸಿಂಹನು ಆಯುಧವೂ ಅಲ್ಲ, ಆಯುಧವಲ್ಲದೆಯೂ ಅಲ್ಲದ ತನ್ನ ಕೈಯ ಉಗುರುಗಳಿಂದ ರಾಕ್ಷಸನ ಹೊಟ್ಟೆಯನ್ನು ಸೀಳಿ ಅವನನ್ನು ವಧಿಸುತ್ತಾನೆ. ಆದ್ದರಿಂದ ದೇಹಬಲ, ಬುದ್ಧಿಬಲಗಳಿಗಿಂತ ದೈವಬಲವೇ ಮೇಲು ಎಂಬುದು ಸಾಬೀತಾಗುತ್ತದೆ. ಅಂತಹ ಬಲಸ್ವರೂಪನಿಗೆ ನಮಸ್ಕಾರ.

184 **ವಿರೂಪಾಕ್ಷಾಯ ನಮಃ** : ಎರಡು ಕಣ್ಣುಗಳಿರುವುದು ಸುರೂಪ. ಮೂರು ಕಣ್ಣುಗಳಿದ್ದರೆ ವಿರೂಪ. ಶಿವನಂತೆಯೇ ಮೂರನೆಯದಾದ ಹಣೆಗಣ್ಣನ್ನು ಹೊಂದಿದ ನರಸಿಂಹನು

ವಿರೂಪಾಕ್ಷ. ಅವನಿಗೆ ನಮಸ್ಕಾರ.

185 **ವೀರಾಯ ನಮಃ** : 'ಉತ್ಸಾಹವರ್ಧನೋ ವೀರಃ' (ಅಮರ 1-221) ಉತ್ಸಾಹವನ್ನು ಹೆಚ್ಚಿಸುವಂತಹದು ವೀರರಸ. ಅಂತಹ ವೀರರಸವನ್ನು ಹೊಂದಿದವನು ಸ್ವಯಂ ವೀರ. 'ಶೂರೋ ವೀರಶ್ಚ ವಿಕ್ರಾಂತಃ' (ಅಮರ 2-542). ಎಂತಹ ಶತ್ರುವಿನೊಡನೆಯೂ ಹೋರಾಡಿ ಗೆಲ್ಲುವವನು ವೀರ. ಅವನಿಗೆ ಧೈರ್ಯ, ಶಕ್ತಿ, ಬುದ್ಧಿವಂತಿಕೆ ಎಲ್ಲ ಬೇಕು. ಒಂದು ಸಾವಿರ ದಿವ್ಯವರ್ಷಗಳ ಕಾಲ ಹಿರಣ್ಯಕಶಿಪುವಿನೊಂದಿಗೆ ಘೋರವಾದ ದ್ವಂದ್ವ ಯುದ್ಧವನ್ನು ಮಾಡಿ ಗೆದ್ದ ನರಸಿಂಹನೇ ವೀರ. ಅವನಿಗೆ ನಮಸ್ಕಾರ.

186 **ವಿಶೇಷಜ್ಞಾಯ ನಮಃ** : ವಿಶೇಷಜ್ಞ ಎಂದರೆ ವಿಶೇಷವನ್ನು ತಿಳಿದವನು. ಪ್ರಪಂಚದಲ್ಲಿ ಸೃಷ್ಟಿ, ಸ್ಥಿತಿ, ಲಯಗಳು ನಿರಂತರವಾಗಿ ನಡೆಯುತ್ತಿರುವ ರಹಸ್ಯವೇ ವಿಶೇಷ. ಅದನ್ನು ಬಲ್ಲ ವಿಶೇಷಜ್ಞನಿಗೆ ನಮಸ್ಕಾರ.

187 **ಸಾಕ್ಷಿಣೇ ನಮಃ** : ಸಕಲ ಚರಾಚರಗಳಲ್ಲಿ ಅಂತರ್ಗತನಾಗಿದ್ದುಕೊಂಡು ಎಚ್ಚರದಿಂದ ಎಲ್ಲ ವ್ಯವಹಾರಗಳನ್ನು ನೋಡುತ್ತಿರುವವನು ಸಾಕ್ಷಿ. ಅವನಿಗೆ ನಮಸ್ಕಾರ.

**ವೀತಶೋಕಾಯ ವಿಸ್ತೀರ್ಣವದನಾಯ ನಮೋ ನಮಃ ।**
**ವಿಧಾನಾಯ ವಿಧೇಯಾಯ ವಿಜಯಾಯ ಜಯಾಯ ಚ ॥29॥**

188 **ವೀತಶೋಕಾಯ ನಮಃ** : ಶೋಕ ಎಂದರೆ ದುಃಖ. ವೀತಶೋಕ ಎಂದರೆ ದುಃಖವಿಲ್ಲದವ, ದುಃಖವನ್ನು ದಾಟಿದವ. ಮೋಹ, ದುಃಖಾದಿಗಳಿಂದ ಅಸ್ಪೃಷ್ಟ ಎಂದರ್ಥ. ಅಂಥವನಿಗೆ ನಮಸ್ಕಾರ.

189 **ವಿಸ್ತೀರ್ಣವದನಾಯ ನಮಃ** : ವಿಸ್ತೀರ್ಣ ಎಂದರೆ ಅಗಲವಾದ, ವದನ ಎಂದರೆ ಮುಖ. (ವಿಸ್ತೀರ್ಣಂ ವದನಂ ಯಸ್ಯ ಸಃ). ವಿಸ್ತೀರ್ಣವದನ ಎಂದರೆ ಅಗಲವಾದ ಮುಖವುಳ್ಳವನು. ಅವನಿಗೆ ನಮಸ್ಕಾರ.

190 **ವಿಧಾನಾಯ ನಮಃ** : ವಿಧಾನ ಎಂದರೆ ಯಾವುದನ್ನಾದರೂ ಮಾಡುವ ರೀತಿ (ವಿಧೀಯತೇ ಅನೇನ ಇತಿ ವಿಧಾನಂ). ಯಾವುದಾದ ಮೇಲೆ ಯಾವುದನ್ನು ಮಾಡಬೇಕು ಎನ್ನುವ ಕ್ರಮ. ಅದೇ ಶಾಸ್ತ್ರ. ಶಾಸ್ತ್ರ ಎಂದರೆ ಭಗವಂತನ ಆಜ್ಞಾ ರೂಪದಲ್ಲಿರುವ ಶ್ರುತಿ ಮತ್ತು ಸ್ಮೃತಿಗಳು –

**ಶ್ರುತಿಸ್ಮೃತೀ ಮಮೈವಾಜ್ಞೇ ಯಸ್ತೇ ಉಲ್ಲಂಘ್ಯ ವರ್ತತೇ ।**
**ಆಜ್ಞಾಭಂಗೀ ಮಮ ದ್ರೋಹೀ ಮಮ ಭಕ್ತೋಽಪಿ ನ ಪ್ರಿಯಃ ॥**

ವೇದಗಳು ಮತ್ತು ಸ್ಮೃತಿಗಳು ನನ್ನದೇ ಆಜ್ಞೆಗಳು. ಅವೆರಡನ್ನು ಯಾರು ಉಲ್ಲಂಘಿಸುತ್ತಾನೋ ಅವನು ನನ್ನ ಆಜ್ಞೆಯನ್ನು ಭಂಗಗೊಳಿಸಿ, ನನಗೆ ದ್ರೋಹಿ ಆಗುತ್ತಾನೆ. ಅವನು ನನ್ನ ಭಕ್ತನೇ ಆಗಿದ್ದರೂ ನನಗೆ ಪ್ರಿಯನಲ್ಲ.

ಯಾರ ಆಜ್ಞೆಯ ರೂಪದಲ್ಲಿ ವಿಧಾನ ಇದೆಯೋ ಅವನಿಗೂ ವಿಧಾನ ಎಂದೇ ಹೆಸರು. ಅವನಿಗೆ ನಮಸ್ಕಾರ.

191 **ವಿಧೇಯಾಯ ನಮಃ** : ವಿಧೇಯ ಎಂದರೆ ಯಾವುದಾದರೂ ಒಂದು ನಿಬಂಧನೆಗೆ ಗೌರವ ಕೊಟ್ಟು ನಡೆಯುವವ. ಶಿಷ್ಯನು ಗುರುವಿಗೆ ವಿಧೇಯ. ಭಗವಂತ ಯಾರಿಗೆ ವಿಧೇಯ? ತನ್ನದೇ ಆಜ್ಞೆ, ತನ್ನ ಸಂಕಲ್ಪ, ಇತರ ದೇವತೆಗಳು ನೀಡಿದ ವರಗಳಿಗೆ ಭಗವಂತ ವಿಧೇಯನಾಗಿ

ಇರುತ್ತಾನೆ. ಹಿರಣ್ಯಕಶಿಪುವಿಗೆ ಬ್ರಹ್ಮನು ನೀಡಿದ ವರಕ್ಕೆ ವಿಧೇಯನಾಗಿ ಅದ್ಭುತವಾದ ನರಸಿಂಹರೂಪವನ್ನು ಧರಿಸಬೇಕಾಯಿತು. ಅಂತಹ ವಿಧೇಯನಿಗೆ ನಮಸ್ಕಾರ.

192 **ವಿಜಯಾಯ ನಮಃ** : ಜಯ ಎಂದರೆ ಗೆಲುವು. ವಿಜಯ ಎಂದರೆ ವಿಶೇಷವಾದ ಗೆಲುವುಳ್ಳವನು. ತನ್ನ ಅಂಶದಿಂದ ವೈಕುಂಠದ ದ್ವಾರಪಾಲಕನಾಗಿ 'ವಿಜಯ' ಎಂಬ ಹೆಸರಿನಿಂದ ಇದ್ದವನು. ಅಂತಹ ವಿಜಯನಿಗೆ ನಮಸ್ಕಾರ.

193 **ಜಯಾಯ ನಮಃ** : ಜಯ ಎಂದರೆ ಗೆಲುವು. ಪರಮಾತ್ಮನು ಸದಾ ಗೆಲ್ಲುವವನೇ ಆದ್ದರಿಂದ ಜಯ. ತನ್ನ ಅಂಶದಿಂದ ವೈಕುಂಠದ ಇನ್ನೊಬ್ಬ ದ್ವಾರಪಾಲಕನಾಗಿ 'ಜಯ' ಎಂಬ ಹೆಸರಿಂದ ಇದ್ದವನು. ವೈಕುಂಠದಲ್ಲಿ ಒಮ್ಮೆ ಸನಕಾದಿ ಮುನಿಗಳನ್ನು ಪ್ರವೇಶಿಸಲು ಬಿಡದೆ, ದ್ವಾರಪಾಲಕರಾದ ಜಯ-ವಿಜಯರು ಶಾಪಕ್ಕೆ ಒಳಗಾಗುತ್ತಾರೆ. ಭೂಮಿಯಲ್ಲಿ ಜನಿಸಬೇಕೆಂಬ ಶಾಪಕ್ಕೆ ಭಕ್ತರಾಗಿ ಏಳು ಜನ್ಮ ಅಥವಾ ದುಷ್ಟರಾಗಿ ಮೂರು ಜನ್ಮ ಎಂಬ ಆಯ್ಕೆಯನ್ನು ವಿಷ್ಣು ಮುಂದಿಟ್ಟಾಗ, ಹಿರಣ್ಯಕಶಿಪು-ಹಿರಣ್ಯಾಕ್ಷ, ರಾವಣ-ಕುಂಭಕರ್ಣ ಮತ್ತು ಶಿಶುಪಾಲ-ದಂತವಕ್ತ್ರ ಎಂಬ ದುಷ್ಟ ಜನ್ಮವನ್ನೇ ಆಯ್ಕೆ ಮಾಡಿ, ಹರಿಯಿಂದಲೇ ಸಂಹರಿಸಲ್ಪಟ್ಟು ಮೋಕ್ಷವನ್ನು ಪಡೆದರು.
ಜಯನಿಗೆ ನಮಸ್ಕಾರ

(ಮುಂದುವರಿಯುವುದು)


## ಬ್ರಾಹ್ಮಣ್ಯಕ್ಕೆ ಧರ್ಮಶಾಸ್ತ್ರವೇ ಪ್ರಮಾಣ

"ಒಂದು ಕಾದಂಬರಿಯಲ್ಲಿ ಕ್ಷಯ ರೋಗಿಯ ತುಂಬ ವಿವರ ಬಂದರೂ, ಕ್ಷಯ ರೋಗದ ಬಗ್ಗೆ ಜ್ಞಾನ ಪಡೆಯಲು ಆ ಕಾದಂಬರಿಯು ನಮಗೆ ಆಧಾರವಾಗದಷ್ಟೆ ! ಕ್ಷಯರೋಗವು ವೈದ್ಯಕೀಯ ವಿಚಾರವಾಗಿದ್ದು ಅದರ ಸರಿಯಾದ ಜ್ಞಾನಕ್ಕೆ ವೈದ್ಯಕೀಯ ಶಾಸ್ತ್ರದ ಪುಸ್ತಕ ಮಾತ್ರವೇ ಸರಿಯಾದ ಆಧಾರವಾದೀತು. ಅಂತೆಯೇ ವಿಜ್ಞಾನದ ಪದಗಳಿಗೆ ವಿಜ್ಞಾನಶಾಸ್ತ್ರ, ಇಂಜಿನಿಯರಿಂಗ್ ಪದಗಳಿಗೆ ಇಂಜಿನಿಯರಿಂಗ್ ಶಾಸ್ತ್ರ, ಇವು ಮುಂತಾಗಿ ಮಾತ್ರವೇ ಯುಕ್ತವಾದ ಪ್ರಮಾಣಗಳು ಎಂಬುದು ಬಲ್ಲವರೆಲ್ಲರೂ ಒಪ್ಪಬೇಕಾದುದು. ಬ್ರಾಹ್ಮಣ ಎಂಬ ಪದವು ಲೌಕಿಕ ಕಾನೂನುಗಳಲ್ಲಿ, ರಾಜಕೀಯ ಪ್ರಕಟಣೆಗಳಲ್ಲಿ, ಪತ್ರಿಕೆಗಳಲ್ಲಿ ಎಲ್ಲ ಬರುತ್ತದೆ ನಿಜ. ಆದರೆ ಅದು ಧರ್ಮಶಾಸ್ತ್ರದ ಒಂದು ಪದ. ಧರ್ಮಶಾಸ್ತ್ರ ಮಾತ್ರವೇ ಅದರ ವಿಚಾರ. ತಪ್ಪಿಲ್ಲದ ಮತ್ತು ಧಾರಾಳವಾದ ಜ್ಞಾನವನ್ನು ನಮಗೆ ಕೊಡಲಾಗುವುದು."

**ಕೋ. ವಾ. ಕಾರಂತ**

ಅಧ್ಯಕ್ಷರ ಸಂದೇಶ

# ಯುಗಾದಿಯ ಶುಭಾಶಯಗಳು !



ಶ್ರೀ ಗುರುಭ್ಯೋ ನಮಃ । ಮೊನ್ನೆ ಮಾರ್ಚ್ 31ರಂದು ನಡೆದ ಕೂಟ ಮಹಾಜಗತ್ತಿನ ಕಾರ್ಯಸಮಿತಿಯ ಸಭೆಯಲ್ಲಿ ಕೂಟಬಂಧು ಪತ್ರಿಕೆಯ ಪಂಚಾಂಗ ಸಂಚಿಕೆಯ ಹೆಚ್ಚುವರಿ ಪ್ರತಿಗಳನ್ನು ಪ್ರತಿಯೊಂದು ಅಂಗಸಂಸ್ಥೆಗೆ ಕೂಡ ಸದಸ್ಯತ್ವದ ದಾಮಾಶಯದಲ್ಲಿ ಉಚಿತವಾಗಿ ನೀಡಿದ್ದೇವೆ. ಹೀಗೆಯೇ ಮುಂದಿನ ಸಂಚಿಕೆಗಳನ್ನು ಕೂಡ ಒದಗಿಸಲಾಗುವುದು. ಅವುಗಳನ್ನು ಎಲ್ಲ ಅಂಗಸಂಸ್ಥೆಗಳವರು ಕೂಡ ಕೂಟಬಂಧು ಸದಸ್ಯತಾ ಅಭಿಯಾನಕ್ಕೆ ಉಪಯೋಗಿಸಬೇಕೆಂದು ವಿನಂತಿ.

ಕರ್ನಾಟಕ ಬ್ಯಾಂಕಿನವರು ಇಡೀ ವರ್ಷದ ಜಾಹೀರಾತು ನೀಡಿ ರೂ. 75 ಸಾವಿರವನ್ನು ಒದಗಿಸಿದ್ದರಿಂದ ಈ ರೀತಿ ಹೆಚ್ಚುವರಿ ಪ್ರತಿಗಳನ್ನು ಅಂಗಸಂಸ್ಥೆಗಳಿಗೆ ನೀಡಲು ಸಾಧ್ಯವಾಯಿತು. ಅದಕ್ಕಾಗಿ ಕರ್ನಾಟಕ ಬ್ಯಾಂಕಿಗೆ ಕೃತಜ್ಞತೆಗಳು.


ಸಾಲಿಗ್ರಾಮದಲ್ಲಿ ಈಗಿರುವ ಕೂಟಬಂಧು ಭವನದ ಸ್ಥಳದಲ್ಲಿ ಹೊಸತಾಗಿ ನೆಲಮಟ್ಟದ ಅಂತಸ್ತಿನಲ್ಲಿ ಒಂದು ಸಭಾಭವನವನ್ನು ಹಾಗೂ ಮೊದಲ ಅಂತಸ್ತಿನಲ್ಲಿ ಸುಸಜ್ಜಿತವಾದ ವಸತಿಕೋಣೆಗಳನ್ನು ಸುಮಾರು 1.36 ಕೋಟಿ ರೂಪಾಯಿಯ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಮಹತ್ಕಾರ್ಯದಲ್ಲಿ ಮತ್ತು ದೇವಸ್ಥಾನದ ಅಭಿವೃದ್ಧಿಯಲ್ಲಿ ಎಲ್ಲ ಅಂಗಸಂಸ್ಥೆಗಳ ಕೂಟಬಂಧುಗಳು ಉದಾರವಾಗಿ ದೇಣಿಗೆ ನೀಡಿ ಗುರುನರಸಿಂಹನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷೆ.

ಮುಂದಿನ ಮೇ 23ರಂದು ನರಸಿಂಹ ಜಯಂತಿಯನ್ನು ಎಲ್ಲ ಅಂಗಸಂಸ್ಥೆಗಳು ವಿಜೃಂಭಣೆಯಿಂದ ಆಚರಿಸಬೇಕೆಂದು ಸೂಚನೆ. ಈ ವರ್ಷದ ನರಸಿಂಹ ಜಯಂತಿಯಿಂದ ಮುಂದಿನ ವರ್ಷದ ನರಸಿಂಹ ಜಯಂತಿಯ ತನಕ ಕೂಟ ಬಂಧುಗಳ ಧಾರ್ಮಿಕ ಜಾಗೃತಿಯನ್ನು ವ್ಯಕ್ತಿಗತವಾಗಿ, ಅಂಗಸಂಸ್ಥೆಗಳಲ್ಲಿ ಸಾಮೂಹಿಕವಾಗಿ ಹಾಗೂ ಗುರುಸ್ಥಾನದಲ್ಲಿ ಸಾಧಿಸುವ ಮಹತ್ವಾಕಾಂಕ್ಷೆಯ ಯೋಜನೆಯಲ್ಲಿ ಎಲ್ಲರೂ ತೊಡಗಿಸಿಕೊಳ್ಳುವಿರಾಗಿ ಭಾವಿಸುತ್ತೇನೆ. ಈ ಕುರಿತು ವಿವರವನ್ನೊಳಗೊಂಡ ಪುಸ್ತಿಕೆಯನ್ನು ಎಲ್ಲ ಅಂಗಸಂಸ್ಥೆಗಳಿಗೆ ಶೀಘ್ರದಲ್ಲೇ ಕಳುಹಿಸಿಕೊಡಲಾಗುವುದು.

**– ಪಿ. ವೆಂಕಟ್ರಾವ್**

ಸಂಪಾದಕೀಯ

# ಸಮಾಜ ಸುಧಾರಣೆಯಲ್ಲಿ ಬುದ್ಧಿಜೀವಿಗಳ ಪಾತ್ರ



ಸಮಾಜವು ಎಲ್ಲರಿಗೆ ಸಂತೋಷಕರ ಹಾಗೂ ಉತ್ತಮ ಜೀವನವನ್ನು ಒದಗಿಸಬೇಕಾದರೆ, ಅದರಲ್ಲಿ ಬುದ್ಧಿಜೀವಿಗಳಿಗೆ ಏನಾದರೂ ಪಾತ್ರ ಇದೆಯೆ? ಅಥವಾ ಸಮಾಜವು ತನ್ನಷ್ಟಕ್ಕೇ ಸುಧಾರಣೆ ಹೊಂದುವುದೆ? ಈ ಪ್ರಶ್ನೆಗಳು ಬಹು ಮುಖ್ಯವಾಗಿವೆ.

ಚರ್ಚಿಸುವ ಮುನ್ನ ಬುದ್ಧಿಜೀವಿ ಎಂಬ ಶಬ್ದದ ಅರ್ಥವನ್ನು ಸ್ಪಷ್ಟಪಡಿಸುವುದು ಒಳಿತು. ಬುದ್ಧಿಜೀವಿಗಳು ಎಂದರೆ ಬುದ್ಧಿವಂತರು. ಅರ್ಥಾತ್ ಬುದ್ಧಿಯನ್ನು ಹೊಂದಿದವರು. ಪುನಃ ಬುದ್ಧಿ ಎಂದರೆ ಸೂಕ್ತ ವಿದ್ಯಾಭ್ಯಾಸದ ಮೂಲಕ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ವಿವೇಚಿಸುವ ಶಕ್ತಿ. ಇದನ್ನು ಹೊಂದಿದವರು ಬುದ್ಧಿವಂತರು. ಅವರು ಸಮಾಜದ ಭಾಗವೇ ಆಗಿರುವುದರಿಂದ ಸಮಾಜಕ್ಕೆ ಸಹಾಯ ಮಾಡಲೇ ಬೇಕು. ಏಕೆಂದರೆ, ಕಾಲಕ್ರಮದಲ್ಲಿ ಅವರ ನಿಷ್ಕ್ರಿಯತೆಯ ಪರಿಣಾಮದಿಂದ ಅವರು ತಪ್ಪಿಸಿಕೊಳ್ಳಲಾರರು. ಅದು ಕಾರಣ, ಪರಸ್ಪರ ಪ್ರಯೋಜನಕ್ಕಾಗಿ ಅವರು ಸಮಾಜದ ಸುಧಾರಣೆಗೆ ತಮ್ಮ ಕೊಡುಗೆ ನೀಡಲೇಬೇಕು.

ಬುದ್ಧಿಜೀವಿಗಳು ಕೊಡುಗೆ ನೀಡುತ್ತಾರೆಯೆ ?

ಬುದ್ಧಿಜೀವಿಗಳು ಸಂಘಗಳನ್ನು ಅಥವಾ ಗುಂಪುಗಳನ್ನು ಕಟ್ಟಿಕೊಂಡು ಉದಾ: ವೈದ್ಯರ ಸಂಘ, ಎಂಜಿನಿಯರುಗಳ ಸಂಸ್ಥೆ, ಉದ್ಯಮಿಗಳ ಸಮಿತಿ, ಕಾರ್ಮಿಕರ ಸಂಘಟನೆ ಇತ್ಯಾದಿಗಳನ್ನು ರಚಿಸಿಕೊಂಡು ಕೊಡುಗೆ ನೀಡುತ್ತಾರೆ. ಸಮಾನಶೀಲ ವ್ಯಸನೇಷು ಸಖ್ಯಮ್. ಸಮಾನವಾದ ಉದ್ಯೋಗ ಅಥವಾ ತಜ್ಞತೆಯ ಜನರು ಸಮೂಹಗಳನ್ನು ನಿರ್ಮಿಸಿಕೊಂಡು ಸಮಾಜಕ್ಕೆ ಸೇವೆ ಸಲ್ಲಿಸುತ್ತಾರೆ. ಈ ಸಮೂಹಗಳು ತಮ್ಮ ಉದ್ಯೋಗದ ಕಾರ್ಯವನ್ನು ನಿಯಂತ್ರಿಸಿ, ಆ ಸಮೂಹದಲ್ಲಿರುವ ಬುದ್ಧಿಜೀವಿಗಳಿಗೆ ವಿಧಿ (ಮಾಡಬಹುದಾದುದು)ಹಾಗೂ ನಿಷೇಧ (ಮಾಡಬಾರದ್ದನ್ನು)ಗೊತ್ತುಪಡಿಸಿ, ಸಮಾಜಕ್ಕೆ ಉತ್ತಮ ಸೇವೆ ಲಭಿಸುವಂತೆ ಮಾಡುತ್ತವೆ. ಇಂತಹ ಕೆಲವು ಸಂಘಗಳ ಕಾರ್ಯವೈಖರಿಯು ಸಮಾಜಕ್ಕೆ ಹಾನಿಕಾರಕ ಎಂಬುದರಲ್ಲಿ ಸಂದೇಹವಿಲ್ಲ. ಆದರೆ, ಅಂಥವುಗಳ ಸಂಖ್ಯೆ ತೀರಾ ಅಲ್ಪವಾಗಿದೆಯಲ್ಲದೆ, ಸಾಮಾಜಿಕ ನೀತಿ ಸಂಹಿತೆಯನ್ನು ಅನುಸರಿಸದಿರುವುದೇ ಕಾರಣವಾಗಿದೆ.

ಬುದ್ಧಿಜೀವಿಗಳ ಇನ್ನೂ ಕೆಲವು ಗುಂಪುಗಳಿವೆ – ದತ್ತಿ ನಿಧಿ ಹಾಗೂ ದಾನ ಸಂಸ್ಥೆಗಳಂಥವುಗಳು. ಈ ಸಂಸ್ಥೆಗಳು ಉಚಿತ ವೈದ್ಯಕೀಯ ನೆರವು, ವಿದ್ಯಾರ್ಥಿವೇತನ ಅಥವಾ ಶಾಲೆ ಕಾಲೇಜುಗಳಲ್ಲಿ ಶೈಕ್ಷಣಿಕ ಸಹಾಯ ಇತ್ಯಾದಿಗಳ ಮೂಲಕ ಸಮಾಜಕ್ಕೆ ಸಹಾಯ ಮಾಡುತ್ತವೆ. ಹಿಂದೆ ಹೇಳಿದ

ಮೊದಲ ವರ್ಗದ ಸಂಘಗಳಂತೆ ಇವು ಹೆಚ್ಚಾಗಿ ಪ್ರಚಾರ ಪ್ರಿಯ ಸಂಘಟನೆಗಳಲ್ಲ. ಆದರೆ, ಸಮಾಜದ ಕೆಳಗಿನ ಸ್ತರದ ಜನರ ಕಷ್ಟಗಳನ್ನು ನಿವಾರಿಸಲು ಮೌನವಾಗಿ ಕೆಲಸ ಮಾಡುತ್ತವೆ. ನೆರೆ, ಭೂಕಂಪ ಹಾಗೂ ಸಾಂಕ್ರಾಮಿಕ ರೋಗಗಳಂತಹ ಸಂದರ್ಭಗಳಲ್ಲಿ ಸರಿಯಾದ ರೀತಿಯಲ್ಲಿ ಸರಿಯಾಗಿ ಸಹಾಯ ಮಾಡುವುದರಲ್ಲಿ ಅವು ವಿಶ್ವಾಸವಿರಿಸಿವೆ. (ಉದಾ : ಶ್ರೀ ರಾಮಕೃಷ್ಣ ಮಠ.) ಆದರೆ ದೇಶದ ಗಾತ್ರವನ್ನು ಪರಿಗಣಿಸುವಾಗ, ಈ ಸಂಘಟನೆಗಳು ಬರೇ ಚಿಕ್ಕವು. ಇಂತಹ ಸೇವೆಯನ್ನು ಮಾಡಲು ಇನ್ನೂ ಇಂತಹ ಹಲವಾರು ಸಂಸ್ಥೆಗಳಿಗೆ ಅವಕಾಶ ಇದೆ.

**ಸಮಾಜ ಸುಧಾರಣೆಗೆ ಹೋರಾಡಲು ಬುದ್ಧಿಜೀವಿಗಳು ಏಕೆ ನಾಚಿಕೆ ಪಡುತ್ತಾರೆ ?**

ದೇಶದ ಕಾನೂನು ನಿರ್ಮಾಪಕರಾದ ಸಂಸತ್ ಸದಸ್ಯರನ್ನು ಮತ್ತು ರಾಜ್ಯವಿಧಾನ ಸಭೆಗಳ ಸದಸ್ಯರನ್ನು ನೋಡಿದರೆ ಮೇಲಿನ ಪ್ರಶ್ನೆಗೆ ಉತ್ತರಿಸುವುದು ಸುಲಭ. ಗುಂಪುಗುಳಿತನ ಮತ್ತು ಪಕ್ಷಪಾತ ಅದೆಷ್ಟು ಮಿತಿಮೀರಿದೆ ಎಂದರೆ, ಬುದ್ಧಿಜೀವಿಗಳು ರಾಷ್ಟ್ರವ್ಯಾಪಿ ಪ್ರಮಾಣದಲ್ಲಿ ಕೆಲಸ ಮಾಡಬಯಸುವುದೇ ಇಲ್ಲ. ಅವರು ಸಮಾಜಕ್ಕೆ ಬರೇ ಸೀಮಿತ ಪ್ರಮಾಣದಲ್ಲಿ ಕಾರ್ಯವೆಸಗಲು ಹಾಗೂ ಸಹಾಯ ಮಾಡಲು ಮಾತ್ರ ಇಷ್ಟಪಡುತ್ತಾರೆ. ಈ ಸಂಬಂಧದಲ್ಲಿ ಸುಪ್ರಸಿದ್ಧ ಕಾನೂನು ತಜ್ಞರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ – 'ನಮ್ಮಲ್ಲಿ ಈಗ ಇರುವುದಕ್ಕಿಂತ ಕೇವಲ ಅರ್ಧದಷ್ಟು ಬುದ್ಧಿವಂತಿಕೆ ಮತ್ತು ಇಮ್ಮಡಿ ನೀತಿವಂತಿಕೆ (ಸಾಮಾನ್ಯವಾಗಿ ಪ್ರದರ್ಶನಕ್ಕೆ ಮಾತ್ರ ಉಪಯೋಗಿಸುತ್ತೇವೆ)ಇರುತ್ತಿದ್ದರೆ, ನಮ್ಮ ದೇಶ ನಾಲ್ಕುಪಟ್ಟು ಹೆಚ್ಚು ಸಂತೋಷಕರವಾಗಿರುತ್ತಿತ್ತು! (–ಮುಂಬಯಿಯಲ್ಲಿ ನಾನಿಪಾಲ್ಕೀವಾಲರು 11–5–1981ರಂದು 'ಆಡಳಿತ –ಉತ್ತಮ ಜೀವನಕ್ಕಾಗಿ ಕೆಲಸಗಾರರ ಪಾರುಪತ್ಯ' ಎಂಬ ಕುರಿತು ನೀಡಿದ ಭಾಷಣ)

**ಏನು ಪರಿಹಾರ ?**

ಸಮಾಜದೊಳಗೆ ನೈತಿಕತೆಯನ್ನು ಸೇರಿಸಲು ಸರ್ವತೋಮುಖ ಪ್ರಯತ್ನ ನಡೆಯಬೇಕಾಗಿದೆ. ಇದರಿಂದ ಗುಂಪುಗುಳಿತನ ಹಾಗೂ ವಿಭಾಜಕ ಪ್ರವೃತ್ತಿಗಳನ್ನು ತಡೆಯಬಹುದು. ಅಲ್ಲದೆ, ಶ್ರೀಮಂತರ ಊಟದ ಮೇಜಿನಿಂದ ಕೆಳಗೆ ಬೀಳುವ ಕೆಲವು ರೊಟ್ಟಿಯ ಚೂರುಗಳಿಂದ ಬಡವರನ್ನು ತೃಪ್ತಿಪಡಿಸುವುದಲ್ಲ. ಸೌಕರ್ಯವಂಚಿತರಾದ ಜನರಿಗೆ ಗೌರವಪೂರ್ವಕವಾಗಿ ಸೇವೆ ಸಲ್ಲಿಸಬೇಕು.

ಪ್ರೀತಿಯಿಂದ ಸೇವೆ ಸಲ್ಲಿಸುವಂತೆ ಎಲ್ಲರ ಮನಸ್ಸುಗಳನ್ನು ಪರಿವರ್ತಿಸಬೇಕಾಗಿದೆ. ಸಂತರೊಬ್ಬರು ಹೀಗೆ ಹೇಳಿದ್ದಾರೆ –'ಇತರರಿಗೆ ಸಲ್ಲಿಸುವ ಸೇವೆ ಎಂಬುದು ನೀವು ಸಮಾಜಕ್ಕೆ ಮಾಡಬೇಕಾದ ಕರ್ತವ್ಯ. ಯಾವ ಸಮಾಜ ನಿಮಗೆ ಸಂಸ್ಕೃ ತಿಯನ್ನು ಒದಗಿಸಿದೆಯೋ, ನೀವು ಬದುಕಲು ಬೇಕಾದ ಆಹಾರ ಹಾಗೂ ಉಸಿರನ್ನು ನೀಡಿದೆಯೋ, ನೀವು ಅಪೇಕ್ಷಿಸುವ ಹಿತಕರ ವಾತಾವರಣ ಮತ್ತು ಭದ್ರತೆಯನ್ನು ಉಂಟುಮಾಡಿದೆಯೋ ಅದಕ್ಕಾಗಿ ನೀವು ಕೊಡಬೇಕಾದ ತೆರಿಗೆ ಅದು...... ಸೇವೆಯ ಔಚಿತ್ಯವನ್ನು ಅರಿತುಕೊಳ್ಳಿ. ಅದು ನಿಮ್ಮನ್ನು ಆದರ್ಶ ನಾಯಕನನ್ನಾಗಿ ಮಾಡುವುದು. ಏಕೆಂದರೆ, ಆದರ್ಶ ನಾಯಕರು ಇಂದಿನ ಅಗತ್ಯ.'

**ಈ ಕುರಿತು ಇತರರು ಏನು ಹೇಳುತ್ತಾರೆ ?**

'ಸೇವಾ ಜೀವನವು ನಮ್ರತೆಯಿಂದ ಕೂಡಿರಬೇಕಲ್ಲದೆ ನಿರಂತರವಾಗಿರಬೇಕು.

ಸಮಾಜಸೇವೆಯನ್ನು ಮಾಡುವ ಅಂತಹ ವ್ಯಕ್ತಿ ನಿಜಕ್ಕೂ ಆ ಮೂಲಕ ದೇವರ ಸೇವೆಯನ್ನೇ ಮಾಡುತ್ತಾನೆ. ದೇವರು ಕೂಡ ಒಂದು ಕ್ಷಣವೂ ವಿಶ್ರಮಿಸದೆ ನಿರಂತರ ಕಾರ್ಯ ಪ್ರವೃತ್ತನಾಗಿದ್ದಾನೆ ' – ಮಹಾತ್ಮ ಗಾಂಧಿ

'ನಾನು ಪುನಃ ಪುನಃ ಹುಟ್ಟಿ ಬರುವಂತಾಗಲಿ.... ಇದರಿಂದ ಎಲ್ಲ ಜಾತಿ, ಜನಾಂಗಗಳ ದೀನ, ದಲಿತರಲ್ಲಿ ಹಾಗೂ ಬಡವರಲ್ಲಿ ಇರುವ ಒಬ್ಬನೇ ದೇವನನ್ನು ಪೂಜಿಸಬಹುದಾಗುತ್ತದೆ – ಸ್ವಾಮಿ ವಿವೇಕಾನಂದ

'ಸಮಾಜದಲ್ಲಿ ದಿವ್ಯತೆಯ ಅಭಿವ್ಯಕ್ತಿಯನ್ನು ಗಮನಿಸುವುದು ಮತ್ತು ಸಮಾಜದ ಸಮೃದ್ಧಿ ಹಾಗೂ ಕಲ್ಯಾಣಕ್ಕಾಗಿ ಪ್ರಯತ್ನಿಸುವುದು ಮನುಷ್ಯನ ಕರ್ತವ್ಯ – ಭಗವಾನ್ ಶ್ರೀ ಸತ್ಯಸಾಯಿಬಾಬಾ.

ಸಮಾಜದಲ್ಲಿರುವ ಸಾವಿರಾರು ಜನರಲ್ಲಿ ನೆಲೆಸಿರುವ ದೇವರ ಸೇವೆಯನ್ನೇ ನಾವು ನಿಜವಾಗಿ ಕೈಗೊಳ್ಳುತ್ತಿದ್ದೇವೆ ಎಂಬ ಭಾವನೆಯೊಂದಿಗೆ, ಯಾವುದೇ ಸ್ವಾರ್ಥ ಉದ್ದೇಶವಿಲ್ಲದೆ, ಪ್ರಾಮಾಣಿಕ ಸೇವೆಯ ಮೂಲಕ ಸಮಾಜದ ಸಮೃದ್ಧಿ ಹಾಗೂ ಕಲ್ಯಾಣವನ್ನು ಸಾಧಿಸುವಲ್ಲಿ ಬುದ್ಧಿಜೀವಿಗಳು ಧನಾತ್ಮಕ ಪಾತ್ರವನ್ನು ವಹಿಸಬೇಕು. 'ಮಾನವ ಸೇವೆಯೇ ಮಾಧವ ಸೇವೆ'.

**ಡಾ। ವಿದ್ವಾನ್ ಕೃಷ್ಣಮೂರ್ತಿ ನಿಟಿಲಾಪುರ**

## ಸಂಕಲ್ಪದಲ್ಲಿ ಕಾಲದ ಎಣಿಕೆ

''ಬ್ರಾಹ್ಮಣರು ನಿತ್ಯ ಸಂಕಲ್ಪ ಹೇಳುವಾಗ ಆದ್ಯ ಬ್ರಹ್ಮಣೋ ದ್ವಿತೀಯಾಪರಾರ್ಧೇ ಶ್ವೇತವರಾಹಕಲ್ಪೇ ವೈವಸ್ವತ ಮನ್ವಂತರೇ ಅಷ್ಟಾವಿಂಶತಿತಮೇ ಕಲಿಯುಗೇ ಎನ್ನುವಾಗ ಇದು ಬ್ರಹ್ಮನ ನೂರು ವರ್ಷ ಪಟ್ಟದ ಎರಡನೇ ಭಾಗ, ಅದರಲ್ಲಿ ಈಗಿನದು ಶ್ವೇತವರಾಹ ಎಂಬ ಹೆಸರಿನ ಕಲ್ಪ ; ಅದರಲ್ಲಿ ಹದಿನಾಲ್ಕು ಮನುಗಳಲ್ಲಿ ಮನುಗಳಲ್ಲಿ ಏಳನೇ ಮನುವಾದ ವೈವಸ್ವತನ ಕಾಲ; ಆ ಮನ್ವಂತರದ 28ನೇ ಕಲಿಯುಗ; ಎಂಬುದನ್ನು ಸ್ಮರಣೆಗೆ ತರುತ್ತವೆ. ಕಲ್ಪ, ಚತುರ್ಯುಗ, ಕಲಿಯುಗ ಇವಕ್ಕೆ ಎಲ್ಲ ಕಾಲದ ಕೋಷ್ಠವು ಪುರಾಣಗಳಲ್ಲಿದೆ. ಇನ್ನು ನಮ್ಮ ಪಂಚಾಂಗದಲ್ಲಿ ಕಲಿಯುಗದ ಆದಿಯಿಂದ ಇಂದಿನವರೆಗಿನ ದಿನದ ಎಣಿಕೆಯೂ ಇದೆ. ಆದ್ದರಿಂದ ಐನ್‌ಸ್ಟೈನನ ಸುಮಾರು ಅಂದಾಜು 2000 ಮಿಲಿಯ ವರ್ಷ ಎನ್ನುವ ಬಗ್ಗೆ, ಸರಿಬರುವ ಎಣಿಕೆಯು ನಮ್ಮಲ್ಲಿದೆ. ನಮ್ಮಲ್ಲಿ ಮಾತ್ರ ಹೊರತು ಇದನ್ನು ಇನ್ನೆಲ್ಲೂ ಕಾಣೆವು.''

**ಕೋ. ವಾಸುದೇವ ಕಾರಂತ**

ಅವಲೋಕನ

# ದೇವರ ಸನ್ನಿಧಿಯಲ್ಲಿ ಹೇಗಿರಬೇಕು ?

ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವುದು ಒಂದೆ. ನಾವು ದೇವಸ್ಥಾನಕ್ಕೆ ಹೋಗುವುದು, ಭಕ್ತಿಯಿಂದ, ಪಾಪ ಕಳೆದು, ಪುಣ್ಯ ಸಂಪಾದನೆಗೆಂದು. ಆದರೆ ವರ್ತಮಾನದಲ್ಲಿ ಆಗುತ್ತಿರುವುದೇನು ? ವಿಶೇಷ ಜನ ಜಂಗುಳಿಯ ದೆಸೆಯಿಂದ ಭಕ್ತಿಯನ್ನು ಯುಕ್ತಿಯಿಂದ ಪಡೆದುಕೊಳ್ಳುವ ಪ್ರಮೇಯ ಬಂದೊದಗುತ್ತಿರುವುದು ವಿಷಾದಕರ. ಯುಕ್ತಿ ಯಾಕೆ ಆಂದ್ರೆ – ಹಲವು ಮಾಲಿನ್ಯಗಳಿಂದ ಮನಸ್ಸನ್ನು ಕೇಂದ್ರಿಕರಿಸಲು ಸಹಾಯಕವಾಗಲು.

ಹೆಚ್ಚಿನ ಸಾರಿ ನಮ್ಮ ಗಮನ ದೇವಸ್ಥಾನಕ್ಕೆ ಬರುವವರ ಮೇಲೆ ಹೋದಾಗ ನಮಗನಿಸುವುದು ಬೇರೆ. ಇವರು ಭಕ್ತಿಯಿಂದ ಪುಣ್ಯ ಸಂಪಾದನೆಗೆ ಬರುವುದಲ್ಲ – ಪ್ರದರ್ಶನಕ್ಕೆ ಅಂತ. ಅವರು ಬರುವ ಪರಿಯಿಂದ ನಡೆದುಕೊಳ್ಳುವ ರೀತಿಯಿಂದ ನಿಜಾರ್ಥಕ್ಕೆ ಬರುವವರು ಯುಕ್ತಿ ಉಪಯೋಗಿಸುವಂತಾಗುತ್ತದೆ.

ನಾನೊಮ್ಮೆ ಈ ಹಿಂದೆ ಸಾಲಿಗ್ರಾಮ ಗುರುನರಸಿಂಹ ದೇವಸ್ಥಾನಕ್ಕೆ ಹೋದಾಗ ಶಿವರಾಮ ಕಾರಂತರಿಗೆ ಎದುರುಗಡೆ ಒಂದು ಕುರ್ಚಿ ಹಾಕಿ ಕೂಡಿಸಿದ್ದರು. ಸಹಜವಾಗಿ ನಮ್ಮೂರಿನ ಹಿರಿಯ ಸಾಹಿತಿಯಾದ್ದರಿಂದ ನಮಸ್ಕರಿಸಿದೆ. ಆಗ ಅವರು ದೇವರನ್ನು ತೋರಿಸಿ ಅಲ್ಲಿಗೆ ಮೊದಲು ಅಂದದ್ದು ತುಂಬಾ ಅರ್ಥಪೂರ್ಣವಾಗಿತ್ತು. ಈಗಂತೂ ದೇವಸ್ಥಾನಗಳಿಗೆ ಬರುವವರು ಅವರವರಲ್ಲೆ ನಮಸ್ಕಾರ ವಿನಿಮಯ ಮಾಡಿಕೊಳ್ಳುವುದಲ್ಲದೆ ನಿಮಿಷಗಟ್ಟಲೆ ಹರಟೆ ಹೊಡೆಯಲು ಶುರುಮಾಡುತ್ತಾರೆ. ಇದರಿಂದ ನಿಜ ಅರ್ಥದಲ್ಲಿ ಬರುವವರಿಗೆ ಎಷ್ಟು ತೊಂದ್ರೆ ಆಗುತ್ತದೆ ಎಂಬುದು ಅವರ ಗಮನಕ್ಕೆ ಬರುವುದೇ ಇಲ್ಲ.

ನಾನೊಮ್ಮೆ ದೇವರಿಗೆ ನಿಂತಲ್ಲೇ ಕೈ ಮುಗಿದು ಪ್ರಾರ್ಥಿಸಿ ಮತ್ತೊಂದು ಸುತ್ತಿಗೆ ಹೊರಡಲನುವಾದಾಗ ಎಡವಿ ಬೀಳುವಂತಾಯಿತು. ಕಾರಣ ನನ್ನ ಕಾಲ ಬುಡದಲ್ಲೇ ಒಬ್ಬರು ಭಕ್ತರು ಉದ್ದಂಡ ನಮಸ್ಕಾರ ಮಾಡುತ್ತಿದ್ದರು. ಈ ಉದ್ದಂಡ ನಮಸ್ಕಾರವೆನ್ನುವುದು ಭಕ್ತಿಯ ಇನ್ನೊಂದು ವಿಧಾನವೇ ಹೊರತು ಅದನ್ನು ಮಾಡಲೇಬೇಕೆಂದೇನಿಲ್ಲ. ಜನ ಜಂಗುಳಿಯಿರುವಾಗ ಆದಷ್ಟು ಅದನ್ನು ಮಾಡದೇ ಇರುವುದು ಒಳ್ಳೆಯದು ಅಥವಾ ಯಾವುದಾದರೂ ಒಂದು ಮೂಲೆಯಲ್ಲಿ ಜನ ವಿರಳತೆಯಿರುವಲ್ಲಿ ಮಾಡುವುದು ಉಚಿತ. ಇನ್ನು ತೀರ್ಥ ತೆಗೆದುಕೊಂಡಾಗ ಪ್ರಸಾದ ಸ್ವೀಕರಿಸಿ ಅಲ್ಲೇ ನಿಂತು ಅದನ್ನು ಹಾಕಿಕೊಳ್ಳುತ್ತಿರುವುದನ್ನು ಗಮನಿಸಬಹುದು. ತುಂಬಾ ಜನರಿರುವಾಗ ಪ್ರಸಾದವನ್ನು ತೆಗೆದುಕೊಂಡ ತತ್‌ಕ್ಷಣ ಪಕ್ಕಕ್ಕೆ ಬಂದು ಮತ್ತೊಬ್ಬರಿಗೆ ಅವಕಾಶ ಕಲ್ಪಿಸಿ, ನಂತರ ಸ್ಥಳಾವಕಾಶ ನೋಡಿ ಹಾಕಿಕೊಳ್ಳುವುದು ಒಳ್ಳೆಯದು. ಜನ ಜಂಗುಳಿಯಿರುವಾಗ ಒಂದೇ ಮುಖವಾಗಿ ಹೋಗುವುದು ಉತ್ತಮ. ಕೆಲವೊಮ್ಮೆ ಅದಕ್ಕೆ ವ್ಯವಸ್ಥೆ ಮಾಡಿರುತ್ತಾರಾದರೂ ಅಲ್ಲಲ್ಲೇ ಅಡ್ಡಾದಿಡ್ಡಿ ಓಡಾಡುವವರನ್ನು ಕಾಣಬಹುದು. ಇದರಿಂದ ತುಂಬಾ ತೊಡಕುಂಟಾಗುವುದು. ನಿಜವಾದ ಭಕ್ತರಿಗೆ, ಅಲ್ಲದೆ ಸ್ವತಃ ಅವರೂ ದೂಡಿಕೊಂಡು ಮುಂದೆ ಬರುವಂತಹ ಪರಿಸ್ಥಿತಿ ಉದ್ಭವಿಸುವುದು.

ಮೊನ್ನೆ ಒಂದು ದೇವಸ್ಥಾನದಲ್ಲಿ ನಾನು ಸುತ್ತು ಬರುವಾಗ ಒಂದು ಹುಡುಗಿ ಕಿವಿಗೆ ವಯರ್ ಹಾಕಿಕೊಂಡು ಕೇಳುತ್ತಾ ಸುತ್ತ ತಿರುಗುವುದನ್ನು ಕಂಡೆ. ತಡೆಯದೆ ಕೇಳಿದೆ 'ದೇವರ ಹಾಡ'? ಅಂತ ತಡವಾಗಿ ಅರ್ಥೈಸಿಕೊಂಡ ಆಕೆ ಕೂಡಲೇ ಕಿವಿಯಿಂದ ತೆಗೆದದ್ದು ನನ್ನ ಪ್ರಶ್ನೆಗೆ ಕೊಟ್ಟ ಗೌರವ ಅಂತ ತಿಳಿದೆ. ದೇವಸ್ಥಾನದಲ್ಲಿ ಚರ ದೂರವಾಣಿಯನ್ನು ಬಳಸಬಾರದು ಅಂತಹ ಫಲಕ ಹಾಕಿರುತ್ತಾರಾದರೂ ಬಳಸುವವರಿಗೆ ಆಕ್ಷೇಪ ಹೇಳುವುದಿಲ್ಲ ಅಥವಾ ಅವರಿಗೆ ಅದನ್ನು ಗಮನಿಸಲು ಸಾಧ್ಯವಾಗುವುದಿಲ್ಲ. ಆದರೆ ಬಳಸುವವರು ಇದನ್ನು ಅರ್ಥ ಮಾಡಿಕೊಂಡು ಅನಂತರ ಮಾತಾಡುವ ಬಗ್ಗೆ ಯೋಚಿಸುವುದು ಸಮಂಜಸ.


ಕೆಲವೊಂದು ದೇವಸ್ಥಾನಗಳಲ್ಲಿ ದೇವರ ದೀಪಕ್ಕೆ ಎಣ್ಣೆ ಹಾಕುವ ಪದ್ಧತಿ ಇದೆ. ಆದರೆ ಈ ಎಣ್ಣೆ ಹಾಕುವವರು ತುಂಬಾ ಜಾಗ್ರತೆಯಿಂದಿರಬೇಕಾಗುತ್ತದೆ. ಮುಖ್ಯವಾಗಿ ಇತರ ಭಕ್ತಾದಿಗಳಿಗೆ ಅದು ತಾಗಿ ಬೀಳದೆ ಅಥವಾ ತುಳುಕದೇ ಇರುವುದರತ್ತ ಗಮನ ಕೊಡುವುದು ಒಳ್ಳೆಯದು. ತುಳುಕಿ, ಚೆಲ್ಲಿದರೆ ಅದರಿಂದ ಹಾನಿ ಅಪಾರ. ತಾಗಿದಾಗ ಬೇರೆಯವರ ಬಟ್ಟೆ ಹಾಳಾಗುತ್ತದೆ.

ದೇವರಿಗೆ ನಿಂತು ನಮಸ್ಕರಿಸುವಾಗ ಭಕ್ತಾದಿಗಳು ಸುತ್ತು ತಿರುಗುವ ಜಾಗವನ್ನು ಬಿಟ್ಟು ನಿಂತುಕೊಳ್ಳುವುದು ಸೂಕ್ತ. ಇದರಿಂದ ಸುತ್ತುವವರಿಗೂ ಅನುಕೂಲ ಹಾಗೂ ಇವರ ಭಕ್ತಿಯ ಏಕಾಗ್ರತೆಗೂ ಸಹಕಾರಿ. ಕೆಲವರಿಗೆ ದೇವರ ಪ್ರಧಾನ ದ್ವಾರವನ್ನು ಬಗ್ಗಿ ಮುಟ್ಟಿ ನಮಸ್ಕರಿಸಿ ಮುಂದೆ ಹೋಗುವ ಅಭ್ಯಾಸವಿರುತ್ತದೆ. ಜನ ವಿರಳತೆಯಿದ್ದಾಗ ಇದರಿಂದ ತೊಂದರೆಯಾಗದು. ಆದರೆ ವಿಶೇಷ ಜನಜಂಗುಳಿಯಿರುವಾಗ ಒಬ್ಬರ ಹಿಂದೆ ಒತ್ತಿಕೊಂಡು ಮತ್ತೊಬ್ಬರು ಇರುವುದರಿಂದ ಹಿಂದಿನವರಿಗೆ ಇವರು ಬಗ್ಗುವ ಸೂಚನೆ ಇಲ್ಲದೆ ಮೇಲೆ ಮುಗ್ಗರಿಸಿ ಬೀಳಬಹುದು. ಇದರಿಂದ ಸರತಿಯ ಸಾಲಿನಲ್ಲಿ ನೂಕು ನುಗ್ಗಲುಂಟಾಗಬಹುದು. ಪ್ರಸಾದವನ್ನು ದೇವಸ್ಥಾನದವರು ಅಗತ್ಯಕ್ಕಿಂತ ಜಾಸ್ತಿಯೇ ಕೊಟ್ಟಿರುತ್ತಾರೆ ಅಂತಿಟ್ಟುಕೊಳ್ಳಿ. ಅದನ್ನು ಜೋಪಾನವಾಗಿ ತೆಗೆದಿಟ್ಟುಕೊಂಡು ಮನೆಗೆ ಕೊಂಡುಹೋಗಿ ಒಂದು ಕಡೆ ಕೆಲವು ದಿನ ಇಡುವುದರಿಂದ ತಾತ್ವಿಕ ರಕ್ಷಣೆ ಒದಗುವುದು. ಅದನ್ನು ಬಿಟ್ಟು ಹೆಚ್ಚಾದ ಹೂವು ಗಂಧವನ್ನು ಅಲ್ಲಲ್ಲಿ ಬಿಸಾಡುವುದರಿಂದ ಇತರರ ಕಾಲಿನಡಿ ಸಿಕ್ಕಿದಲ್ಲಿ ದೇವರಿಗೇ ಅಗೌರವ ತೋರಿಸಿದಂತಾಗುತ್ತದೆ. ತುಂಬಾ ಜನಜಂಗುಳಿಯಿರುವಾಗ ದೇವರ ಗರ್ಭಗುಡಿಗೆ ಸುತ್ತು ಬರುವ ಪ್ರಕ್ರಿಯೆ ಒಳ ಸುತ್ತಿನಲ್ಲೇ ಮಾಡುವುದರಿಂದ ತಳ್ಳಾಟ ಜಾಸ್ತಿಯಾಗುತ್ತದೆ. ಆದ್ದರಿಂದ ಉಳಿದ ಸುತ್ತನ್ನು ವಿಶಾಲವಾದ ಹೊರಸುತ್ತಿನಲ್ಲಿ ಹಾಕುವುದರಿಂದ ಪ್ರಯೋಜನ ಜಾಸ್ತಿ. ಹೀಗೇ ಪಟ್ಟಿ ಮಾಡುತ್ತಾ ಹೋದರೆ ಹಲವಾರುಂಟು. ದೇವಸ್ಥಾನಕ್ಕೆ ಹೋಗುವುದು ಭಕ್ತಿಯಿಂದ ಪುಣ್ಯ ಸಂಪಾದನೆಗೆ ಎಂಬ ಅರಿವು ಭಕ್ತಾದಿಗಳಿಗೆ ಇದ್ದರೆ ಈ ಮೇಲೆ ಹೇಳಿದ ಅನನುಕೂಲತೆಯನ್ನು ದೂರೀಕರಿಸಬಹುದು. ದಯವಿಟ್ಟು ಭಕ್ತಾದಿಗಳು ಇವುಗಳನ್ನು ಅನುಸರಿಸಿದರೆ ಭಕ್ತಿಯ ಪರಾಕಾಷ್ಠತೆಗೆ ಎಲ್ಲರಿಗೂ ಅನುಕೂಲವಾಗುವುದು.

**ಕೆ. ಗೋವಿಂದ ಉಪಾಧ್ಯ, ಇಂದ್ರಾಳಿ**
ಶ್ರವಣ, ಎರಡನೇ ಅಡ್ಡರಸ್ತೆ, ಎರಡನೇ ಮುಖ್ಯರಸ್ತೆ
ಹಯಗ್ರೀವ ನಗರ, ಇಂದ್ರಾಳಿ, ಉಡುಪಿ – 3

ಸಂಸ್ಮರಣೆ

# ಉಪ್ಪಿನಕುದುರು ಸೀತಾರಾಮ ಮಯ್ಯ



**ಅನ್ನವನು ಇಕ್ಕಿದರು, ನನ್ನಿಯನು ನುಡಿದರು**
**ತನ್ನಂತೆ ಪರರ ಬಗೆದರು, ಅವರಿಗೆ ಕೈಲಾಸ ನೆರೆಮನೆಯಾಯ್ತು**
(ಸರ್ವಜ್ಞನ ಕ್ಷಮೆ ಕೇಳಿ)

31ನೇ ಡಿಸೆಂಬರ್, 2012 ಮಧ್ಯ ರಾತ್ರಿ ಕಳೆಯುತ್ತಿತ್ತು. ಹೊಸ ವರ್ಷದ ಆಗಮನವಾಗುತ್ತಿತ್ತು. ಉತ್ಸಾಹ ಚಿಮ್ಮಿತ್ತು, ನಗೆ ಉಕ್ಕಿ ಹರಿದಿತ್ತು. ಆದರೆ ಒಂದು ಮನೆಯಲ್ಲಿ ದುಃಖ ಮಡುಗಟ್ಟಿತ್ತು. ಸ್ಮಶಾನ ಮೌನ ಆವರಿಸಿತ್ತು. ಬಂಧು-ಬಾಂಧವರು ತಮ್ಮ ಕುಟುಂಬದ ಯಜಮಾನರು ತಮ್ಮೆಲ್ಲರಿಗೆ ಮಹಾನ್ ಬದುಕಿಗೆ ವಿದಾಯ ಹೇಳುವುದನ್ನು ಸಾಕ್ಷಿಯಾಗಿ ನೋಡುತ್ತಿದ್ದರು. ಆ ಗಳಿಗೆ ಬಂದೇ ಬಿಟ್ಟಿತು. ಆ ಪುಣ್ಯಾತ್ಮ ತನ್ನ 82ನೇ ವಯಸ್ಸಿನ ವಿರಾಟ್ ಬದುಕಿಗೆ ಮಂಗಳ ಹಾಡಿಯೇ ಬಿಟ್ಟರು. ಮಂಡ್ಯದ ಹೋಟೆಲ್ ಉದ್ಯಮದ ಆಚಾರ್ಯ ಉಪ್ಪಿನ ಕುದುರು ಸೀತಾರಾಮ ಮಯ್ಯ ತಮ್ಮ 82 ವರ್ಷಗಳ ಸಾಹಸದ ಜೀವನ ಯಾತ್ರೆಯನ್ನು ಮುಕ್ತಾಯಗೊಳಿಸಿದ್ದರು. ಸಾರ್ವಜನಿಕ ವಲಯದಲ್ಲಿ 60 ವರ್ಷವಾದರೆ ನಿವೃತ್ತಿ ಘೋಷಿಸುತ್ತಾರೆ. ಹೋಟೆಲ್ ಉದ್ಯಮ ಪತ್ರಿಕೋದ್ಯಮ, ಕಾರ್ಮಿಕ ವಲಯದಲ್ಲಿ ದೇಹಶ್ರಮದ ದುಡಿಮೆಗೆ ಬೆಲೆ ಇಲ್ಲ. ನಿತ್ಯ ಕಠಿನ ದುಡಿಮೆ. ವಯಸ್ಸೆಷ್ಟಾಗಿದೆ ಎಂದು ಜ್ಞಾಪಕಕ್ಕೆ ಬರುವುದಿಲ್ಲ. ಇಂತಹ ಸಾರ್ಥಕ ಸಾಧಕರ ಸಾಲಿನಲ್ಲಿ ಸೀತಾರಾಮ ಮಯ್ಯರು ನಿಲ್ಲುತ್ತಾರೆ.

70 ವರ್ಷ ಹೋಟೆಲ್ ಉದ್ಯಮದಲ್ಲಿ ದುಡಿಯುತ್ತಾ ದಣಿವರಿಯದೆ ಬೆಂಕಿಯಲ್ಲಿ ಅರಳಿದ ಪುಷ್ಪವದು. ಮಂಡ್ಯದ ಹೋಟೆಲ್ ಉದ್ಯಮದಲ್ಲಿ ಅದ್ಭುತ ರುಚಿಕರ ಬೆಣ್ಣೆ ದೋಸೆ ಸೃಷ್ಟಿಸಿ ಜನರ ನಾಲಿಗೆಯ ಮೇಲೆ ಕುಣಿದಂತೆ ಮಾಡಿದವರು. ನೂರಾರು ಯುವಕರು-ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದಲ್ಲಿ ಭವಿಷ್ಯವನ್ನು ಕಟ್ಟಿಕೊಟ್ಟವರು ಅವರು. ದುಡಿಮೆಯನ್ನೇ ದೇವಪೂಜೆ ಎಂದು ನಂಬಿದ ಕಾನನದ ಕುಸುಮ. ಅನ್ನ ಬ್ರಹ್ಮನ ತವರೆಂದೇ ಖ್ಯಾತವಾಗಿರುವ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಿಂದ ಹೊರಟ ಈ ಸಾಹಸಿಗ ತನ್ನ ಅಂತಿಮ ದಿನದವರೆಗೂ ಹೋಟೆಲ್ ಉದ್ಯಮದ ಅಭಿವೃದ್ಧಿಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಮಹಾಚೇತನ.

13 ಜೂನ್ 1930 ಜನನ. ತಂದೆ ಮಂಜುನಾಥ ಮಯ್ಯ, ತಾಯಿ ಮಂಜಮ್ಮ, ನಾಲ್ವರು ಸಹೋದರರು ಮೂವರು ಸಹೋದರಿಯರು ಒಡ ಹುಟ್ಟಿದವರು. ಬೆಟ್ಟದಷ್ಟು ಬಡತನ. ಬದುಕು ಕಟ್ಟಿಕೊಂಡು ತವರಿಗೆ ಕೀರ್ತಿ ತರಲು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಗಲೇ ತಮ್ಮ 13ನೇ ವಯಸ್ಸಿನಲ್ಲಿ ಹುಟ್ಟೂರು ಬಿಟ್ಟು ಉದ್ಯೋಗಕ್ಕಾಗಿ ಊರೂರು ಅಲೆದರು.

ಕಾಕಿನಾಡ, ಕಂಬದಕೋಣೆ, ಬೆಂಗಳೂರು, ಬಿಡದಿ, ಮದ್ದೂರು ಸುತ್ತಿಯಾಯಿತು. 1949ಕ್ಕೆ

ಕಬ್ಬಿನ ನಾಡು ಮಂಡ್ಯ ಕೈ ಬೀಸಿ ಕರೆಯಿತು. ಮಂಡ್ಯದ ಆನೆಕೆರೆ ಬೀದಿಯಲ್ಲಿದ್ದ ಭಾವ ನಾರಾಯಣ ಅಲ್ಸೆ ಅವರ ಕಾಶಿವಿಶ್ವನಾಥ ಭವನದಲ್ಲಿ ದುಡಿಮೆಗೆ ಪ್ರಾರಂಭ. ಬಿಡುವಿಲ್ಲದ ದುಡಿಮೆಯಲ್ಲೇ ಸ್ವಂತ ಉದ್ಯಮ ಪ್ರಾರಂಭಿಸುವ ಕನಸು ಕಂಡರು. 1957ರಲ್ಲಿ ಬೈಂದೂರಿನ ಅನಂತಯ್ಯ ಐತಾಳ–ಗಿರಿಜಮ್ಮರ ಪುತ್ರಿ ಮೀನಾಕ್ಷಿಯವರ ಕೈಹಿಡಿದು ಹೊಸ ಜೀವನಕ್ಕೆ ನಾಂದಿ ಹಾಡಿದರು. 1960ರಲ್ಲಿ ಮಂಡ್ಯದ ಪೇಟೆಯ ಶ್ರೀನಿವಾಸ ದೇವಸ್ಥಾನದ ಬಳಿಯ ಗೋವಿಂದಪ್ಪನವರ ಹೊಟೇಲನ್ನು ಬಾಡಿಗೆಗೆ ಪಡೆದರು. ತಾವು ಉಳಿಸಿ ಗಳಿಸಿದ್ದ ಚಿನ್ನದ ಸರವನ್ನು 300ರೂ.ಗೆ ಅಡವಿಟ್ಟು ಅದನ್ನೇ ಸ್ವಂತ ಉದ್ಯಮಕ್ಕೆ ಬಂಡವಾಳ ಮಾಡಿಕೊಂಡರು.

ಫೆಬ್ರವರಿ 27, 1961ರಂದು ಅಂದಿನ ಹೊಸಹಳ್ಳಿ ರಸ್ತೆಯ (ಈಗಿನ ವಿಶ್ವೇಶ್ವರಯ್ಯ ರಸ್ತೆ ಮಹಾವೀರ ರೆಡಿಮೇಡ್ ಡ್ರೆಸಸ್ ಮಳಿಗೆಯ ಕಟ್ಟಡ) ನಂಜೇಗೌಡರ ಕಟ್ಟಡದಲ್ಲಿ 'ದುರ್ಗಾ ಭವನ' ಹೋಟೆಲ್ ಪ್ರಾರಂಭವಾಯಿತು. ಮಯ್ಯರು ತಯಾರಿಸುತ್ತಿದ್ದ ವಿವಿಧ ದೋಸೆಗಳು, ಇಡ್ಲಿ, ವಡೆ, ಲಾಡು, ಮೈಸೂರುಪಾಕು, ಅವಲಕ್ಕಿ, ಬಾತ್, ವಿಶೇಷ ರುಚಿಯನ್ನು ಹೊಂದಿರುತ್ತಿತ್ತು. ಜನಪ್ರಿಯತೆಯನ್ನು ಬಹುಬೇಗ ಪಡೆದ ಮಯ್ಯರು ಉದ್ಯಮದಲ್ಲಿ ಯಶಸ್ಸಿನ ಮೆಟ್ಟಲೇರತೊಡಗಿದರು.

ದುರ್ಗಾಭವನದ ವಿಶಾಲವಾದ ಕೊಠಡಿಯಲ್ಲಿ ನೂರಾರು ವಿದ್ಯಾರ್ಥಿಗಳು, ಯುವಕರು, ಮೇಳೈಸಿ ಊರು ಕಟ್ಟುವ ಕಾಯಕದ ಯೋಜನೆಗಳನ್ನು ಸೃಷ್ಟಿಸುತ್ತಿದ್ದರು. ಅವರೆಲ್ಲರನ್ನು ಮಯ್ಯರು ತಮ್ಮ ಮಕ್ಕಳಂತೆ ಪೋಷಿಸಿ ಸಲಹಿ ಬೆಳೆಸಿದರು. ಮಂಡ್ಯದ ಹೊಸ ಇತಿಹಾಸ ಬರೆದ ಸಚಿವ ಎಸ್. ಡಿ. ಜಯರಾಂ, ಮಾಜಿ ಸಚಿವ ಎಂ. ಎಸ್. ಆತ್ಮಾನಂದ, ಮಾಜಿ ಶಾಸಕ ಜಿ. ಬಿ. ಶಿವಕುಮಾರ್, ಮೈಷುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ಮಾಜಿ ಮೂಡಾ ಅಧ್ಯಕ್ಷ ಪಿ. ಎಂ. ಸೋಮಶೇಖರ್, ಪತ್ರಕರ್ತ ಡಿ. ಎನ್. ಶ್ರೀಪಾದು, ನಟ ಮಂಡ್ಯ ರಮೇಶ್, ಹಿರಿಯರಾದ ಸಿದ್ದಯ್ಯನಕೊಪ್ಪಲು ನಂಜೇಗೌಡ, ಮಾಜಿ ಶಾಸಕ ದೊಡ್ಡ ಬೋರೇಗೌಡ ಯುವ ಮುಂದಾಳು, ಪಿ. ಕೆ. ಶ್ರೀಪತಿ, ಸದಾಶಿವ ಭಟ್ ಅಣ್ಣಯ್ಯ, ಎ. ವಿ. ಅನಂತ ರಾಮು, ಜೈರಾಜೇಶ್‌ಪ್ರಕಾಶ್ ಮೊದಲಾದವರು ಇಲ್ಲಿಯೇ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡರು.

ಮಯ್ಯರ ನಿಷ್ಕಾಮ ಉಪಚಾರ, ಸಮಯೋಚಿತ ಸಲಹೆ, ಸಹಕಾರ ಸದಾ ನೆನಪಿನಲ್ಲಿ ಉಳಿಯುತ್ತಿತ್ತು. ಪದೇ ಪದೇ ನೀಡುತ್ತಿದ್ದ ರೋಲಿಂಗ್ ಕಾಫಿ, ಅವಲಕ್ಕಿ ತುಂಬಾ ಹಸಿವಾದಾಗ ಇಡ್ಲಿ, ದೋಸೆ, ಖುಷಿಯಾದಾಗ ಲಾಡು, ಮೈಸೂರುಪಾಕು ಮೇಳ ಇಂದಿಗೂ ನೆನಪಿನಲ್ಲಿ ಹಸಿರಾಗಿದೆ. 1991ರಲ್ಲಿ ದುರ್ಗಾಭವನ ಶಶಿ ಟ್ರೇಡರ್ಸ್ ಪಕ್ಕದ ಹೊಸೂರು ಬೋರೇಗೌಡರ ಖಾಲಿಜಾಗಕ್ಕೆ ಸ್ಥಳಾಂತರವಾಯಿತು. ಇಲ್ಲಿ ಚಿಕ್ಕ ಮಸಾಲೆ 'ರಾಮಣ್ಣ' ಹುಟ್ಟಿಕೊಂಡು ಜನಪ್ರಿಯವಾಯಿತು.

ಕ್ಯೂ ನಿಂತು ಜನ ದೋಸೆ ಸವಿಯುತ್ತಿದ್ದರು. 1996ರಲ್ಲಿ ದುರ್ಗಾಭವನ ಲಕ್ಷ್ಮಿ ಜನಾರ್ದನ ಶಾಲೆಯ ಎದುರು ದುರ್ಗಾ ಟಿಫಾನೀಸ್ ಆಗಿ ಮರುಹುಟ್ಟು ಪಡೆಯಿತು. ನಾಡಿನ ಹೆಸರಾಂತ ಗಾಯಕ ಸಿ. ಅಶ್ವತ್, ಶಿವಮೊಗ್ಗ ಸುಬ್ಬಣ್ಣ, ಬೆಂಗಳೂರು ವಿಧಾನಮಂಡಲದ ಅಧಿಕಾರಿಗಳು, ಜನನಾಯಕರು, ಸಾಹಿತಿಗಳು, ಪತ್ರಕರ್ತರು ಎಲ್ಲರಿಗೂ ದುರ್ಗಾಕೆಫೆಯ ಬೆಣ್ಣೆ ದೋಸೆ ಪ್ರಿಯವಾಯಿತು. ಇಲ್ಲಿನ ರುಚಿಯಾದ ಕೇಸರಿ ಬಾತ್, ಚೌಚೌಬಾತ್, ಅಂಬೊಡೆ ಸವಿಯದವರೇ

ಇಲ್ಲ. ಹೋಟೆಲಿಗೆ ಯಾರೇ ಬರಲಿ ಅವರನ್ನು ನಗು ನಗುತ್ತ ಮಾತನಾಡಿಸಿ ಉಪಚಾರ ಮಾಡುವುದು ಮಯ್ಯರ ವಿಶೇಷ ಗುಣವಾಗಿತ್ತು.

ಅವರೆಂದೂ ಹಣಕ್ಕೆ ಬೆಲೆ ಕೊಡಲಿಲ್ಲ. ವಿನಯಶೀಲ ವ್ಯಕ್ತಿತ್ವ. ಮಾತು ಕಡಿಮೆ, ಹೆಚ್ಚು ದುಡಿಮೆ ಅವರ ಜೀವನದ ರಹಸ್ಯವಾಗಿತ್ತು. ಸದಾ ಬಿಳಿ ಉಡುಪು ತೊಟ್ಟು ನಿಷ್ಕಲ್ಮಶ ಜೀವನ ನಡೆಸಿದ ಅವರು, ನಿತ್ಯವೂ ಬೆಂಕಿಯ ಮುಂದೆ ಬೆಂದವರೇ. ಉದ್ಯಮದ ಜೊತೆಗೆ ಸಮಾಜ ಕಟ್ಟುವ ಕೆಲಸದಲ್ಲೂ ಸೈ ಎನಿಸಿಕೊಂಡರು. ಮಂಡ್ಯದಲ್ಲಿ ಮೊತ್ತ ಮೊದಲಿಗೆ ಸಾರ್ವಜನಿಕ ಗಣೇಶೋತ್ಸವವನ್ನು ತಮ್ಮ ಹೋಟೆಲ್ ಮಗ್ಗುಲಲ್ಲೇ ಸಂಘಟಿಸಿದರು. ಕರಾವಳಿಯ ಯಕ್ಷಗಾನವನ್ನು ಕಬ್ಬಿನ ನಾಡಿನಲ್ಲಿ ಪರಿಚಯಿಸಿದರು. ಸರಸವಾಣಿ, ಮದನಮಲ್ಲು, ಮೋಹನ್ ಜಿಂಪೆಟ್, ವಿನಾಯಕ ಆರ್ಕೆಸ್ಟ್ರಾ, ತೊಗಲುಗೊಂಬೆ, ಸೂತ್ರದ ಗೊಂಬೆ, ಅರಸೀಕೆರೆ, ಶ್ರೀರಂಗಪಟ್ಟಣ ಬಾಣಬಿರುಸುಗಳು ಮಂಡ್ಯಕ್ಕೆ ಬಂದವು. ಹೋಟೆಲ್ ಮಾಲೀಕರ ಸಂಘ ಕಟ್ಟಿದರು. ಆ ಸಂಘದ ಖಜಾಂಚಿಯಾಗಿ ಭದ್ರ ನೆಲೆ ಒದಗಿಸಿಕೊಟ್ಟರು.

ಕೂಟಮಹಾಜಗತ್ತು ಮಂಡ್ಯದಲ್ಲಿ ಹುಟ್ಟಲು ಕಾರಣಕರ್ತರಾದರು. ಮಯ್ಯರು ಮಂಡ್ಯದ ಹೋಟೆಲ್ ಉದ್ಯಮದ ಭೀಷ್ಮಾಚಾರ್ಯರೆನಿಸಿದರು. ಅವರ ಅಗಲಿಕೆಗೆ ಇಡೀ ಉದ್ಯಮಕ್ಕೆ ಬರಸಿಡಿಲು ಅಪ್ಪಳಿಸಿದಂತಾಗಿದೆ. ಅವರ ಸ್ಥಾನವನ್ನು ಮತ್ತೊಬ್ಬರು ತುಂಬುವುದು ಕಷ್ಟ. ವೃತ್ತಿಯಲ್ಲಿ ಯಶಸ್ಸನ್ನು ಕಂಡ ಮಯ್ಯರು ಸಂಸಾರದಲ್ಲೂ ಸಂತೃಪ್ತರು. ಹಿರಿಯ ಮಗ ಶಿವಾನಂದ, ಕಿರಿಯ ಮಗ ನರೇಂದ್ರಬಾಬು ತಂದೆಯು ಸವೆಸಿದ ದಾರಿಯಲ್ಲೇ ಸಾಗಿದ್ದಾರೆ. ಅದೇ ಜನಪ್ರಿಯತೆಯನ್ನು ಕಾಯ್ದುಕೊಂಡಿದ್ದಾರೆ. ಎತ್ತರೆತ್ತರ ಬೆಳೆಯುತ್ತಿದ್ದಾರೆ. ಕಾಯಕ ದೀಕ್ಷೆ ತೊಟ್ಟಿದ್ದಾರೆ. ಬೆಣ್ಣೆ ದೋಸೆ, ಕೇಸರಿಬಾತ್, ಕೇಟರಿಂಗ್‌ನಲ್ಲಿ ಜನಪ್ರಿಯತೆಗಳಿಸಿದ್ದಾರೆ.

ಹಿರಿಯ ಸೊಸೆ ಮೀನಾಕ್ಷಿ ಸ್ನಾತಕೋತ್ತರ ಪದವೀಧರೆ. ಕಿರಿಯ ಸೊಸೆ ಸರಸ್ವತಿ. ಹಿರಿಯ ಮಗಳು ಸರೋಜಾ, ಅಳಿಯ ಶ್ರೀನಿವಾಸ ಹೊಳ್ಳ, ದ್ವಿತೀಯ ಪುತ್ರಿ ರತ್ನ, ಅಳಿಯ ರಮೇಶ್, ತೃತೀಯ ಪುತ್ರಿ ನಿರ್ಮಲಾ, ಅಳಿಯ ಶಿವರಾಮ್ ಎಲ್ಲರೂ ತಮ್ಮ ತಮ್ಮ ಉದ್ಯಮದಲ್ಲಿ ಸಾಹಸಿಗರಾಗಿದ್ದಾರೆ. 8 ಮೊಮ್ಮಕ್ಕಳೊಂದಿಗೆ ಪೂರ್ಣ ಜೀವನ ನಡೆಸಿದ ಮಯ್ಯರು ಹಠಾತ್ ಬದುಕಿಗೆ ಮಂಗಳ ಹಾಡಿದ್ದು ಸಹಿಸಲಾಗದ ನೋವೇ ಸರಿ. ದುರ್ಗಾಕೆಫೆ ತನ್ನ ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ವರ್ಷದಲ್ಲಿಯೇ ಹೋಟೆಲ್ ಉದ್ಯಮದ ಬಂಗಾರದ ಮನುಷ್ಯ ಮಯ್ಯರು ಇಡೀ ಮಂಡ್ಯವನ್ನು ಪ್ರೀತಿಸಿ, ಅದರ ಬೆಳವಣಿಗೆಯಲ್ಲಿ ಶ್ರೀ ಗಂಧದಂತೆ ತಮ್ಮನ್ನೇ ಅರ್ಪಿಸಿಕೊಂಡು ವಿದಾಯ ಹೇಳಿದ್ದು ಆ ನೋವು ಸದಾ ಉಳಿಯುವಂತಾಗಿದೆ.

ಮಂಡ್ಯದ ಇತಿಹಾಸದಲ್ಲಿ ಮಯ್ಯರ ನೆನಪು ಸದಾ ಹಸಿರಾಗಿರುತ್ತದೆ.

**-ಡಿ. ಎನ್. ಶ್ರೀಪಾದು**

ಬಾಳು ಬೆಳಗಲು ಚಿಂತನ

# ಮಕ್ಕಳ ಶಿಕ್ಷಣ : ಮಗು 'ಮನುಷ್ಯ'ನ ಜನಕ

ಎಳೆಯ ಮಕ್ಕಳಲ್ಲಿ ಎಷ್ಟೊಂದು ಶಕ್ತಿ ಅಡಗಿದೆ – ಏನೆಲ್ಲಾ ಆಸಕ್ತಿ – ಅಭಿರುಚಿ ಅವರಿಗಿದೆ – ಎಂದು ಪ್ರತ್ಯಕ್ಷ ನೋಡಬೇಕಾದರೆ ಒಂದು ಒಳ್ಳೆಯ ನರ್ಸರಿ ಶಾಲೆಗೆ ನೀವು ಭೇಟಿ ಕೊಡಬೇಕು. ಒಮ್ಮೆ ಅಂತಹ ಒಂದು ಮಾದರಿ ಶಾಲೆಗೆ ಹೋದಾಗ ಅಲ್ಲಿ ಒಬ್ಬಳು ಉತ್ಸಾಹಿ, ಪ್ರತಿಭಾಶಾಲಿನಿ ಅಧ್ಯಾಪಕಿ ಇದ್ದಳು. ಅಲ್ಲಿ ಮಕ್ಕಳು ಸ್ವೇಚ್ಛೆಯಿಂದ, ಸ್ವತಂತ್ರರಾಗಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿದ್ದರು. ಕೆಲವು ಚಿತ್ರ ರಚಿಸುತ್ತಿದ್ದರು. ಕೆಲವರು ಮರದ ತುಂಡುಗಳನ್ನು–ಆಕೃತಿಗಳನ್ನು ಜೋಡಿಸುತ್ತಿದ್ದರು. ಇನ್ನೂ ಕೆಲವರು ಶಿಶುಗೀತೆಗಳನ್ನು ಹಾಡುತ್ತಿದ್ದರು. ಉಳಿದ ಕೆಲವರು ಚಿತ್ರ ಪುಸ್ತಕಗಳನ್ನು ತಿರುವಿ ಹಾಕುತ್ತಿದ್ದರು. ಹೀಗೆ ಆ ಸ್ವತಂತ್ರ ಅವಧಿಯಲ್ಲಿ (Free Period) ಮಕ್ಕಳು ಅವರಿಗೆ ಖುಶಿ ಕೊಟ್ಟ ಚಟುವಟಿಕೆಗಳಲ್ಲಿ ತಲ್ಲೀನರಾಗಿದ್ದರು. ಆಟದಿಂದ ಪಾಠ ಅನಿರ್ಬಂಧಿತವಾಗಿ ನಡೆಯುತ್ತಿತ್ತು. ಅಧ್ಯಾಪಕಿ ಕೇವಲ ಮಾರ್ಗದರ್ಶಿನಿಯಾಗಿದ್ದಳು. ಅವಳು ಕೂಡ ಮಕ್ಕಳೊಡನೆ ನಕ್ಕು ನಲಿದು, ಹಸನ್ಮುಖಿಯಾಗಿದ್ದಳು. ಅಂತಹ ಸುಂದರ ಸನ್ನಿವೇಶದಲ್ಲಿ ಮಕ್ಕಳ ಚಟುವಟಿಕೆಗೆ ಯಾವ ಅಡಚಣೆಯೂ ಇರಲಿಲ್ಲ. ಮಕ್ಕಳೇ ಗುಂಪು ಗುಂಪುಗಳಾಗಿ ಕೂಡುತ್ತಾರೆ, ಚಟುವಟಿಕೆಗಳನ್ನು ಆರಿಸಿಕೊಳ್ಳುತ್ತಾರೆ, ಸಾಧನಗಳನ್ನು ಬಳಸಿಕೊಳ್ಳುತ್ತಾರೆ, ಆಯಾಸವಾಗುವವರೆಗೆ ಆಟೋಟ–ಚಟುವಟಿಕೆಗಳಲ್ಲಿ ಮಗ್ನರಾಗುತ್ತಾರೆ. ಮಕ್ಕಳ ಮನಃ ಪ್ರಪಂಚ – ಅವರ ಆಸಕ್ತಿ, ಅಭಿರುಚಿಯ ಒಂದು ಇಣುಕು ನೋಟ ಅಲ್ಲಿ ನನಗಾಯಿತು.

ಯಾವುದೇ ಒಂದು ತರಗತಿಯಲ್ಲಿ ಪ್ರತಿಯೊಂದು ಮಗುವೂ ಇನ್ನೊಂದು ಮಗುವಿನಂತಿಲ್ಲ. ಪ್ರಾಯದಲ್ಲಿ ಅವರೆಲ್ಲಾ ಹೆಚ್ಚು ಕಡಿಮೆ ಸಮಾನರಿರಬಹುದು. ದೈಹಿಕ–ಮಾನಸಿಕ ಭಾವನಾತ್ಮಕ ವ್ಯತ್ಯಾಸ ಇದ್ದೇ ಇದೆ. ಪರಿಣಾಮವಾಗಿ ಮಕ್ಕಳ ಆಸಕ್ತಿ – ಅಭಿರುಚಿಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಅಂತರವಿದ್ದೇ ಇದೆ. ಸಣ್ಣ ಕ್ಲಾಸಿನಲ್ಲಿರುವ ಮಕ್ಕಳ ಆಸಕ್ತಿ – ಕುತೂಹಲಗಳು ಬೆಳೆದ ಹಾಗೆ ವಿಸ್ತಾರವಾಗುತ್ತಾ ಹೋಗುತ್ತದೆ. ಇದು ವ್ಯಕ್ತಿಗೆ ಸಿಗುವ ಶಿಕ್ಷಣ. ಅವನನ್ನು ಆವರಿಸಿರುವ ಸಮಾಜ–ಶಿಕ್ಷಣ ವ್ಯವಸ್ಥೆಯನ್ನು ಹೊಂದಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮನೆಯಲ್ಲಿ ಮಗುವಿಗೆ ಎಂತಹ ವಾತಾವರಣ–ಮಾರ್ಗದರ್ಶನವಿದೆ ಎಂಬುದು ಮುಖ್ಯ. ಇಂದು ಹೆಚ್ಚಿನ ಮನೆಗಳಲ್ಲಿ, ಶಾಲೆಗಳಲ್ಲಿ ಮಕ್ಕಳ ಮನಸ್ಸನ್ನು ಅರಳಿಸುವ, ಅವರ ಅಭಿರುಚಿಗೆ ಪುಷ್ಟಿ ಕೊಡುವ ಸನ್ನಿವೇಶಗಳು ತೀರಾ ಕಡಿಮೆ.

ಬಹುಮಂದಿ ತಂದೆ ತಾಯಂದಿರು ತಮ್ಮ ಮಕ್ಕಳು, ಡಾಕ್ಟರ್, ಇಂಜಿನಿಯರ್, ಹಿರಿಯ ಅಧಿಕಾರಿ ಆಗಬೇಕೆಂದು ಹಂಬಲಿಸುತ್ತಾರೆ. ತಂದೆ ಸ್ವತಃ ಇಂಜಿನೀಯರ್, ವೈದ್ಯರಾದಲ್ಲಿ ತಮ್ಮ ಮಕ್ಕಳು ಅದೇ ವೃತ್ತಿಯನ್ನು ಅನುಸರಿಸಬೇಕೆಂದು ಅವರ ಬಯಕೆ. ಆಸಕ್ತಿಯಿಲ್ಲದೆ ಹಿರಿಯರ

ಬಲವಂತಕ್ಕೆ ವ್ಯಾಸಂಗ ಮುಂದುವರಿಸಿದ ವಿದ್ಯಾರ್ಥಿಗಳು ಶಿಕ್ಷಣ-ಜೀವನ ಎರಡರಲ್ಲೂ ವಿಫಲರಾಗುತ್ತಾರೆ. ಸಂಕೀರ್ಣ ಸಮಾಜದ ಉನ್ನತಿಗೆ ಎಲ್ಲಾ ವರ್ಗದ ಅಭಿರುಚಿ, ಪ್ರಾವೀಣ್ಯದ ಜನ ಬೇಕಾಗಿದ್ದಾರೆ ಎಂಬುದನ್ನು ಹೆಚ್ಚಿನ ಮಂದಿ ಮರೆತಿದ್ದಾರೆ. ಸಮಾಜದ ಸುಗಮ ನಿರ್ವಹಣೆಗೆ ಕಸ ಗುಡಿಸುವವನೂ ಬೇಕು, ಕಂಪ್ಯೂಟರ್ ತಜ್ಞನೂ ಬೇಕು. ಇಲ್ಲಿ ಮೇಲು-ಕೀಳಿನ ಪ್ರಶ್ನೆ ಇಲ್ಲ. ಪ್ರತಿಯೊಬ್ಬನೂ ಅವನವನ ಶಕ್ತಿ, ಸಾಮರ್ಥ್ಯ, ಒಲವುಗಳಿಗನುಗುಣವಾಗಿ ಕಸಬುದಾರನಾಗುವ ಅವಕಾಶವಿರಬೇಕು. ಅದಕ್ಕಾಗಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಶಾಲಾ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ವೃತ್ತಿಪರ ಅಂಶಗಳು ಇರಬೇಕು. ಅಂದರೆ ಮಕ್ಕಳ ಶಿಕ್ಷಣ ಮಕ್ಕಳಲ್ಲಿ ಅಭಿರುಚಿಯ ಹಂದರವನ್ನು ವಿಸ್ತರಿಸದೆ ಇರದು. ಇದು ಮುಂದಕ್ಕೆ ವೃತ್ತಿಪರ ಯಶಸ್ಸಿಗೆ ಬುನಾದಿ.

ವೃತ್ತಿಪರ ಯಶಸ್ಸು ಪಡೆದ ಕೆಲವರ ಅಭಿರುಚಿ ವೈವಿಧ್ಯವನ್ನು ಇಲ್ಲಿ ಪ್ರಸ್ತಾವಿಸಬಹುದಾಗಿದೆ. ವೃತ್ತಿಯಲ್ಲಿ ಪರಿಣತರಾಗಿ ಯಶಸ್ಸು ಗಳಿಸಿದ ಇವರ ಹವ್ಯಾಸ – ಆಸಕ್ತಿ– ಅಭಿರುಚಿ ವಿಸ್ತಾರವನ್ನು ಕಂಡು ನಾನು ದಂಗಾಗಿದ್ದೇನೆ. ಪದವೀಧರ ಅಧ್ಯಾಪಕರೊಬ್ಬರು ಮನೆಯಲ್ಲಿ 4 ಹಸುಗಳನ್ನು ಕಟ್ಟಿಕೊಂಡು, ಚಿಕ್ಕ ಚೊಕ್ಕ ಡೈರಿಯನ್ನು ವೈಜ್ಞಾನಿಕವಾಗಿ ನಡೆಸುತ್ತಿದ್ದಾರೆ. ಇಂಜಿನೀಯರ್ ಮಿತ್ರರೊಬ್ಬರು ಬಿಡುವಿನ ಸಮಯದಲ್ಲಿ ತೋಟಗಾರಿಕೆಯಲ್ಲಿ ನಿರತರಾಗಿ, ಮನೆಯಲ್ಲಿ ಹೂಗಿಡಗಳ ನಂದನವನವನ್ನು ನಿರ್ಮಾಣ ಮಾಡಿದ್ದಾರೆ. ಡಾಕ್ಟರ್ ಮಹಾಶಯರೊಬ್ಬರ ಹವ್ಯಾಸ ವಿರಾಮ ಕಾಲದಲ್ಲಿ ಯಕ್ಷಗಾನ, ನಾಟಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದಾಗಿತ್ತು. ಸಂಗೀತ, ಸಾಹಿತ್ಯ, ಕಲೆ, ಬಣ್ಣದ ಚಿತ್ರ ಬರೆಯುವುದು, ಜೇನು ಸಾಕಣೆ ಇತ್ಯಾದಿ ಹತ್ತು ಹಲವು ಹವ್ಯಾಸಗಳಲ್ಲಿ ತಮ್ಮನ್ನು ತಾವೇ ಮರೆಯುವ ವೃತ್ತಿಪರರು, ಉದ್ಯೋಗಿಗಳು ಎಲ್ಲೆಲ್ಲೂ ಇದ್ದಾರೆ. ಅದಕ್ಕೇನೆ ಲೋಕೋಭಿನ್ನ ರುಚಿಃ ಎಂಬ ಮಾತು ಬಳಕೆಗೆ ಬಂದಿದೆ. ಉತ್ತಮ ಶೈಕ್ಷಣಿಕ ಹವ್ಯಾಸಗಳು ಸ್ವತಂತ್ರ, ಸಮಗ್ರ, ಸುಂದರ ಜೀವನ ಸವಿ ಉಣ್ಣಲು ಸಹಕಾರಿ. ಮನಸ್ಸು ಭಾವನೆಗಳ ಸಂಸ್ಕಾರಕ್ಕೆ ಸ್ಫೂರ್ತಿ. ಆದ್ದರಿಂದ ಮನೆಗಳಲ್ಲಿ ಶಾಲೆಗಳಲ್ಲಿ ಮಕ್ಕಳ ಆಸಕ್ತಿ ಅಭಿರುಚಿಗಳ ಉದ್ದೀಪನ – ವಿಸ್ತರಣ ಕಾರ್ಯ ಎಳೆಯ ಪ್ರಾಯದಿಂದಲೇ ಆಗಬೇಕಾದುದು ಅಗತ್ಯ. ಮಗು ಮನುಷ್ಯನ ಜನಕ (child is the father of man) ಎಂಬುದನ್ನು ಮರೆಯದಿರೋಣ.

**-ಪ್ರೊ। ಕೆ. ಆರ್. ಹಂದೆ**

ಪಂಚಮ್. ನಾಯರ್‌ಕೆರೆ ರಸ್ತೆ, ಬ್ರಹ್ಮಗಿರಿ, ಉಡುಪಿ

★★★★

# ಗೀತೆಯಲ್ಲಿ – ಕರ್ಮ

ಮಾನವನ ಮನಸ್ಸು ತನ್ನದೇ ಆದ ತಪ್ಪುಗಳನ್ನು ಕಂಡು ಹಿಡಿಯುವಲ್ಲಿ ಮತ್ತು ಒಂದು ವೇಳೆ ಕಂಡುಹಿಡಿದರೆ ಅದನ್ನು ತಿದ್ದಿಕೊಳ್ಳುವಲ್ಲಿ ಅಸಮರ್ಥವಾದುದಾಗಿದೆ. ಅರ್ಧಮರ್ದ ತಿಳುವಳಿಕೆಯಲ್ಲಿ ಅರ್ಧಮರ್ದ ರೀತಿಯಲ್ಲಿ ರೂಪಿಸಿಕೊಂಡ ಸಿದ್ಧಾಂತಗಳಿಗೆ ಅಂಟಿಕೊಂಡು ಅದರ ಪ್ರವರ್ತಕವಾಗಿ ಅದುವೇ ಸತ್ಯದ ಹೆದ್ದಾರಿಯೆಂದು ತಿಳಿಯುವುದು ಈ ತರ್ಕದ ಸ್ವಭಾವ. ಪ್ರತಿಯೊಬ್ಬರ ಜೀವನವೂ ಅವರವರ ಕರ್ಮಾನುಸಾರವೇ ನಡೆಯುತ್ತದೆ. ಮಾನವರು ಈ ಪ್ರಪಂಚದಲ್ಲಿ ಜನ್ಮ ತಾಳುವಾಗಲೇ ಕರ್ಮ ಬಂಧಿತರಾಗಿ ಜನಿಸುತ್ತಾರೆ. ಹಾಗಾದರೆ ಈ ಕರ್ಮ ಎಂದರೇನು? ಅದು ಎಲ್ಲಿಂದ ಹೇಗೆ ಮನುಷ್ಯರಿಗೆ ಅಂಟಿಕೊಳ್ಳುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕರ್ಮ ಎಂದರೆ ಈ ಜನ್ಮದ ಮತ್ತು ಹಿಂದಿನ ಜನ್ಮದ ಕೆಲಸಗಳು ಮತ್ತು ಅವುಗಳ ಪರಿಣಾಮಗಳು.

ಭಗವದ್ಗೀತೆಯ 18 ಅಧ್ಯಾಯಗಳಲ್ಲಿಯೂ ಶ್ರೀ ಕೃಷ್ಣನು ಉಪದೇಶಿಸಿರುವುದು ಕರ್ಮಯೋಗವೇ ಕರ್ಮ ಸಂನ್ಯಾಸಕ್ಕಿಂತ ಹೆಚ್ಚಿನದು ಎಂದು. ಗೀತೆಯು ಕರ್ಮಯೋಗವನ್ನೇ ಪ್ರತಿಪಾದಿಸುತ್ತದೆಯೆಂದು ನಾವು ಒಪ್ಪಿಕೊಂಡರೆ ಅದು ಯಾವ ರೀತಿಯ ಕರ್ಮಗಳನ್ನು ಬೋಧಿಸುತ್ತದೆ ಎಂದು ವಿಮರ್ಶಿಸೋಣ. ಜ್ಞಾನ ಯೋಗದಲ್ಲಿ ವಿಶದವಾಗಿ ಹೇಳಿರುವಂತೆ ನಾವು ಮಾಡುವ ಕರ್ಮಗಳ ಸಂಪೂರ್ಣ ಜ್ಞಾನವನ್ನು ಪಡೆದುಕೊಂಡು ಆ ಕರ್ಮವನ್ನು ಭಕ್ತಿಯಿಂದ ಮಾಡಿ ಪರಮಾತ್ಮನಿಗೆ ಅರ್ಪಿಸಬೇಕು. ಅಂದರೆ ಜ್ಞಾನ ಯೋಗ ಹಾಗೂ ಭಕ್ತಿಯೋಗದಲ್ಲಿ ನಮಗೆ ಸಂಪೂರ್ಣವಾದ ಆಧ್ಯಾತ್ಮಿಕ ಶಾಂತಿ, ಸಮಾಧಾನಗಳನ್ನು ತರುವಂತಹ ಜ್ಞಾನದಲ್ಲಿಯೇ ಪರಿಸಮಾಪ್ತಿಯನ್ನು ಹೊಂದುವಂತಹ ಕರ್ಮಗಳನ್ನೇ ಪರಮಾತ್ಮನು ಬೋಧಿಸುತ್ತಾನೆ. ಪರಮಾತ್ಮನಲ್ಲಿ ಅನನ್ಯ ಭಕ್ತಿಯಿರಬೇಕೆಂದು ಭಕ್ತಿಯೋಗವು ಹೇಳಿದರೆ, ಅವನೇ ಪರಮಾತ್ಮನಾಗಿರುವುದರಿಂದ ಆತನಲ್ಲಿಯೇ ಎಲ್ಲಾ ಜ್ಞಾನದ ಪರಿಸಮಾಪ್ತಿಯೆಂದು ಜ್ಞಾನ ಯೋಗವು ಹೇಳುತ್ತದೆ ಮತ್ತು ಅವನೇ ಕರ್ಮ ಪ್ರಭುವೂ ಕೂಡ. ಏಕೆಂದರೆ ಎಲ್ಲಾ ಕರ್ಮಗಳೂ ಅವನತ್ತಲೇ ಸಾಗುವುದು.

ಹಾಗಾದರೆ ಗೀತೆಯು ಹೇಳುವುದು ಯಾವ ಕರ್ಮ ? ಗೀತೆಯು ಹೇಳುವುದು ದಿವ್ಯ ಕರ್ಮ, ಸಾಮಾಜಿಕ ಕರ್ತವ್ಯಗಳಲ್ಲ. ದಿವ್ಯ ಸಂಕಲ್ಪದ ಸ್ವಾರ್ಥ ರಹಿತ ಮತ್ತು ಎಲ್ಲಾ ನಿಯಮಗಳನ್ನು ತ್ಯಜಿಸಿ ಕೇವಲ ಪ್ರಕೃತಿ ಹಾಗೂ ಮಾನವರ ಹಿಂದಿರುವ ಪರಮಾತ್ಮನಿಗಾಗಿ ಮಾಡುವ ಕರ್ಮ, ಯಜ್ಞಗಳಾಗಬೇಕೆಂದು ಗೀತೆಯು ಹೇಳುತ್ತದೆ. ಏಕೆಂದರೆ ವ್ಯವಹಾರದಲ್ಲಿ ಕರ್ತವ್ಯವು ಸಾಮಾಜಿಕ ವಿಚಾರಗಳನ್ನು ಅವಲಂಬಿಸಿರುತ್ತದೆ. ಅದು ನಮ್ಮಲ್ಲಿಯ ಪರಸ್ಪರ ಸಂಬಂಧವನ್ನವಲಂಬಿಸಿರುತ್ತದೆ. ಉದಾಹರಣೆಗೆ ಮಕ್ಕಳನ್ನು ಪೋಷಿಸುವುದು ತಂದೆ ತಾಯಿಗಳ ಕರ್ತವ್ಯ. ಈ ಸಂಬಂಧಗಳನ್ನಿಟ್ಟುಕೊಂಡಿರುವವರೆಗೆ ಆಯಾ ಕರ್ತವ್ಯಗಳ ಪಾಲನೆಯಾಗಬೇಕಾಗುತ್ತದೆ. ಮನಸ್ಸನ್ನು ಪ್ರಶಾಂತವಾಗಿಟ್ಟುಕೊಳ್ಳಲು ಈ ಕರ್ಮ ಯೋಗದ ಅನುಷ್ಠಾನ ಬಹಳ ಅವಶ್ಯವಾದದ್ದು. ಇದನ್ನೇ ಪರಮಾತ್ಮನು ಗೀತೆಯಲ್ಲಿ ಹೀಗೆ ಹೇಳುತ್ತಾನೆ :

**ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।**

**ಬಹುಶಾಖಾ ಹ್ಯನಂತಾಂಶ್ಚ ಬುದ್ದಯೋ$_s$ ವ್ಯವಸಾಯಿನಾಮ್ ॥**

ಎಂದರೆ 'ಈ ಕರ್ಮ ಯೋಗದಲ್ಲಿ ನಿಶ್ಚಯ ಸ್ವಭಾವವುಳ್ಳ ಬುದ್ಧಿಯು, ಏಕನಿಷ್ಠವಾಗಿರುತ್ತದೆ. ನಿಶ್ಚಯ ಸ್ವಭಾವವಿಲ್ಲದವರ ಬುದ್ಧಿಗಳು ಅನೇಕ ಶಾಖೆಗಳುಳ್ಳವಾಗಿಯೂ, ಅನಂತವಾಗಿಯೂ ಇರುತ್ತವೆ. ಕರ್ಮಯೋಗವನ್ನು ಅನುಸರಿಸುವವನ ಬುದ್ಧಿಯು ಒಂದೇ ಸಮನಾಗಿ ನಿಲ್ಲುತ್ತದೆ. ಹೀಗೆ ನಿಲ್ಲಿಸಿಕೊಳ್ಳಲು ಪ್ರಯತ್ನಿಸದೇ ಇರುವ ಮಾನವರ ಬುದ್ಧಿಯು ಅನೇಕ ಕವಲುಗಳದ್ದಾಗಿರುತ್ತದೆ. ಆದರೆ ನಮಗೆ ಕರ್ಮ ಮಾಡುವುದಕ್ಕೆ ಮಾತ್ರವೇ ಅಧಿಕಾರ. ಅಂದರೆ ಈ ಪ್ರಪಂಚದಲ್ಲಿ ನಿನ್ನ ಕರ್ತವ್ಯ ಕರ್ಮಗಳನ್ನು ಮಾಡುತ್ತಾ ಇರು, ಅದರ ಫಲದ ಬಗ್ಗೆ ಚಿಂತಿಸಬೇಡ ಎಂದು ಪರಮಾತ್ಮನು ಹೇಳುತ್ತಾನೆ. ವ್ಯವಸಾಯ ಎಂದರೆ ಕೃಷಿ ಮಾಡುವುದು. ಇದರ ಅರ್ಥ ಅಭ್ಯಾಸ ಮಾಡು, ಸಾಧನೆ ಮಾಡು ಎಂದು. ಪ್ರಪಂಚವೆಲ್ಲವೂ ಮನಸ್ಸಿನ ವ್ಯಾಪಾರವೇ ಆದ್ದರಿಂದ ಪ್ರಯತ್ನಪೂರ್ವಕವಾಗಿ ನಮ್ಮ ಮನಸ್ಸನ್ನು ನಿಲ್ಲಿಸುವ ಸಾಧನೆ ಮಾಡಬೇಕು. ಇದನ್ನು ಕರ್ಮಯೋಗದ ಮೂಲಕ ಮನಸ್ಸನ್ನು ಪ್ರಶಾಂತವಾಗಿರಿಸಿಕೊಳ್ಳುವ ಸಾಧನೆ ಮಾಡಬೇಕೆಂದು ಶ್ರೀ ಕೃಷ್ಣನು ಸಲಹೆ ಮಾಡುತ್ತಾನೆ.

ನಮ್ಮ ಜೀವನದಲ್ಲಿ ಕಷ್ಟ, ಸುಖ, ಏಳು–ಬೀಳು, ನೋವು ನಲಿವುಗಳ ಅನುಭವದ ಮೂಲಕ ನಮ್ಮನ್ನು ಮೇಲೆ ಕೆಳಗೆ ಕುಣಿದಾಡಿಸುತ್ತಿರುವುದೇ ಕರ್ಮ ಬಂಧನ. ನಮ್ಮ ಮನಸ್ಸಿನಲ್ಲಿ ಆಗತಕ್ಕ ತಳಮಳದ ಪರಿಣಾಮವಾಗಿಯೇ ಜೀವನದಲ್ಲಿ ಹಾರಾಟ–ಹೋರಾಟಗಳು ನಡೆಯುತ್ತವೆ. ಈ ಕರ್ಮದ ಕಟ್ಟಿನಿಂದ ನಾವು ಕಳಚಿಕೊಂಡರೆ ಮನಸ್ಸು ಪ್ರಶಾಂತವಾಗುತ್ತದೆ. 'ಕರ್ಮ ಬಂಧಂ ಪ್ರಹಾಸ್ಯಸಿ' ಎಂದು ಗೀತೆಯಲ್ಲಿ ಹೇಳಿದೆ. ಅಂದರೆ ಕರ್ಮದ ಕಟ್ಟನ್ನು ಕಳಚಿಕೋ ಮತ್ತು ಪರಿಶುದ್ಧವಾದ ಸಮಸ್ಥಿತಿಯ ಮನಸ್ಸಿನಿಂದ ಇರು ಎಂಬುದು. ಸಾರಾಂಶವೇನೆಂದರೆ ನಾವು ಯಾವುದೇ ಸ್ಥಿತಿಯಲ್ಲಿದ್ದರೂ ಮನಸ್ಸಿನ ಸಮತೋಲನವನ್ನು ಕಾಯ್ದುಕೊಳ್ಳಬೇಕು.

ಕರ್ಮವನ್ನು ಕಳಚಿಕೊಳ್ಳುವುದು ಜನ ಸಾಮಾನ್ಯರಿಗೆ ಅಷ್ಟು ಸುಲಭದ ಮಾತಲ್ಲ. ಕರ್ಮಗಳನ್ನು ಮಾಡಿಸುವುದು ಮತ್ತು ಮಾಡುವುದು ಪ್ರಕೃತಿ, ಫಲಾಪೇಕ್ಷೆಗಳನ್ನು ತೊರೆದು ಸಮಭಾವ ತಾಳಿ ಕರ್ಮಗಳನ್ನು ಮಾಡಿದರೆ ಅದು ತ್ಯಾಗವಾಗುತ್ತದೆ. ಆದರೆ ಭಕ್ತಿಯೂ ಕೂಡ ಅಷ್ಟೇ ಮಹತ್ವದ್ದು. ಭಕ್ತಿಯಿಂದ ಕೂಡಿದ ಕರ್ಮ ಬಹಳ ಉತ್ತಮವಾದದ್ದು. ಜ್ಞಾನ ಭಕ್ತಿ ಹಾಗೂ ಕರ್ಮಗಳ ಸಂಯೋಗದಿಂದ ಜೀವಿಯು ಶಾಶ್ವತ ಶಾಂತಿಯನ್ನು ಪಡೆಯುತ್ತಾನೆ. ಇದು ಗೀತೆಯ ಸಮನ್ವಯ. ಕರ್ಮಗಳನ್ನು ಬಿಡುವುದಾಗಲೀ ಕರ್ಮ ಸಂನ್ಯಾಸವಾಗಲೀ ಮೋಕ್ಷ ಸಾಧನೆಯ ಸರಿಯಾದ ಮಾರ್ಗವಲ್ಲ. ಈ ಕ್ರಮಗಳು ಮೋಕ್ಷವನ್ನು ತಂದು ಕೊಡುವುದಕ್ಕಾಗಲೀ, ಅಥವಾ ಮನಸ್ಸಿನ ಸಮತೋಲನವನ್ನು ಪಡೆಯುವುದಕ್ಕಾಗಲೀ ಸಮರ್ಥವೂ ಅಲ್ಲ. ಕರ್ಮಗಳಲ್ಲಿಯೇ ಮಾನವರ ಅದಿಕಾರವಲ್ಲದೆ ಅವುಗಳ ಫಲದಲ್ಲಲ್ಲ. ಆದರೆ ಕರ್ಮದ ಈ ಅಧಿಕಾರಗಳು ಎಲ್ಲಿಂದ ಬಂದುವು? ಇದಕ್ಕೆ ಮಂಕುತಿಮ್ಮನ ಕಗ್ಗದ ಈ ಪದ್ಯದಲ್ಲಿ ನಮಗೆ ಉತ್ತರವಿದೆ.


**'ಋಣದ ಜಾಲವನಂತ, ಕರುಮ ಚಕ್ರವನಂತ ।**
**ಜನುಮ ಜನುಮದ ಕಥೆಯ ತಂತುಗಳನಂತ ॥**
**ಅನವರತ ನೂತನವಿದೆನಿಪ ವಿಶ್ವದ ತಂತ್ರ ।**
**ಬಿನದ ಪರಬೊಮ್ಮಂಗೆ – ಮಂಕುತಿಮ್ಮ ॥**

**ತೋಟದೂರು ಸೀತಾರಾಮ ಹೆಬ್ಬಾರ್**, ಬೆಂಗಳೂರು

ವ್ಯಕ್ತಿ ಪರಿಚಯ

## ಸಾಧನೆಯ ಚೇತನ

# ಪಿ. ಜನಾರ್ದನ ಭಟ್



'ಕುಮಾರ ಜನ್ನ' ಎನ್ನುವ ಕಾವ್ಯನಾಮದಿಂದ ಪ್ರಸಿದ್ಧರಾದ ಪಿ. ಜನಾರ್ದನ ಭಟ್ ಇವರದು ಬಹುಮುಖ ಪ್ರತಿಭೆಯನ್ನು ಹೊಂದಿದ ವ್ಯಕ್ತಿತ್ವ. ಒಬ್ಬ ನಿಷ್ಠಾವಂತ ಹೊಟೇಲ್ ಉದ್ಯಮಿಯಾಗಿ ಯಶಸ್ಸನ್ನು ಕಂಡವರು. ಜೊತೆಗೆ ಹಲವಾರು ಹವ್ಯಾಸಗಳನ್ನು ಮೈಗೂಡಿಸಿಕೊಂಡು ಕಳೆದ 65 ವರ್ಷಗಳಿಂದಲೂ ಒಬ್ಬ ಪ್ರಾಮಾಣಿಕ, ಶಿಸ್ತುಬದ್ಧ ವ್ಯಕ್ತಿಯಾಗಿ ಈಗ ಪ್ರಬುದ್ಧ 76ರ ವಯಸ್ಸಿನ ಪಿ. ಜನಾರ್ದನ ಭಟ್ಟರು ಸ್ವಂತ ಪರಿಶ್ರಮದಿಂದ ಸೋಲುಗಳನ್ನು ಗೆಲುವಿನ ಮೆಟ್ಟಿಲುಗಳನ್ನಾಗಿ ಪರಿವರ್ತಿಸಿಕೊಂಡು 'ಏಕವ್ಯಕ್ತಿ' ಸಂಸ್ಥೆಯಾಗಿ ಬೆಳೆದಿದ್ದಾರೆ ಎಂದರೆ ಅತಿಶಯೋಕ್ತಿಯೇನಲ್ಲ. ಛಲವೊಂದಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಜ್ವಲಂತ ನಿದರ್ಶನ ಇವರು.

ಕೇವಲ ಹತ್ತನೆಯ ತರಗತಿಯವರೆಗೆ ಓದಿರುವ ಇವರು ಔಪಚಾರಿಕ ಶಿಕ್ಷಣಕ್ಕೆ ತಿಲಾಂಜಲಿಯನ್ನಿತ್ತು ಬದುಕುವ ಕಲೆಯನ್ನು ಕರಗತ ಮಾಡಿಕೊಂಡು ತದನಂತರದಲ್ಲಿ ಮಾಡಿದ ಸಾಧನೆ ಮೇರು ಸದೃಶ. ಒಬ್ಬ ಸಹೃದಯ ಓದುಗನಾಗಿ ಓದಿನ ಗೀಳನ್ನು ಅಂಟಿಸಿಕೊಂಡವರು. ಇಂಗ್ಲೀಷ್ ಮತ್ತು ಕನ್ನಡ ಕಾದಂಬರಿಗಳನ್ನು ಧಂಡಿಯಾಗಿ ಓದಿ ತಮ್ಮ ಜ್ಞಾನ ತೃಷೆಯನ್ನು ಇಂಗಿಸಿಕೊಂಡವರು. ಆ ಮೂಲಕ ಜ್ಞಾನಾಭಿವೃದ್ಧಿ ಮಾಡಿಕೊಂಡು ಸೃಷ್ಟಿಶೀಲರಾಗಿ ಪ್ರಾಯೋಗಿಕ ಬದುಕಿಗೆ ತಮ್ಮನ್ನು ತಾವೇ ತೆರೆದುಕೊಂಡವರು. ಕತೆ, ಕವನ, ಚರಿತ್ರೆ ಇವರ ಮೆಚ್ಚಿನ ಓದು. ಕರಾವಳಿ ಪ್ರದೇಶದ ಗಂಡುಕಲೆ ಎಂದೆನಿಸಿಕೊಂಡ ಯಕ್ಷಗಾನ ಸೆಳೆತವು ಇವರಲ್ಲಿರುವ ಕಲಾ ಆಸಕ್ತಿಯನ್ನು ಕೆರಳಿಸಿತೆಂದರೆ ತಪ್ಪಾಗಲಾರದು.

ಇವರು ಜೀವಕ್ಕೆ ಜೀವವಾಗಿ ಬೆಳೆಸಿದ ಇನ್ನೊಂದು ಕಲೆ ನಾಟಕ. ನಾಟಕದಿಂದ ಜೀವನ ಸಾರ್ಥಕವಾಗುತ್ತದೆ ಎಂಬ ಭಾವನೆ ಇವರದು. ಚಾರಿತ್ರಿಕ, ಪೌರಾಣಿಕ ಮತ್ತು ಸಾಮಾಜಿಕ ಹೀಗೆ ನಾಟಕದ ವಿವಿಧ ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದವರು. ಸುಮಾರು 50 ವರ್ಷಗಳಿಂದಲೂ ಬೆಂಗಳೂರಿನ ಹಲವು ರಂಗಭೂಮಿಗಳಲ್ಲಿ ತಮ್ಮ ನಾಟಕಗಳನ್ನು ಪ್ರಸ್ತುತ ಪಡಿಸಿದವರು. 'ಭಕ್ತಿ ಭಂಡಾರಿ ಬಸವೇಶ್ವರ' ನಾಟಕದಲ್ಲಿ ಬಿಜ್ಜಳನ ಪಾತ್ರಧಾರಿಯಾಗಿ ಸಾವಿರಾರು ಪ್ರೇಕ್ಷಕರ ಹೃದಯ ಸಿಂಹಾಸನದಲ್ಲಿ ನೆಲೆಸಿದವರು. ಮೈಸೂರು ಹಾಗೂ ಬೆಂಗಳೂರು ದಸರಾ ಉತ್ಸವವನ್ನೊಳಗೊಂಡಂತೆ ಈ ನಾಟಕ ಸುಮಾರು 1000 ಬಾರಿ ನಾಡಿನಾದ್ಯಂತ ಪ್ರದರ್ಶನ ಕಂಡಿದೆ. ಉತ್ತರ ಕರ್ನಾಟಕದಲ್ಲಿ ಸಹಸ್ರ ಸಹಸ್ರ ಅಭಿಮಾನಿಗಳ ಸಮ್ಮುಖದಲ್ಲಿ ಬಸವೇಶ್ವರ ನಾಟಕವನ್ನು ಆಡಿ ತೋರಿಸಿ ಅಲ್ಲಿನ ಜನರಿಂದ ಪ್ರಶಂಸೆಯ ಹೂಮಳೆಯ ಅಭಿಷೇಕವನ್ನು ಮಾಡಿಸಿಕೊಂಡವರು.

1992ರಲ್ಲಿ 'ದಕ್ಷಗರ್ವಭಂಗ' ಎನ್ನುವ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಈ ನಾಟಕದ

ಕ್ಯಾಸೆಟನ್ನೂ ಬಿಡುಗಡೆ ಮಾಡಲಾಗಿದೆ. ಸಾಮಾಜಿಕ ನಾಟಕ ಸೇರಿದಂತೆ ಸುಮಾರು 500ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇಷ್ಟೇ ಅಲ್ಲದೆ ಕೈಲಾಸಂ, ಶ್ರೀರಂಗ, ಪರ್ವತವಾಣಿಯವರ ನಾಟಕಗಳನ್ನು ಆಡುವುದರಲ್ಲಿಯೂ ಇವರು ಸಿದ್ಧಹಸ್ತರು. 1960-1975ರವರೆಗೆ ಅಂದರೆ ಸುಮಾರು 15 ವರ್ಷಗಳ ಕಾಲ ಬೆಂಗಳೂರು ಆಕಾಶವಾಣಿಯ ನಾಟಕ ವಿಭಾಗದಲ್ಲಿ 'ಎ' ದರ್ಜೆಯ ಕಲಾವಿದರಾಗಿ ಖ್ಯಾತ ನಾಮರಾಗಿದ್ದರು. ವೀರ ಪ್ರಧಾನ ನಾಟಕಗಳನ್ನು ರಚಿಸಿ ಪ್ರದರ್ಶಿಸಿದ ಹೆಮ್ಮೆ ಇವರದು.

ಕಳೆದ ಸುಮಾರು 30 ವರ್ಷಗಳಿಂದ ಗಮಕ ಕಲೆಯನ್ನು ರೂಢಿಸಿಕೊಂಡು ಹತ್ತು ಜನರ ತಂಡವನ್ನು ಕಟ್ಟಿಕೊಂಡು ಕರ್ನಾಟಕ, ಬಾಂಬೆ, ದೆಹಲಿ ಹೀಗೆ ಹತ್ತು ಹಲವು ಕಡೆ ಅದೆಷ್ಟೋ ಪ್ರಾತ್ಯಕ್ಷಿಕೆಗಳನ್ನು ನೀಡಿದವರು. ಕೆಲವು ಬಾರಿ ಗಮಕ ರೂಪಕಗಳಿಗೆ ಹೊಸ ಆಧಾರವನ್ನು ಇವರೇ ರಚಿಸಿ ಅವುಗಳನ್ನು ತಮ್ಮ ಗಂಡುದನಿಯಲ್ಲಿ ಬಿತ್ತರಿಸಿದವರು. ಇವರ ಅತ್ಯಂತ ದೊಡ್ಡ ಆಸ್ತಿ ಎಂದರೆ ಇವರ ಕಂಠ. ಇವರಿಗೆ ಕಂಚಿನ ಕಂಠ ದೈವದತ್ತವಾಗಿ ಒಲಿದು ಬಂದಿದೆ. ಸ್ಪಷ್ಟ ಉಚ್ಚಾರ, ಸ್ವರಭಾರದ ಇತಿಮಿತಿ ಇವರಿಗೆ ಕರಗತ.

ಇಷ್ಟೆಲ್ಲಾ ಕಾರ್ಯಚಟುವಟಿಕೆಗಳ ನಡುವೆಯೂ ಸ್ನೇಹಿತರೊಡಗೂಡಿ ಸಮನ್ವಯ ಸಾಂಸ್ಕೃತಿಕ ವೇದಿಕೆಯನ್ನು ಹುಟ್ಟು ಹಾಕಿ ಹಲವು ಪ್ರತಿಭೆಗಳನ್ನು ಬೆಳೆಸಿದರು. ಈಗಾಗಲೇ ಪ್ರಸಿದ್ಧರಾಗಿರುವ ವ್ಯಕ್ತಿಗಳನ್ನು ಗುರುತಿಸಿ ಸಮ್ಮಾನಿಸಿದರು.

ಮೊದಲೇ ತಿಳಿಸಿದಂತೆ ಕತೆ, ಕವನ ಇವರ ನೆಚ್ಚಿನ ಹವ್ಯಾಸವಾಗಿದ್ದು 1967ರಲ್ಲಿ 'ಮತ್ಸ್ಯಗಂಧಿ' ಎಂಬ ಕಥಾ ಸಂಕಲನ, 1990ರಲ್ಲಿ 'ಅನ್ವೇಷಣೆ' ಹಾಗೂ 'ನೆನಪೊಂದು ನೇಣು' ಎಂಬ ಎರಡು ಕಾದಂಬರಿಗಳು ಸಾಹಿತ್ಯ ಲೋಕಕ್ಕೆ ಅರ್ಪಣೆಗೊಂಡಿವೆ. ಅನೇಕ ಸಣ್ಣ ಕತೆಗಳು, ಲೇಖನಗಳು ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ. 1974ರಲ್ಲಿ 'ಸುಹಾಸ' ಎನ್ನುವ ಕೃತಿಯನ್ನು ಸಂಪಾದಕರಾಗಿ ಬಿಡುಗಡೆ ಮಾಡಿದ್ದಾರೆ. ಇದು 1000 ಪುಟಗಳನ್ನು ಹೊಂದಿದ ಬೃಹತ್ತಾದ ಕೃತಿಯಾಗಿದ್ದು ಕನ್ನಡದ ಬೇರೆ ಬೇರೆ ಲೇಖಕರು ಬರೆದ ಅತ್ಯುನ್ನತ ಹಾಸ್ಯ ಲೇಖನಗಳನ್ನು ಒಳಗೊಂಡಿದೆ.

11-3-2011ರಂದು ಬೆಳಗಾವಿಯಲ್ಲಿ ವಿಶ್ವ ಕನ್ನಡ ಕೂಟ ಮತ್ತು ಅದೇ ವರ್ಷ ಬಾಂಬೆಯಲ್ಲಿ ಅಖಿಲ ಭಾರತ ಗಮಕ ಕೂಟದಲ್ಲಿ ಭಾಗವಹಿಸಿ ಅಲ್ಲಿಯೂ ನಾಟಕಗಳನ್ನು ಪ್ರದರ್ಶಿಸಿದರು.

ಇತ್ತೀಚಿನ ದಿನಗಳಲ್ಲಿ ಇವರು ದೂರದರ್ಶನದಲ್ಲಿ ಬರುವ ಹಲವಾರು ಧಾರಾವಾಹಿಗಳಲ್ಲಿ ನಟನಾಗಿ ತನ್ನ ಅಭಿನಯ ಚತುರತೆಯನ್ನು ಮೆರೆದಿದ್ದಾರೆ. ಉತ್ತಮ ಕ್ರಿಕೆಟ್ ಕ್ರೀಡಾಪಟು ಎಂಬುದನ್ನೂ ಮರೆಯುವಂತಿಲ್ಲ. ಇವರ ಮಗ ರವೀಂದ್ರ ಭಟ್ ಸಹ ತಂದೆಯ ಒಲವಿನ ನಾಟಕದ ಗೀಳನ್ನು ಅಲ್ಪಸ್ವಲ್ಪ ಹತ್ತಿಸಿಕೊಂಡಿದ್ದಾರೆ.

ಅಕ್ಟೋಬರ್ 4ನೇ 1935ರಲ್ಲಿ ಪಾರಂಪಳ್ಳಿಯಲ್ಲಿ ಜನಿಸಿದ ಇವರು ಕೋಟದವರು ಎಂಬುದೇ ಕೂಟಬಂಧುಗಳಿಗೆ ಹೆಮ್ಮೆಯ ವಿಷಯ. ತನ್ನ ಹುಟ್ಟೂರಿನ ಬಗ್ಗೆ ಇವರಿಗೆ ಇರುವ ಅಭಿಮಾನವೇ ವರ್ಷಕ್ಕೆ ಹಲವು ಬಾರಿ ಇವರನ್ನು ಈ ನೆಲಕ್ಕೆ ತರುತ್ತಿದೆ. ಈ ವಿಶಿಷ್ಟ ವಿಶೇಷ ರೀತಿಯ ಸಾಧಕನನ್ನು 2011ರಲ್ಲಿ ಗುರುತಿಸಿರುವ ಸರಕಾರದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಾಗರಿಕ ಮಂಡಳಿ 'ನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

**- ಪಿ. ರಾಘವೇಂದ್ರ ಭಟ್**

ಮಾಹಿತಿ

# ಸರಸ್ವತೀ ನದಿ - 'ಗುಪ್ತಗಾಮಿನಿ'

ವಡೇರಹೋಬಳಿ ಮಹಾಬಲೇಶ್ವರ ಹೊಳ್ಳ, ಸುರತ್ಕಲ್

ಈ ಹಿಂದೆ ಬಹುಶಃ ವರ್ಷವೇ ಕಳೆದಿರಬಹುದು - 'ಕೂಟಬಂಧು' ದ್ವೈಮಾಸಿಕದಲ್ಲಿ ಕೂಟಬಂಧುಗಳು ತೀರ್ಥಯಾತ್ರೆ ಮಾಡಿಬಂದು, ತಮ್ಮ ಪರ್ಯಟನೆಯ ಅನುಭವ ಹಾಗೂ ಇತರ ವಿಷಯಗಳ ಬಗ್ಗೆ ಲೇಖನವನ್ನು ಪ್ರಕಟಿಸಿರುತ್ತಾರೆ. ಇದರಲ್ಲಿ ಲೇಖಕರು ಸರಸ್ವತಿ ನದಿಯು ಗುಪ್ತಗಾಮಿನಿಯಾಗಿ ಹರಿಯುವ ಬಗ್ಗೆ ಪ್ರಶ್ನಾರ್ಥಕ ಚಿಹ್ನೆಯನ್ನು (?)ಹಾಕಿರುತ್ತಾರೆ.

ಹದಿನೆಂಟು ಮಹಾ ಪುರಾಣಗಳಲ್ಲಿ ಒಂದಾದ 'ಬ್ರಹ್ಮಮಹಾಪುರಾಣ'ದ 101ನೇ ಅಧ್ಯಾಯ (ಸರಸ್ವತಿ ಸಂಗಮ ವರ್ಣನೆ)ದಲ್ಲಿ ಹೀಗೊಂದು ಉಲ್ಲೇಖವಿದೆ.

ಹಿಂದೊಮ್ಮೆ ಪುರೂವರನೆಂಬ ರಾಜನು ಬ್ರಹ್ಮಸಭೆಗೆ ಹೋಗಿದ್ದನು. ಬ್ರಹ್ಮನ ಬಳಿ ದೇವಿಯಾದ ಸರಸ್ವತಿಯು ರೂಪ ಲಾವಣ್ಯದಿಂದ ಕಂಗೊಳಿಸುತ್ತಿದ್ದಳು. ಅವಳನ್ನು ಕಂಡು ಪುರೂವರನು ಊರ್ವಶಿಯೊಡನೆ ಸರಸ್ವತಿಯ ಪೂರ್ವೋತ್ತರ ಪರಿಚಯ ಕೇಳಿ ತಿಳಿದುಕೊಂಡು ಅವಳನ್ನು ತನ್ನಲ್ಲಿಗೆ ಕರೆತರುವಂತೆ ಹೇಳುತ್ತಾನೆ. ಊರ್ವಶಿಯು ಸರಸ್ವತಿಗೆ ರಾಜನ ಕೋರಿಕೆಯನ್ನು ತಿಳಿಸಲಾಗಿ, ಸರಸ್ವತಿಯು ಸ್ವಯಂ ತಾನೇ ರಾಜನಲ್ಲಿಗೆ ಬಂದಳು. ಸರಸ್ವತಿ ನದೀತೀರದಲ್ಲಿ ಬ್ರಹ್ಮನ ಮಗಳಾದ ಸರಸ್ವತಿಯೊಡನೆ ಪುರೂವರನು ಬಹುಕಾಲ ವಿಹರಿಸಿದನು.

ದಿನವೂ ಸರಸ್ವತಿಯು ಪುರೂವರನನ್ನು ಸಂಧಿಸಿ ಸರಸವಾಡುವುದನ್ನೂ ಮತ್ತು ಅವಳಿಂದ ಸಾರಸ್ವತನು ಜನಿಸಿದ ವಿಷಯವನ್ನು ಸೂಕ್ಷ್ಮವಾಗಿ ನೋಡಿದ ಬ್ರಹ್ಮನು ಅವಳಿಗೆ ನದಿಯಾಗುವಂತೆ ಶಾಪ ಕೊಟ್ಟನು. ಈ ಉಗ್ರ ಶಾಪದಿಂದ ಭಯಗೊಂಡ ಸರಸ್ವತಿಯು ಶಾಪವಿಮೋಚನೆಗಾಗಿ ಗೌತಮಿಯನ್ನು (ಗಂಗೆಯನ್ನು) ಮೊರೆಹೊಕ್ಕಳು. ಗಂಗೆಯು ಶಾಪ ಕೊಟ್ಟದ್ದು ನ್ಯಾಯವಲ್ಲವೆಂದು ಬ್ರಹ್ಮನಿಗೆ ಹೇಳಲಾಗಿ ಬ್ರಹ್ಮನು ಸ್ವಲ್ಪ ಕಾಲ ವಿಚಾರಿಸಿ, ಶಾಪ ನಿವೃತ್ತಿ ಅನುಗ್ರಹಿಸಿದ. ಅದರ ಫಲವಾಗಿ ಸರಸ್ವತಿ ನದಿಯು ಕೆಲವು ಕಡೆ ಕಾಣದಂತೆ ಗುಪ್ತಗಾಮಿನಿಯಾಗಿ ಹರಿಯುವಳು.

**ಆಧಾರ : ಶ್ರೀ ಬ್ರಹ್ಮಮಹಾಪುರಾಣ, ಭಾಗ 1**

ವಿಶೇಷ ಲೇಖನ

# ಕೂಟಬಂಧುಗಳಲ್ಲಿ ಮನವಿ

ಕೂಟ ಬ್ರಾಹ್ಮಣ ಸಮಾಜ ಮೂಲತಃ ಯಜ್ಞಗಳಲ್ಲಿ ಭಾಗವಹಿಸುತ್ತಿದ್ದ ವೈದಿಕರ ಸಮೂಹ. ವಾಜಪೇಯ, ಸೋಮಯಾಗ ಮೊದಲಾದ ಯಜ್ಞಗಳು ನಡೆಯುವುದು ಕಡಿಮೆಯಾದ ಬಳಿಕ ಗಣಹೋಮ, ನರಸಿಂಹ ಹೋಮ, ಚಂಡಿಕಾ ಹೋಮಾದಿಗಳು ನೆರವೇರುತ್ತಿದ್ದವು. ಇತ್ತೀಚೆಗೆ ಅವುಗಳ ಸಂಖ್ಯೆ ಕೂಡ ಕಡಿಮೆಯಾಗಿದೆ. ನಮ್ಮ ಸಮಾಜದಲ್ಲಿ ವೇದಾಧ್ಯಯನ ಕೂಡ ಕಡಿಮೆಯಾಗುತ್ತಿದ್ದು ವೈದಿಕರು ಮತ್ತು ಲೌಕಿಕರು ಎಂಬ ಸ್ಪಷ್ಟ ವಿಭಾಗ ಉಂಟಾಗಿದೆ. ವೈದಿಕರಲ್ಲಿ ಕೂಡ ಆಧುನಿಕ ವಿದ್ಯೆ ಹಾಗೂ ಲೌಕಿಕ ಉದ್ಯೋಗದ ಆಕರ್ಷಣೆ ಹೆಚ್ಚಿದೆ. ಆದ್ದರಿಂದ ವಸಂತ ವೇದಪಾಠ ಶಿಬಿರಗಳ ಮೂಲಕ ಎಲ್ಲ ಉಪನೀತ ವಟುಗಳಿಗೂ ಕನಿಷ್ಠ ವೇದ ವಿದ್ಯೆಯ ಪರಿಚಯ ಹಾಗೂ ಕನ್ಯಕಾ ಸಂಸ್ಕೃ ತಿ ಶಿಬಿರಗಳ ಮೂಲಕ ಎಲ್ಲ ಕನ್ನಿಕೆಯರಿಗೆ ನಮ್ಮ ಸಂಸ್ಕೃ ತಿ, ಸಂಪ್ರದಾಯಗಳ ಪರಿಚಯ ಮಾಡಬೇಕಾಗಿದೆ.

ಇಡೀ ಸಮಾಜದ ನೈತಿಕ ಅಧಃಪತನವನ್ನು ತಡೆಯಲು ಧಾರ್ಮಿಕ ಪುನರುತ್ಥಾನದಿಂದ ಮಾತ್ರ ಸಾಧ್ಯ. ಅದು ಕಾರಣ, ಕೂಟಸ್ಥ ಸಮಾಜ ಬಾಂಧವರಲ್ಲಿ ಧಾರ್ಮಿಕ ಜಾಗೃತಿಯ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಉಂಟಾದ ಧಾರ್ಮಿಕ ಜಾಗೃತಿಯು ಸಮಾಜದಲ್ಲಿ ಪಸರಿಸಿ ನಮ್ಮ ಗುರುಸ್ಥಾನದಲ್ಲಿ ಸಮಾಪನಗೊಳ್ಳಬೇಕು. ಹೀಗೆ ವ್ಯಕ್ತಿ, ಸಮಾಜ ಹಾಗೂ ಗುರು ಸ್ಥಾನ – ಈ ಮೂರು ಹಂತಗಳಲ್ಲಿ ಸಾಧನೆ ನಡೆದು ಧರ್ಮ ಜಾಗೃತಿಯನ್ನು ಸಾಧಿಸಬೇಕಾಗಿದೆ. ಅದಕ್ಕಾಗಿ ಈ ಮೂರು ಹಂತಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಯಾವುದೇ ಆಧ್ಯಾತ್ಮಿಕ ಸಾಧನೆಗೆ ವ್ಯಕ್ತಿಯೇ (individual) ಮೂಲ ಮತ್ತು ಕೇಂದ್ರ. ಈಗಾಗಲೇ ಮಾಡುತ್ತಿರುವ ಸಂಧ್ಯೋಪಾಸನೆ, ದೇವರ ಪೂಜೆ, ಮಂತ್ರ ಜಪ, ವೇದ ಪಠನ, ಸ್ತೋತ್ರಪಠನ, ಭಜನೆ, ದೇವರ ದರ್ಶನಗಳು ಮುಂದುವರಿಯಬೇಕು. ಅದರೊಂದಿಗೆ ಮುಂಜಾನೆ ಸೂರ್ಯೋದಯಕ್ಕೆ ಮುಂಚಿತವಾಗಿ ಎದ್ದು, ಐದು ಬಾರಿ ಓಂಕಾರವನ್ನು ಉಚ್ಚರಿಸಿ ಶ್ರೀ ಯೋಗಾನಂದ ಗುರುನರಸಿಂಹ ಸುಪ್ರಭಾತವನ್ನು ಪಠಿಸಬೇಕು. ಇದಕ್ಕೆ ಬೆಳಗಾತ 5.30ರಿಂದ 6 ಗಂಟೆಯ ನಡುವಿನ ಸಮಯ ಸೂಕ್ತ. ವಿಶೇಷ ಸಂದರ್ಭಗಳಲ್ಲಿ ಅದಕ್ಕಿಂತ ಮೊದಲು ಅಥವಾ ಅದರ ಅನಂತರವೂ ಪಠಿಸಬಹುದಾಗಿದೆ. ಸುಪ್ರಭಾತ ಸ್ತೋತ್ರಪಠನವು ನಮ್ಮೊಳಗಿರುವ ನರಸಿಂಹನನ್ನು ಎಂದರೆ ಸುಪ್ತವಾಗಿರುವ ದಿವ್ಯ ಆಧ್ಯಾತ್ಮಿಕ ಶಕ್ತಿಯನ್ನು ಎಚ್ಚರಗೊಳಿಸುತ್ತದೆ.

ಸುಪ್ರಭಾತ ಸ್ತೋತ್ರಪಠನದ ಬಳಿಕ ಐದು ನಿಮಿಷ ಜ್ಯೋತಿರ್ ಧ್ಯಾನವನ್ನು ಮಾಡಬೇಕು. ಈ ಜ್ಯೋತಿರ್ಧ್ಯಾನವು ನಮ್ಮಲ್ಲಿರುವ ಎಲ್ಲ ದೌರ್ಬಲ್ಯ(weakness) ಗಳನ್ನು ನಿವಾರಿಸಿ ಶಕ್ತಿಯನ್ನು ತುಂಬಿಸಲು, ಅನುಕೂಲತೆಯನ್ನು ಒದಗಿಸಲು ಮನಃ ಶಾಸ್ತ್ರ ಸಮ್ಮತವಾದ ಆಧ್ಯಾತ್ಮಿಕ ಚಿಕಿತ್ಸೆಯಾಗಿದೆ. ಇದರಿಂದ ವೈಯಕ್ತಿಕವಾದ ಹಾಗೂ ವ್ಯವಹಾರ ಕ್ಷೇತ್ರದ ಅಡ್ಡಿ, ಆತಂಕ, ಶತ್ರುತ್ವ, ವಿರೋಧ, ಪ್ರತಿರೋಧಗಳನ್ನು ಕ್ರಮೇಣ ಪರಿಹರಿಸಬಹುದಾಗಿದೆ. ಆದುದರಿಂದ ಈ ಜ್ಯೋತಿರ್ಧ್ಯಾನವನ್ನು ಬಾಂಬ್ ನಿಷ್ಕ್ರಿಯಗೊಳಿಸುವಂತಹ (defusing a bomb) ಕ್ರಿಯೆ ಎನ್ನಬಹುದು.

ಕೂಟ ಮಹಾಜಗತ್ತಿನ ಸಾಮೂಹಿಕ ಸಾಧನೆಯಾಗಿ ಶ್ರೀನರಸಿಂಹ ಮಂತ್ರಜಪ ಮತ್ತು ನರಸಿಂಹಾಷ್ಟೋತ್ತರ ಶತನಾಮ ಸ್ತೋತ್ರದ ಪಠನವನ್ನು ಕೈಗೆತ್ತಿಕೊಳ್ಳಲಾಗಿದೆ. 2013ರ ನರಸಿಂಹ ಜಯಂತಿಯಿಂದ ಆರಂಭಿಸಿ 2014ರ ನರಸಿಂಹ ಜಯಂತಿಯವರೆಗೆ 'ಓಂ ಶ್ರೀ ನರಸಿಂಹಾಯ ನಮಃ' ಎಂಬ ಮಂತ್ರವನ್ನು ನಮ್ಮ ಸಮಾಜ ಬಾಂಧವರೆಲ್ಲ ಸೇರಿ ಒಟ್ಟು 14 ಲಕ್ಷ ಜಪಿಸಬೇಕೆಂದು ಸಮಾಜದ ಏಳಿಗೆಗಾಗಿ ಸಂಕಲ್ಪಿಸಲಾಗಿದೆ. 2014ರ ನರಸಿಂಹ ಜಯಂತಿಯಂದು ಈ ನಾಮಜಪದ ಸಮಾಪನೆಗಾಗಿ ನರಸಿಂಹ ಮಂತ್ರಹೋಮವನ್ನು ನಡೆಸಲಾಗುವುದು. ಮಂತ್ರಜಪವನ್ನು ವ್ಯಕ್ತಿಗಳೇ ಮಾಡಬೇಕಾಗಿದ್ದರೂ, ಅಂಗಸಂಸ್ಥೆಗಳು ಸಾಮೂಹಿಕವಾಗಿ ಮಂತ್ರಜಪಕ್ಕೆ ಅವಕಾಶವನ್ನು ಕಲ್ಪಿಸಬಹುದಾಗಿದೆ. ಹಾಗೆಯೇ ಈ ಒಂದು ವರ್ಷದಲ್ಲಿ ಶ್ರೀ ನರಸಿಂಹಾಷ್ಟೋತ್ತರ ಶತನಾಮ ಸ್ತೋತ್ರದ ಪಠನ 14 ಸಾವಿರ ಸಂಖ್ಯೆಯನ್ನು ತಲುಪಬೇಕೆಂದು ಗುರಿ ಇರಿಸಲಾಗಿದೆ.

ವ್ಯಕ್ತಿಗತ ಹಾಗೂ ಅಂಗಸಂಸ್ಥೆಯ ಮಟ್ಟದಲ್ಲಿ ನಡೆಯುವ ಆಧ್ಯಾತ್ಮಿಕ ಸಾಧನೆ ನಮ್ಮ ಗುರುಸ್ಥಾನದಲ್ಲಿ ಶಿಖರಕ್ಕೇರಬೇಕು. ಸಾಮಾನ್ಯ ವ್ಯಕ್ತಿಯೊಬ್ಬನ ಸಾಧನೆ ಕೂಡ ಅಲ್ಲಿ ಭಗವಂತನಿಗೆ ಅರ್ಪಿತವಾಗಬೇಕು. ಇದಕ್ಕೆ ಅವಕಾಶವಿದೆಯೆ ? ಕೂಟ ಮಹಾಜಗತ್ತು ಅಂತಹ ಅವಕಾಶವನ್ನು ಕಲ್ಪಿಸಬೇಕು. ತಿಂಗಳಿಗೊಮ್ಮೆ ಒಂದೊಂದು ಅಂಗಸಂಸ್ಥೆಯ ಸದಸ್ಯರು ತಮ್ಮ ಭಕ್ತಿಯನ್ನು ಗುರುಸ್ಥಾನದಲ್ಲಿ ಸಮರ್ಪಿಸುವಂತಾಗಬೇಕು. ಅದಕ್ಕೆ ಹೊಸತಾಗಿ ಏನೂ ಮಾಡಬೇಕಾಗಿಲ್ಲ. ಈಗ ಇರುವ ಸಂದರ್ಭವನ್ನೇ ಉಪಯೋಗಿಸಿಕೊಂಡರಾಯಿತು.

ಸಾಲಿಗ್ರಾಮದ ಶ್ರೀ ಗುರುನರಸಿಂಹ ದೇವಸ್ಥಾನದಲ್ಲಿ ಪ್ರತಿ ತಿಂಗಳು ಸಂಕ್ರಮಣದ ದಿನ ಉತ್ಸವ ಇದೆ. ಉತ್ತರಾಯಣದಲ್ಲಿ ಪುಷ್ಪರಥೋತ್ಸವ ನಡೆಯುತ್ತದೆ. ಈ ಉತ್ಸವವನ್ನೇ ಉತ್ಸಾಹದಿಂದ ಅರ್ಥಪೂರ್ಣವಾಗಿ ಆಚರಿಸುವಂತೆ ಒಂದೊಂದು ಅಂಗಸಂಸ್ಥೆಯವರು ಸಹಕರಿಸಬೇಕು. ಭಜನೆ, ಸ್ತೋತ್ರ ಪಠನ, ವೇದ ಘೋಷ, 12ನೇ ಅಧ್ಯಾಯ. ಗೀತಾ ಪಠನ, ಕಂಠಪಾಠ ಸ್ಪರ್ಧೆಗಳು, ಯುವಕರಿಗಾಗಿ ಯೋಗಾಸನ ಹಾಗೂ ಸೂರ್ಯನಮಸ್ಕಾರ ಇತ್ಯಾದಿ ಕಾರ್ಯಕ್ರಮಗಳನ್ನು ಬೆಳಗ್ಗೆ 9ರಿಂದ 12ರವರೆಗೆ ಸಂಘಟಿಸಬಹುದು. ಹಾಗೆಯೇ ಸಂಜೆ 4ರಿಂದ 7ರವರೆಗೆ ಧಾರ್ಮಿಕ ಉಪನ್ಯಾಸ, ಗಮಕ ವಾಚನ, ಪುರಾಣ ಪ್ರವಚನ, ಹರಿಕಥೆ, ತಾಳಮದ್ದಳೆ, ಭರತನಾಟ್ಯ, ನಾಟಕ, ಸಂಗೀತ ಕಚೇರಿ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು. ಆಯಾ ಅಂಗಸಂಸ್ಥೆಯವರೇ ತಮ್ಮ ಖರ್ಚಿನಿಂದ ತಮ್ಮ ಸದಸ್ಯರ ಮೂಲಕ ಅಥವಾ ಪ್ರಸಿದ್ಧ ಕಲಾವಿದರಿಂದ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸಿದಾಗ ಕಾರ್ಯಕ್ರಮಗಳಲ್ಲಿ ವೈವಿಧ್ಯ ಇರುತ್ತದೆ. ಹೋಮ, ಹವನ, ಪಾರಾಯಣಾದಿ ಕಾರ್ಯಗಳನ್ನೂ ಹಮ್ಮಿಕೊಳ್ಳಬಹುದು. ಪ್ರತಿ ತಿಂಗಳ ಸಂಕ್ರಾಂತಿಯಂದು ಯಾವ ಅಂಗಸಂಸ್ಥೆಯವರು ಏನೇನು ಕಾರ್ಯಕ್ರಮಗಳನ್ನು ಸಂಯೋಜಿಸಿದ್ದಾರೆಂದು ಸಾಲಿಗ್ರಾಮ ದೇವಸ್ಥಾನದಲ್ಲಿ ಮಾತ್ರವಲ್ಲ ಎಲ್ಲ ಅಂಗಸಂಸ್ಥೆಗಳಿಗೂ ತಿಳಿಸಿದಾಗ ಅದಕ್ಕಾಗಿ ಬರುವವರ ಸಂಖ್ಯೆಯೂ ಹೆಚ್ಚುತ್ತದೆ.

ವರ್ಷಕ್ಕೆ ಹನ್ನೆರಡೇ ಸಂಕ್ರಾಂತಿಗಳಿದ್ದು ಕೂಟಮಹಾಜಗತ್ತಿನ 36 ಅಂಗಸಂಸ್ಥೆಗಳಿರುವಾಗ, ಒಂದೊಂದು ಅಂಗಸಂಸ್ಥೆಗೆ ಮೂರು ವರ್ಷಕ್ಕೊಮ್ಮೆ ಈ ಅವಕಾಶ ಲಭಿಸುತ್ತದೆ. ಆದ್ದರಿಂದ ಯಾರಿಗೂ ಹೊರೆ ಎನಿಸಲಾರದು. ಕೂಟ ಬಂಧುಗಳೆಲ್ಲ ಸ್ಪಂದಿಸಬೇಕೆಂದು ಮನವಿ.

**ಡಾ। ವಿದ್ವಾನ್ ಕೃಷ್ಣಮೂರ್ತಿ ನಿಟಿಲಾಪುರ**

ಒಂದು ಸಲಹೆ

# ಕೂಟಬಂಧು ಪ್ರಸಾರವೃದ್ಧಿ

ಕಳೆದ ವರ್ಷದ ನವೆಂಬರ್ ದಶಂಬರ್ ತಿಂಗಳ ಕೂಟ ಬಂಧು ಸಂಚಿಕೆಯಲ್ಲಿ ಸಂಪಾದಕ ನಿಟಿಲಾಪುರ ಕೃಷ್ಣಮೂರ್ತಿ ಕಾರಂತರು ತಿಳಿಸಿದ ಒಂದು ವಿಚಾರ ಚಿಂತನೆಗೆ ಪ್ರಚೋದಿಸಿತು. 1996ರಲ್ಲಿ ಪ್ರಾರಂಭವಾದ ಈ ಪತ್ರಿಕೆ ಈವರೆಗೆ 17 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿದ್ದರೂ ಅದರ ಪ್ರಸಾರ ಸಂಖ್ಯೆ ಇನ್ನೂ ಎರಡು ಸಾವಿರದ ಆಸುಪಾಸಿನಲ್ಲಿಯೇ ಇದೆ ಎಂದರು. ಇದು ವಿಷಾದ ನೀಡಿತು. ನಂತರದ ಕಾಲದಲ್ಲಿ ಈ ಪತ್ರಿಕೆಯಿಂದ ಪ್ರೇರಣೆಯನ್ನು ಪಡೆದೋ, ಪ್ರಭಾವಕ್ಕೆ ಸಿಲುಕಿಯೋ ಅಥವಾ ಅನುಸರಿಸಿಯೋ ನಮ್ಮ ಸಮಾಜದ ಹಲವು ಸಂಘಟನೆಗಳು ತಮ್ಮದೇ ಆದ ಪತ್ರಿಕೆಯನ್ನು ಪ್ರಾರಂಭಿಸಿ ಪ್ರಸಾರ ಮಟ್ಟದಲ್ಲಿ ಮತ್ತು ಇತರ ವಿಷಯಗಳಲ್ಲಿ ದಾಪುಗಾಲನ್ನಿಡುತ್ತ ಅದ್ಭುತವಾದ ಪ್ರಗತಿಯನ್ನು ಸಾಧಿಸಿದ್ದು ನಮ್ಮ ಕಣ್ಣ ಮುಂದಿರುವಾಗ ನಮ್ಮದ್ದು ಹೀಗೇಕೆ ? –'ಕೊಣಕೊಟ' ಎಂದು ಕುಂಟುತ್ತಿರುವುದೇಕೆ? ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳಬೇಕಾದ ವಿಚಾರ. ನಮ್ಮ ಅಭಿಮಾನ ಶೂನ್ಯತೆಯೆ? ಔದಾಸೀನ್ಯವೆ? ನಿರ್ಲಕ್ಷ್ಯವೆ? ತಿಳಿಯುತ್ತಿಲ್ಲ.

ಅದೇ ಸಂಚಿಕೆಯಲ್ಲಿ ಬಿಲಿಯನ್ ಫೌಂಡೇಶನ್ ಟ್ರಸ್ಟ್‌ನವರು ಕೊಟ್ಟ ಅಂಕೆ ಸಂಖ್ಯೆಯ ಪ್ರಕಾರ 33 ಅಂಗಸಂಸ್ಥೆಗಳಿಂದ ಒಟ್ಟು 7867 ಸದಸ್ಯರಿದ್ದಾರೆ. ಇನ್ನೂ ಮೂರು ಅಂಗಸಂಸ್ಥೆಗಳು ಹೊಸದಾಗಿ ಪ್ರಾರಂಭವಾಗಿದ್ದರಿಂದ ಇದರ ಗಡಿ 8,000ವನ್ನೂ ದಾಟುತ್ತದೆ. ಬೆಂಗಳೂರು ಒಂದರಲ್ಲಿಯೇ 2500ಕ್ಕೂ ಮಿಕ್ಕಿ ನಮ್ಮವರಿದ್ದಾರೆ ಎಂದು 23–9–12ರಲ್ಲಿ ನಡೆದ ಕೇಂದ್ರ ಮಹಾಸಭೆಯ ವರದಿ ತಿಳಿಸುತ್ತದೆ. ಅಂದರೆ ಊರಲ್ಲಿರುವುದಕ್ಕಿಂತಲೂ ಹೆಚ್ಚಿಗೆ ಕೂಟಬಂಧುಗಳು ಪರವೂರಲ್ಲಿ ಇದ್ದಾರೆ. ಕೇವಲ ಬೆಂಗಳೂರಲ್ಲಿರುವವರಲ್ಲಿ ಅರ್ಧಾಂಶದಷ್ಟು ಜನರು ಮನಸ್ಸು ಮಾಡಿದ್ದರೆ ಚಂದಾದಾರ ಸಂಖ್ಯೆ 4 ಸಾವಿರವನ್ನು ದಾಟುತ್ತಿತ್ತು. ಜೊತೆಗೆ ಬೇರೆ ಕಡೆಗಳಲ್ಲಿರುವವರೂ ಮನಸ್ಸು ಮಾಡಿದರೆ? ಆದರೆ ಹಾಗಾಗಲಿಲ್ಲ. ಈ ನಿಟ್ಟಿನಲ್ಲಿ ಹೊಸ ಕೇಂದ್ರಾಧ್ಯಕ್ಷರು ಒಂದು ಪರಿಹಾರವನ್ನು ಸೂಚಿಸಿದ್ದಾರೆ. ಪ್ರತಿಯೊಂದು ಅಂಗಸಂಸ್ಥೆಯಲ್ಲಿಯೂ ಬಿಲಿಯನ್ ಫೌಂಡೇಶನ್ನಿನ ಪ್ರತಿನಿಧಿ ಇರುವಂತೆ, ಕೂಟಬಂಧುವಿನ ಪ್ರಸಾರ ಸಂಖ್ಯೆಯನ್ನೂ ಹೆಚ್ಚಿಸಲು ಹಾಗೂ ಆಯಾ ಅಂಗಸಂಸ್ಥೆಯ ವರದಿಯನ್ನು ಶೀಘ್ರವಾಗಿ ಒದಗಿಸುವ ಸಲುವಾಗಿ ಒಬ್ಬ ಕೂಟ ಬಂಧು ಪ್ರತಿನಿಧಿಯನ್ನು ನಿಯೋಜಿಸುವುದು. ಕೇಂದ್ರಾಧ್ಯಕ್ಷರ ಈ ಸಲಹೆಗೆ ಸಭೆ ಒಪ್ಪಿಗೆ ನೀಡಿತು. ಇದೊಂದು ಅತ್ಯುತ್ತಮ ಮತ್ತು ಕಾರ್ಯಸಾಧ್ಯವಾದ ಸಲಹೆ.

ಆದರೆ ಅಲ್ಲಿಗೆ ಸಮಸ್ಯೆ ಪರಿಹಾರವಾಗುವುದಿಲ್ಲ. ಆ ದಿಸೆಯಲ್ಲಿ ಇದು ಒಂದು ಹೆಜ್ಜೆ ಅಷ್ಟೇ. ಅದರ ಜೊತೆಗೆ ಇನ್ನೊಂದು ಅಂಶವನ್ನು ಸೇರಿಸಿಕೊಂಡರೆ ಮತ್ತಷ್ಟು ಪರಿಣಾಮಕಾರಿಯಾದೀತು. ಆ ಕೂಟಬಂಧು ಪ್ರತಿನಿಧಿಗೆ ಸಮರ್ಥವಾಗಿ ಕೆಲಸ ಮಾಡಲು ಕಾರ್ಯಾನುಕೂಲತೆಯನ್ನು

ಮಾಡಿಕೊಡಬೇಕಾಗುತ್ತದೆ. ಈ ಕೆಲಸವನ್ನು ಪತ್ರಿಕೆಯೇ ಪ್ರಾರಂಭದಲ್ಲಿ ಮಾಡಬೇಕು. ಪತ್ರಿಕೆಯ ಸಂಪಾದಕರು ಮತ್ತು ಟ್ರಸ್ಟ್ ಆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಈಗ ಇರುವ ಅಂದಾಜು 2 ಸಾವಿರ ಚಂದಾದಾರರು ಯಾವ ಯಾವ ಅಂಗಸಂಸ್ಥೆಯ ವ್ಯಾಪ್ತಿಗೆ ಒಳಪಡುತ್ತಾರೆ ಎಂದು ತಿಳಿದು ಮುಂದಿನ ಹೆಜ್ಜೆ ಇಡಬೇಕಾಗುತ್ತದೆ. ಕಾರಣ ಪ್ರತಿನಿಧಿಗೆ ತಮ್ಮ ಅಂಗಸಂಸ್ಥೆಯ ಕ್ಷೇತ್ರದಲ್ಲಿ ಯಾರೆಲ್ಲಾ ಚಂದಾದಾರರು ಯಾರು ಅಲ್ಲ ಎಂಬ ಮಾಹಿತಿ ಇರುವುದಿಲ್ಲ. ಹೊಸದಾಗಿ ಬಂದ ಪ್ರತಿನಿಧಿಯನ್ನು ಬಿಡಿ – ಅಂಗಸಂಸ್ಥೆಯ ಪದಾಧಿಕಾರಿಗಳಿಗೂ ಆ ಮಾಹಿತಿ ಇರುವುದಿಲ್ಲ. ಇರುವುದಕ್ಕೆ ಸಾಧ್ಯವೂ ಇಲ್ಲ. ಅದಕ್ಕಾಗಿ ಮೊದಲು ಆಯಾ ಅಂಗಸಂಸ್ಥೆಯ ವ್ಯಾಪ್ತಿಯ ಚಂದಾದಾರರ ಪಟ್ಟಿಯನ್ನು ಟ್ರಸ್ಟ್ ತಯಾರಿಸಿ ಕೂಟಬಂಧು ಪ್ರತಿನಿಧಿಗೆ ಕಳುಹಿಸಿದರೆ ಅವರಿಗೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಅಂಗಸಂಸ್ಥೆಯ ಸದಸ್ಯರು ಅದರಲ್ಲಿ ಚಂದಾದಾರರಾದವರು ಎಷ್ಟು? ಆಗದವರು ಎಷ್ಟು? ಎಷ್ಟು ಜನರನ್ನು ಹೊಸದಾಗಿ ಸೇರಿಸಬಹುದು ಎಂಬ ಅಂದಾಜು ಆಗುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರಿನ ಅಂಗಸಂಸ್ಥೆಯಲ್ಲಿ ಒಬ್ಬ ಪ್ರತಿನಿಧಿ ಇದ್ದಾರೆಂದು ತಿಳುವಳಿಕೆ. ಆದರೆ ಎಷ್ಟು ಪರಿಣಾಮಕಾರಿಯಾಗಿದೆಯೋ ಗೊತ್ತಿಲ್ಲ. ಪ್ರಾರಂಭದಲ್ಲಿ ಇದೊಂದು ರಗಳೆಯ, ಕಿರಿಕಿರಿಯ ಕೆಲಸವಾಗಿ ಕಂಡರೂ ಪರಿಣಾಮದಲ್ಲಿ ಅತ್ಯಂತ ಒಳ್ಳೆಯ ಫಲಿತಾಂಶವನ್ನು ಕೊಡುವುದರಲ್ಲಿ ಅನುಮಾನವಿಲ್ಲ. 'ಟ್ರಸ್ಟ್'ನವರು ಒಮ್ಮೆ ಮಾತ್ರ ಈ ಮಟ್ಟಿಗೆ ಕೆಲಸ ಮಾಡಿದರೆ ಸಾಕಾಗುತ್ತದೆ. ನಂತರ ಅದು ಶಾಶ್ವತ. 2 ಸಾವಿರ ಹೆಸರುಗಳನ್ನು ವರ್ಗೀಕರಿಸುವುದು ಅಷ್ಟೇನೂ ಕಷ್ಟವಾಗಲಿಕ್ಕಿಲ್ಲ. ಬೇರೆಯವರ ಸಹಾಯವನ್ನೂ ಪಡೆದುಕೊಳ್ಳಬಹುದು. ನಂತರ ಹೊಸದಾಗಿ ಚಂದಾದಾರರಾದವರ ಹೆಸರನ್ನು ಪ್ರತಿನಿಧಿ ತಮ್ಮ ಪಟ್ಟಿಗೆ ಸೇರಿಸಿಕೊಳ್ಳುತ್ತಾ ಹೋದರೆ ಅದು ಶಾಶ್ವತವಾಗಿ ಉಳಿಯುತ್ತದೆ. ಅದಕ್ಕಾಗಿ ಪ್ರತ್ಯೇಕ ಒಂದು ರಿಜಿಸ್ಟ್ರಿಯನ್ನು ಆಯಾ ಅಂಗಸಂಸ್ಥೆಯಲ್ಲಿ ಇಟ್ಟುಕೊಳ್ಳುವುದು. ಹಾಗೆಯೇ ಕೇಂದ್ರದವರೂ ಕೂಡ ಅಂಗಸಂಸ್ಥೆಗೊಂದರಂತೆ. ಇದು ಶಾಶ್ವತ. ನಂತರ ಕೆಲಸ ಸರಳ ಸುಲಭ.

ಒಂದು ಗಾದೆ ಇದೆ. 'ಪರ್ವತ ಮಹಮ್ಮದನ ಬಳಿಗೆ ಬಾರದಿದ್ದರೆ ಮಹಮ್ಮದನೇ ಪರ್ವತದ ಬಳಿಗೆ ಹೋಗುವುದು' ಮತ್ತೇನು ಮಾಡುವುದು ಕೆಲಸ ಆಗಬೇಕಲ್ಲ. ನಮ್ಮಲ್ಲಿ ಬಹುತೇಕರದು ಮನೋಧರ್ಮ ನಮ್ಮನ್ನು ಕೇಳಬೇಕು. ನಮ್ಮನ್ನು ಕೇಳಲಿಲ್ಲ ಕೊಡಲಿಲ್ಲ ಅಷ್ಟೆ! ಕೇಳಿದ್ದರೆ ಕೊಡುತ್ತಿದ್ದೆವು. ಚಂದಾದಾರರಾಗುತ್ತಿದ್ದೆವು. ಮೊದಲಿಗಾದರೆ ಹಣಕಾಸಿನ ತೊಂದರೆ ಪ್ರತಿಯೊಬ್ಬರಿಗೂ ಇದ್ದಿತ್ತು. ಈಗ ಅಂತಹ ದುರ್ಭರ ಪರಿಸ್ಥಿತಿಯವರ ಸಂಖ್ಯೆ ಕಡಿಮೆ. ಚಂದಾದಾರನಾಗುವವರ ಮನಸ್ಸಿಗೂ ಬರವಿಲ್ಲ. ಆದರೆ ಆಗಲಿಲ್ಲ. ಅಂದರೆ ಅವರನ್ನು ಪ್ರತ್ಯೇಕವಾಗಿ ಸಂಪರ್ಕಿಸಿಲ್ಲ ಅಷ್ಟೆ. ಇದರ ಜವಾಬ್ದಾರಿ ಪ್ರತಿನಿಧಿಯದ್ದಾದರೂ ಕೂಡ ಅವರು ಒಬ್ಬರೇ ಈ ಕಾರ್ಯಕ್ಕೆ ಸಾಕಾಗುವುದಿಲ್ಲ. ಅಂಗಸಂಸ್ಥೆಯ ಸದಸ್ಯರಲ್ಲಿ ಕೆಲವರಾದರೂ ತಂಡದಲ್ಲಿ ಕಾರ್ಯಪ್ರವೃತ್ತರಾದರೆ ಒಳ್ಳೆಯದು. ಪ್ರಗತಿಯನ್ನು ಕಾಣಬಹುದು. ಮನಸ್ಸು ಮಾಡಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ :

1. ಸಂಪಾದಕರು ಮತ್ತು ಮಂಡಳಿ ಪ್ರತೀ ಅಂಗಸಂಸ್ಥೆಯ ವ್ಯಾಪ್ತಿಯ ಚಂದಾದಾರರ ಪಟ್ಟಿಯನ್ನು ತಯಾರಿಸುವುದು.

2. ಅದನ್ನು ಆಯಾ ಅಂಗಸಂಸ್ಥೆಯ ಪ್ರತಿನಿಧಿಗೆ ಕಳುಹಿಸುವುದು.

3. ಪ್ರತಿನಿಧಿ ತಮ್ಮ ಅಂಗಸಂಸ್ಥೆಯ ಇತರ ಸದಸ್ಯರ ಸಹಾಯದಿಂದ ಕೆಲಸ ಮಾಡುವುದು.

4. ಹೊಸದಾಗಿ ಚಂದಾದಾರದವರ ಹೆಸರನ್ನು ತಮ್ಮಲ್ಲಿ ಈಗಾಗಲೇ ಇದ್ದ ಪಟ್ಟಿಗೆ ಸೇರಿಸುತ್ತಾ ಹೋಗುವುದು.

5. ಕೂಟ ಬಂಧು ಕಚೇರಿಯಲ್ಲಿ ಮತ್ತು ಪ್ರತಿಯೊಂದು ಅಂಗಸಂಸ್ಥೆಯಲ್ಲಿ ಚಂದಾದಾರರ ಒಂದು ಶಾಶ್ವತ ರಿಜಿಸ್ಟ್ರಿಯನ್ನು ತೆರೆಯುವುದು. ನಂತರ ಕೆಲಸ ಸುಲಭ. ಪ್ರಾರಂಭಿಸುವವರೆಗೆ ಕಷ್ಟ. ಇದೊಂದು ಖರ್ಚಿಲ್ಲದ ಪುಕ್ಕಟೆ ಸಲಹೆ ತೆಗೆದುಕೊಳ್ಳುವುದು, ಬಿಡುವುದು ಸಂಬಂಧಪಟ್ಟವರಿಗೆ ಬಿಟ್ಟದ್ದು.

ಎಲ್ಲಕ್ಕೂ ಮೊದಲು ಗುರು ಸಾನ್ನಿಧ್ಯ, ಕೂಟ ಮಹಾಜಗತ್ತು, ಕೂಟಬಂಧು ಮತ್ತು ಅದಕ್ಕೆ ಸಂಬಂಧಪಟ್ಟದ್ದೆಲ್ಲ ನಮ್ಮದ್ದು. ನಾವು ಅದರ ಅವಿಭಾಜ್ಯ ಅಂಗ ಎಂಬ ಅಭಿಮಾನವನ್ನು ಬೆಳೆಸಿಕೊಳ್ಳುವ. ಈ ನಮ್ಮ ಸಂಸ್ಥೆ ಬೆಳೆಯಬೇಕು ಪ್ರವರ್ಧಮಾನಕ್ಕೆ ಬರಬೇಕು ಎಂಬ ತುಡಿತವನ್ನು ಹೊಂದುವ. ಸಮಾಜದಲ್ಲಿ ನಮ್ಮ ಸಂಘಟನೆ ಹತ್ತರೊಟ್ಟಿಗೆ ಹನ್ನೊಂದನೆಯದಾಗದೆ ಮೊದಲನೆಯದಾಗಿಯೇ ರೂಪಗೊಳ್ಳುವಂತೆ ಪ್ರಯತ್ನಿಸುವ. ಆ ಸದ್ಬುದ್ಧಿಯನ್ನು ಗುರು ನರಸಿಂಹನು ನಮಗೆಲ್ಲಾ ಅನುಗ್ರಹಿಸಲಿ ಎಂದು ಪ್ರಾರ್ಥಿಸುವ.

**ಗಂಗಾಧರ ಹೇರ್ಳೆ**, ಪಾರಂಪಳ್ಳಿ, ಸಾಲಿಗ್ರಾಮ

## ಕರ್ಮಾಂಗವನ್ನು ಮೊಟಕು ಮಾಡಬೇಡಿ

''ಆತ್ಮ ಶ್ರೇಯಸ್ಸಿನ ದಾರಿಯ ಜ್ಞಾನವಿಲ್ಲದೆ, ಲೌಕಿಕ ಜೀವನದಲ್ಲಿ ತಾನೊಬ್ಬ ಗಣನೀಯ ವ್ಯಕ್ತಿಯಾಗಿದ್ದೇನೆ, ಧನಿಕನಾಗಿದ್ದೇನೆ, ದೊಡ್ಡ ನೌಕರನಾಗಿದ್ದೇನೆ, ಪದವೀಧರನಾಗಿದ್ದೇನೆ ಎಂಬ ಗರ್ವದಿಂದ ಧರ್ಮಶಾಸ್ತ್ರದ ವಿಧಿಗಳು ಆ ಕಾಲಕ್ಕೆ ಅನಾವಶ್ಯಕ, ಅದರ ನಿಷೇಧಗಳು ಈ ಕಾಲಕ್ಕೆ ಅಸಾಧ್ಯ ಅಥವಾ ಅರ್ಥವಿಲ್ಲದವು, ಇದನ್ನು ಲೋಪ ಮಾಡಿರಿ, ಅದನ್ನು ಚುಟುಕು ಮಾಡಿರಿ ಎಂದು ಪುರೋಹಿತರಿಗೆ ಗದರಿಸುವ ಸಾಹಸ ಮಾಡುವವರನ್ನು ಬರೇ ಮೂಢರು ಮೂರ್ಖರು ಎಂದರೆ ಹೇಗೆ ಸಾಕು ? ತೀರಾ ಅಧಮರು ಎಂದೂ ಹೇಳಬೇಕಾಗುತ್ತದೆ. ಈಗಿನ ಬ್ರಾಹ್ಮಣ್ಯದ ಅವನತಿಗೆ ನಮ್ಮ ಈ ತರದ ಅನೇಕಾನೇಕ ಸ್ವಂತ ಅಭಿಪ್ರಾಯಗಳೇ ಮುಖ್ಯ ಕಾರಣ. ಬ್ರಾಹ್ಮಣ್ಯದ ವಿಚಾರದಲ್ಲಿ ಧರ್ಮಶಾಸ್ತ್ರವು ಮಾತ್ರವೇ ನಮ್ಮ ಏಕಮಾತ್ರ ಆಧಾರವಾಗಿರಬೇಕು ಎಂಬುದನ್ನು ನಾವು ಎಷ್ಟು ಸ್ಪಷ್ಟವಾಗಿ ತಿಳಿಕೊಳ್ಳುತ್ತೇವೋ ಅಷ್ಟೂ ಉತ್ತಮವಾದೀತು.''

**ಕೋ. ವಾ. ಕಾರಂತ**

# ಜೀವನೋತ್ಸಾಹದಿಂದ ಕೂಡಿದ ದೀರ್ಘಾಯುಷ್ಯ ಬೇಕೇ ?

ಆಂಗ್ಲ ಕವಿ ಈಲಿಯೆಟ್ ಕೇಳಿದ ಮಾರ್ಮಿಕ ಪ್ರಶ್ನೆ ಹೀಗಿದೆ. ಕೇವಲ ಜೀವನ ನಿರ್ವಹಣೆಯಲ್ಲಿರುವವರಿಗೆ ಜೀವನ ಎಲ್ಲಿದೆ ? (Where is Life which is lost in living) ಅಂದರೆ ಯಾಂತ್ರಿಕವಾಗಿ ಜೀವನ ನಡೆಸುವ ವ್ಯಕ್ತಿ ಅರ್ಥಪೂರ್ಣ ಜೀವನದಿಂದ ವಂಚಿತನಾಗುತ್ತಾನೆ ಎಂದು ಅರ್ಥೈಸಬಹುದು. ಆದ್ದರಿಂದ ಬಲ್ಲವರು ಹೇಳುತ್ತಾರೆ – ಜೀವನಕ್ಕೆ ವರ್ಷಗಳನ್ನು ಸೇರಿಸಿದರೆ ಫಲವಿಲ್ಲ. ಬಾಳಿದ ವರ್ಷಗಳಿಗೆ 'ಜೀವನ'ವನ್ನು ಸೇರಿಸು. ನಮ್ಮ ಯಾವ ಪ್ರಯತ್ನವೂ ಇಲ್ಲದೆ, ನಮ್ಮ ಆಯುಷ್ಯ ಏರುತ್ತಾ ಹೋಗುತ್ತದೆ. ಆಯುಷ್ಯ ಏರುತ್ತಾ ಹೋದ ಹಾಗೆ ಜೀವನೋತ್ಸಾಹ ಲವಲವಿಕೆ ಹೆಚ್ಚುತ್ತಾ ಹೋಗುತ್ತದೆ ಎಂಬ ಖಚಿತ ನಂಬಿಕೆ ಇಲ್ಲ. ದೀರ್ಘಾಯುಷ್ಯ ಒಬ್ಬ ವ್ಯಕ್ತಿಯ ಅನುವಂಶೀಯತೆ ಹಾಗೂ ಆತನ ಆರೋಗ್ಯದ ಮೇಲೆ ಅವಲಂಬಿಸಿದ್ದರೆ, ಜೀವನೋತ್ಸಾಹ, ಆತನ ಚಿತ್ತ ವೃತ್ತಿ – ಚಾರಿತ್ರ್ಯದ ಮೇಲೆ ನೆಲೆ ನಿಂತಿದೆ. ಮನುಷ್ಯ ಜೀವನಕ್ಕೆ ಸಹಕಾರಿಯಾದ ಅನೇಕ ಕೌಶಲಗಳಲ್ಲಿ ಅತ್ಯಂತ ಕ್ಲಿಷ್ಟಕರವಾದುದು ಜೀವನ ಕೌಶಲ. ಜೀವನದುದ್ದಕ್ಕೂ ಗಳಿಸಬಹುದಾದ ಕಲಿತು ನೆರವಾಗಬಲ್ಲ ಪ್ರಬಲ ಶಕ್ತಿ ಇದು ಎನ್ನಬಹುದು.

ಜನಸಾಮಾನ್ಯರಲ್ಲಿ ಒಂದು ತಪ್ಪು ತಿಳುವಳಿಕೆ ಇದೆ. ಅದು ನಮ್ಮ ಪೂರ್ವಜರು ಆರೋಗ್ಯವಂತರು, ಜೀವನ ಕೌಶಲವನ್ನು ಬಲ್ಲವರು – ಅದರಿಂದ ಬಹುಕಾಲ ಬಾಳಿ ಬದುಕಿದ್ದಾರೆ. ಕೆಲವೊಂದು ವಿಷಯಗಳಲ್ಲಿ ನಮ್ಮ ಹಿರಿಯರ ಆದರ್ಶ, ಸರಳ ಜೀವನ, ಸಹಕಾರ, ತ್ಯಾಗ, ಸಾಧನೆಗಳನ್ನು ನಾವು ಮೆಚ್ಚಿಕೊಳ್ಳಬಹುದಾದರೂ ಹಿಂದಿನವರಿಗಿಂತ ಇಂದು ಹೆಚ್ಚು ಜನ ಹೆಚ್ಚು ಹೆಚ್ಚು ಮಂದಿ ದೀರ್ಘಾಯುಷಿಗಳಾಗುತ್ತಾರೆ ಎಂಬುದು ಸತ್ಯ. ಆಯುಷ್ಯ ಪ್ರಮಾಣ ಭಾರತದಲ್ಲಿ 1950ರಲ್ಲಿ ಸರಾಸರಿ 27 ಇದ್ದರೆ ಈಗ ಅದು 68 ವರ್ಷಕ್ಕೆ ಬಂದು ಮುಟ್ಟಿದೆ – ಮತ್ತೂ ಏರುತ್ತಲೇ ಇದೆ. 2050ರ ಹೊತ್ತಿಗೆ ನಮ್ಮ ದೇಶದಲ್ಲಿ 70 ವಯಸ್ಸು ಮೀರಿದ ವೃದ್ಧರ ಸಂಖ್ಯೆ ವಿಪರೀತ ಹೆಚ್ಚಲಿದೆ ಎಂದು ಜನಸಂಖ್ಯಾ ಶಾಸ್ತ್ರ ತಿಳಿಸುತ್ತದೆ.

ಇದರಿಂದ ಸಾಮಾಜಿಕ ಸ್ವಾಸ್ಥ್ಯ, ಪಿಂಚಣಿ ವ್ಯವಸ್ಥೆ ಏರುಪೇರಾಗುವ ಸಂಭವವಿದೆ ಅವಿಭಕ್ತ ಕುಟುಂಬದ ಕಣ್ಮರೆ, ಸಣ್ಣ ಕುಟುಂಬದ ಪಾಲನೆ, ಮಾರಕ ಕಾಯಿಲೆಗಳ ಹತೋಟಿ, ಇತ್ಯಾದಿ. ವಿದ್ಯಮಾನಗಳ ಫಲವಾಗಿ ಮನೆಯಲ್ಲಿ ವೃದ್ಧರ ಆರೈಕೆ ತೀವ್ರ ತೊಂದರೆಗೆ ಒಳಗಾಗಲಿದೆ. ಇಂತಹ ವಾತಾವರಣದಲ್ಲಿ ಹಿರಿಯ ನಾಗರಿಕರಿಗೆ, ಸಮಾಜ ಸರಕಾರ ಹತ್ತು ಹಲವು ಸವಲತ್ತುಗಳನ್ನು ನೀಡುತ್ತಾ ಬಂದಿದೆ. ಅಲ್ಲಲ್ಲಿ ವೃದ್ಧಾಶ್ರಮಗಳು ಹುಟ್ಟಿ ನೆಲೆಯಿಲ್ಲದವರಿಗೆ ಆಶ್ರಯಧಾಮಗಳಾಗಿವೆ.

ವರ್ಷದಿಂದ ವರ್ಷಕ್ಕೆ ಆಯುಷ್ಯದಲ್ಲಿ ಮುಂದುವರಿಯುವ ಹಿರಿಯ ನಾಗರಿಕರು ದೈಹಿಕ ಮಾನಸಿಕ ನೆಮ್ಮದಿ ಪಡೆಯಲು ಸ್ವತಃ ಏನನ್ನು ಮಾಡಬಹುದು? ದೀರ್ಘಾಯುಷ್ಯದ ಮತ್ತು ಜೀವನೋತ್ಸಾಹ ಒಟ್ಟೊಟ್ಟಿಗೆ ಸಾಗಲು ಸಾಧ್ಯವಿಲ್ಲವೇ? ಈ ಬಗ್ಗೆ ಚಿಂತಿಸಬೇಕು. ಆಳವಾಗಿ ಯೋಚಿಸಿದರೆ ಜೀವನದಲ್ಲಿ ಪ್ರತಿಯೊಂದು ಕ್ಷಣವೂ ಅರ್ಥಪೂರ್ಣವೂ–ಹರ್ಷದಾಯಕವೂ ಆಗಿರುತ್ತದೆ. ಬೆಳಗಾಯಿತಲ್ಲಾ ಎಂದು ನೋವಿನಿಂದ ಆಳುವ ಬದಲು ಉಷಃ ಕಾಲದ ಸೂರ್ಯನ ಸೊಬಗನ್ನೂ ನೋಡಿ ಆನಂದಿಸುವ ಮನಸ್ಸು ಬೇಕು. ಸಂಜೆ–ಮುಂಜಾವುಗಳ ಸೂರ್ಯ ಬೇರೆ ಬೇರೆ ರೀತಿಯಾಗಿರುತ್ತದೆ. ಆಗಸದಲ್ಲಿ ನಿನ್ನೆಯ ಚಿತ್ತಾರಕ್ಕಿಂತಲು ಇಂದಿನ ಸೂರ್ಯ ಬೇರೆ ರೀತಿ

ಕಂಗೊಳಿಸುತ್ತಾನೆ – ನಾಳೆಯ ನೇಸರನನ್ನು ನೋಡಿ ನಾವು ಇನ್ನಷ್ಟು ಚಕಿತರಾಗಲು ಸಾಧ್ಯವಿದೆ. ಇಂದು ನಾವು ಜೀವಿಸುವುದು, ಅರ್ಥಪೂರ್ಣವಾಗಿ ಬದುಕಲಿಕ್ಕೆ. ನಿನ್ನೆಯ ಜೀವನ ಅದರ ಸಿಹಿ–ಕಹಿ ನಮಗೆ ಮರೆತೇ ಹೋಗಿದೆ. ನಾಳೆ ಎಷ್ಟೇ ಹತ್ತಿರವಿದ್ದರೂ ಅದರ ಸಂಪೂರ್ಣ ಚಿತ್ರವನ್ನು ನಾವು ಊಹಿಸಲಾರೆವು. ಆದರೂ ನಾಳೆ ಒಳ್ಳೆಯದು ಆಗಮಿಸಲಿದೆ ಎಂಬ ಆಶಾವಾದದಿಂದ ನಾವು ಇಂದು ಬದುಕಬೇಕು. ಅದಕ್ಕೆ ಜೀವನೋತ್ಸಾಹ ಸ್ಫೂರ್ತಿ. 80 ವರ್ಷ ತುಂಬಿದ ಭಾರತದ ಮಾಜಿ ಪ್ರಧಾನಿ ಶ್ರೀ ಎ. ಬಿ. ವಾಜಪೇಯಿ ಕೆಲವು ವರ್ಷಗಳ ಹಿಂದೆ ಬೆಂಗಳೂರಿಗೆ ಭೇಟಿ ನೀಡಿದ್ದಾಗ ಹೇಳಿದ ಮಾತು ಕೇಳಿ. 'ಈ ಜಗತ್ತಿನಲ್ಲಿ ನಾನೊಬ್ಬ ಆಶಾವಾದಿ. ನಾನು ಏನನ್ನೂ ಕಳೆದುಕೊಳ್ಳುವುದಿಲ್ಲ. ಮಿನುಗುವ ನಕ್ಷತ್ರಗಳ ಬಗ್ಗೆ ನಾನು ಹಾಡುತ್ತೇನೆ. ಅವುಗಳಿಂದ ಬರುವ ಸಂದೇಶವನ್ನು ಕಲ್ಲಿನ ಮೇಲೆ ಬರೆಯುತ್ತೇನೆ'. ಪ್ರೊ। ಎ. ಎನ್. ಮೂರ್ತಿರಾಯರು 103 ಮಳೆಗಾಲ ಕಂಡವರು. ಕೊನೆಯ ಗಳಿಗೆಯವರೆಗೂ ಜೀವನೋತ್ಸಾಹದಿಂದ ಬದುಕಿದ ಧೀಮಂತ ಸಾಹಿತಿ. ಅವರಿಗೆ 101 ವರ್ಷವಾದಾಗ ಯಾರೋ ಕೇಳಿದ ಪ್ರಶ್ನೆಗೆ ಆಯುಷ್ಯ ಮುಂದುವರಿದರೆ ಇನ್ನು ಒಂದು ನೂರು ವರ್ಷ ಬದುಕುವ ಉತ್ಸಾಹವಿದೆ ಎಂದಿದ್ದಾರೆ. ಇಂತಹ ಉತ್ಸಾಹ–ಆದರ್ಶ ಎಲ್ಲರಿಗೂ ಇರಲು ಸಾಧ್ಯವೇ ?

ಜೀವನೋತ್ಸಾಹ ತುಂಬಿಕೊಳ್ಳಲು ಪ್ರಕೃತಿದತ್ತವಾದ ಕೊಡುಗೆಗಳನ್ನು ನಾವು ಗಮನಿಸಬೇಕು. ಪಕ್ಷಿಗಳ ಇಂಪಾದ ದನಿ. ಮೌನವಾಗಿ ಮೊಗ್ಗೆಯಿಂದ ಅರಳುವ ಹೂ, ಚಿಗುರಿನಿಂದ ಶೋಭಿಸುವ ತರುಲತೆಗಳು, ಚೆಲ್ಲಾಟ ಆಡುವ ಪ್ರಾಣಿಗಳು, ಭೋರ್ಗರೆಯುವ ಕಡಲು, ದಿಟ್ಟವಾಗಿ ನಿಂತ ಬೆಟ್ಟದ ಸಾಲು ಇತ್ಯಾದಿ. ಯಾವ ಸದ್ದುಗದ್ದಲವಿಲ್ಲದೆ ಹೂ ಅರಳುತ್ತದೆ. ಹುಲ್ಲು ಬೆಳೆಯುತ್ತದೆ. ಬಳ್ಳಿ ಪಸರಿಸುತ್ತದೆ. ಪ್ರಾಣಿ–ಪಕ್ಷಿಗಳು ವಿಹರಿಸುತ್ತವೆ. ಇವುಗಳನ್ನು ನೋಡುವ ಕಣ್ಣು, ಕೇಳುವ ಕಿವಿ ಆನಂದಿಸುವ ಮನಸ್ಸು ಇರಬೇಕು.

ಹುಣಸೇ ಮರದ ನೆರಳಲ್ಲಿ ನಿಂತು ಅದರ ತಂಪನ್ನು ಸವಿಯುತ್ತಾ ಶ್ರೀ ದ. ರಾ. ಬೇಂದ್ರೆಯವರು ಒಮ್ಮೆ ಹೀಗೆ ಹಾಡಿದರು.

'ಜೀವನದ ಬ್ಯಾಸರಾ ಮರೆಸಕ
ಹಾಡಿ ಹರಸಾಕ
ಒಂದು ಜೊತೆ ಹುಣಸೆ ಮರ ಸಾಕ.....

60–70 ದಾಟಿದ ಮೇಲೆ ಇನ್ನೂ ಮುಗಿಸಲಿರುವ ಜೀವನದ ಅವಧಿ ಕ್ರಮಿಸಿದ ದಾರಿಗಿಂತ ಚಿಕ್ಕದೇ. ಈ ಕಾಲವನ್ನು ಉತ್ಸಾಹದಿಂದ ಕಳೆಯುವ ಕಲೆ ನಮ್ಮ ಕೈಯಲ್ಲೇ ಇದೆ. ನಾವು ಕಳೆದ ಬಾಳಿನ ಬೇವು–ಬೆಲ್ಲವನ್ನು ನೆನಪಿಸಿಕೊಂಡು ಕಹಿಯನ್ನು ವರ್ಜಿಸಿ, ಸಿಹಿ ಅನುಭವವನ್ನು ಮೆಲುಕು ಹಾಕೋಣ. ಅವುಗಳಲ್ಲಿ ಬಾಲ್ಯದ ನಮ್ಮ ತುಂಟಾಟಗಳು ಹಾಗೂ ಹವ್ಯಾಸಗಳು ಮುಖ್ಯವಾದವು. ಅವುಗಳನ್ನು ಲಗುಬಗೆಯಿಂದ ಎಣಿಸಿದರೆ, ಅವುಗಳಿಂದ ಕಲಿತ ಪಾಠಗಳು, ನೋವು ನಲಿವುಗಳು ನಮಗೆ ಸಂತಸ–ಸಮಾಧಾನ; ಕಿರಿಯರಿಗೆ ಅಪಹಾಸ್ಯದ ಪ್ರಸಂಗವಾಗಬಹುದು. ನಮ್ಮ ವಯಸ್ಸು – ದೈಹಿಕ ಆರೋಗ್ಯದ ದೃಢತೆಗೆ ಸರಿಯಾಗಿ ಕೆಲವೊಂದು ಹವ್ಯಾಸಗಳಲ್ಲಿ ತೋಟಗಾರಿಕೆ, ಓದು, ಬರಹ, ಪ್ರಕೃತಿ ವೀಕ್ಷಣೆ, ವಿವಿಧ ಲಲಿತ ಕಲೆಗಳು ಇವುಗಳಲ್ಲಿ ಆಸಕ್ತರಾದಲ್ಲಿ ಜೀವನೋತ್ಸಾಹ, ಆಯುಷ್ಯದ ಹೆಚ್ಚಳ ಜತೆಜತೆಯಾಗಿ ಸಾಗುವುದು. ಮುಪ್ಪು ಬರಡುಭೂಮಿಯಲ್ಲ. ಇನ್ನೂ ಅರಸಿಕೊಂಡು ಹೋಗುವ ಹೊಸ ಹೊಸ ರಸಾನುಭವ ನೀಡುವ ರಂಗಸ್ಥಳ. ವೃದ್ಧ ಮುಖದ ನೆರಿಗೆಗಳು ಸೃಷ್ಟಿಶೀಲ ಕಿಡಿಗಳು ಮಿಂಚಿ ಸಂತಸ ಸಂತೃಪ್ತಿಯ ಸವಿಯನ್ನು ಅನುಭವಿಸೋಣ. **– ಪ್ರೊ। ಕೆ. ಆರ್. ಹಂದೆ**

# ನೂತನ 'ಕೂಟಬಂಧು ಭವನ'ದ ನಿರ್ಮಾಣದ ಆಶಯ – ಪಿ. ವೆಂಕಟ್ರಾವ್

ಸಾಲಿಗ್ರಾಮದ ಶ್ರೀ ಗುರುನರಸಿಂಹ ದೇವಸ್ಥಾನ ಸಮೀಪದಲ್ಲಿರುವ ಕೂಟ ಮಹಾಜಗತ್ತು ಸಾಲಿಗ್ರಾಮ (ರಿ) ಇದರ ಒಡೆತನಕ್ಕೆ ಸೇರಿರುವ, ಇದೀಗ ಜೀರ್ಣಾವಸ್ಥೆಯಲ್ಲಿರುವ ಕೂಟ ಬಂಧು ಭವನಕ್ಕೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಈಗಿರುವ ಸ್ಥಳದಲ್ಲೇ ಸುಸಜ್ಜಿತ ಎರಡು ಅಂತಸ್ತುಳ್ಳ ಭವ್ಯ ಭವನವೊಂದನ್ನು ನೂತನವಾಗಿ ನಿರ್ಮಿಸುವ ಆಶಯವನ್ನು ಕೇಂದ್ರಾಧ್ಯಕ್ಷ ಶ್ರೀ ಪಿ. ವೆಂಕಟ್ರಾವ್ ವ್ಯಕ್ತಪಡಿಸಿದರು. ದಿನಾಂಕ–31–03–2013ರಂದು ಕೂಟಬಂಧು ಭವನದಲ್ಲಿ ಜರುಗಿದ ಕೇಂದ್ರ ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು ಅಂದಾಜು ರೂ.1.30ಕೋಟಿ ವೆಚ್ಚದ ಯೋಜನೆಯ ನೀಲನಕ್ಷೆ ಹಾಗೂ ಅಂದಾಜು ಪಟ್ಟಿಯ ವಿವರ ನೀಡಿ ಯೋಜನೆಯ ಯಶಸ್ವೀ ಅನುಷ್ಠಾನಕ್ಕೆ ಎಲ್ಲ ಅಂಗ ಸಂಸ್ಥೆಗಳ ಸಹಕಾರವನ್ನು ಮತ್ತು ಬೆಂಬಲವನ್ನು ಯಾಚಿಸಿದರು. ಈ ಬಗ್ಗೆ, 2ನೇ ವಿಶ್ವಕೂಟ ಸಮ್ಮೇಳನದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ಉಳಿದಿರುವ ಹಣವನ್ನು ಈ ಯೋಜನೆಗಾಗಿ ತರುವ ಪ್ರಯತ್ನ ನಡೆಸಲಾಗಿದೆ. ಅಲ್ಲದೆ, ಮುಂಬಯಿ, ಪುಣೆ ಹಾಗೂ ಬೆಂಗಳೂರಿನ ಗಣ್ಯ ಬಂಧುಗಳು ಬ್ರಹತ್ ಪ್ರಮಾಣದಲ್ಲಿ ಧನಸಹಾಯ ಮಾಡುವ ಆಶ್ವಾಸನೆ ದೊರೆತಿರುವ ಬಗ್ಗೆ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಂಗಳೂರು ಅಂಗಸಂಸ್ಥೆಯ ಶ್ರೀ ರಘುರಾಮ ರಾಯರು ಕಟ್ಟಡದ ನಿರ್ಮಾಣದ ಕುರಿತು ಸೂಕ್ತ ಸಲಹೆಸೂಚನೆಗಳನ್ನು ನೀಡಿದರಲ್ಲದೆ, ಸಭೆಯಲ್ಲಿ ಅದನ್ನು ಚರ್ಚಿಸಲಾಯಿತು. ಈ ನಿಟ್ಟಿನಲ್ಲಿ ಉಪಸಮಿತಿಗಳನ್ನು ರಚಿಸುವ ಬಗ್ಗೆ ಕೇಂದ್ರಾಧ್ಯಕ್ಷರಿಗೆ ಅಧಿಕಾರವನ್ನು ನೀಡಲಾಯಿತಲ್ಲದೆ, ಕಟ್ಟಡ ನಿಧಿ ಸಂಗ್ರಹಣೆಗಾಗಿ ಪ್ರತ್ಯೇಕ ರಸೀದಿ ಹಾಗೂ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಲು ಒಪ್ಪಿಗೆ ನೀಡಲಾಯಿತು. ನಿಧಿ ಸಂಗ್ರಹಣೆಗಾಗಿ ಮನವಿ ಪತ್ರವನ್ನು ಸಿದ್ಧಪಡಿಸಿ ರಸೀದಿ ಪುಸ್ತಕದೊಂದಿಗೆ ಎಲ್ಲ ಅಂಗಸಂಸ್ಥೆಗಳಿಗೆ ಕಳುಹಿಸಿಕೊಡುವಂತೆ ಸೂಚಿಸಲಾಯಿತು.

ಕೂಟ ಸಮಾಜದ ಮುಖವಾಣಿ 'ಕೂಟಬಂಧು' ದ್ವೈಮಾಸಿಕ ಪತ್ರಿ–ಕೆಗೆ ಉಪಸಂಪಾದಕರನ್ನು ನೇಮಿಸಿಕೊಳ್ಳುವ ಪ್ರಸ್ತಾಪಕ್ಕೆ ಸಭೆಯಲ್ಲಿ ಅನುಮೋದನೆ ನೀಡಲಾಯಿತಲ್ಲದೆ ಉಪಸಂಪಾದಕರ ನೇಮಕಾತಿಯ ಅಧಿಕಾರವನ್ನು ಕೇಂದ್ರಾಧ್ಯಕ್ಷರಿಗೆ ವಹಿಸಲಾಯಿತು. ಪತ್ರಿಕೆಯ ಪ್ರಸಾರ ಸಂಖ್ಯೆ ಹೆಚ್ಚಳ ಕುರಿತಂತೆ ಚರ್ಚಿಸಲಾಯಿತು. ಇದಲ್ಲದೆ ಕೇಂದ್ರ ಸಂಸ್ಥೆಗೆ ಉಪಕೋಶಾಧಿಕಾರಿ ನಿಯೋಜನೆಯ ಅವಶ್ಯಕತೆಯ ಬಗ್ಗೆ ಚರ್ಚಿಸಿ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಮಹಿಳಾ ವೇದಿಕೆಗಳ ಪ್ರಾತಿನಿಧಿಕ ಸ್ವರೂಪ ಕುರಿತಂತೆ ಕಾಸರಗೋಡು ಹಾಗೂ ಬೆಳ್ತಂಗಡಿ ಅಂಗಸಂಸ್ಥೆಯ ಅಧ್ಯಕ್ಷರಿಂದ ಸ್ಪಷ್ಟನೆ ಬಯಸಿದಾಗ, ಸಭೆಯಲ್ಲಿ ಚರ್ಚಿಸಿ, ಮಹಿಳಾ ಹಾಗೂ ಯುವ ವೇದಿಕೆಗಳು ಅಂಗಸಂಸ್ಥೆಯ ಭಾಗಗಳೇ ಆಗಿದ್ದು ಅವುಗಳು ಪ್ರತ್ಯೇಕ ಸದಸ್ಯತ್ವ ಶುಲ್ಕವನ್ನು ಸಂಗಹಿಸುವಂತಿಲ್ಲ, ತಮ್ಮ ಚಟುವಟಿಕೆಗಳಿಗೆ ಧನ ಸಂಗ್ರಹಣೆ ಮಾಡಿಕೊಂಡು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲು ಯಾವುದೇ ಅಭ್ಯಂತರವಿಲ್ಲ ಎಂದೂ, ಮಹಿಳಾ ಮತ್ತು ಯುವ ವೇದಿಕೆಗಳ ರಚನೆ ಹಾಗೂ ಕಾರ್ಯನಿರ್ವಹಣೆ ಕುರಿತಂತೆ ಪ್ರತ್ಯೇಕ ಸುತ್ತೋಲೆಯನ್ನು ಕೇಂದ್ರಸಂಸ್ಥೆ ವತಿಯಿಂದ ಎಲ್ಲ ಅಂಗಸಂಸ್ಥೆಗಳಿಗೆ ಕಳುಹಿಸುವಂತೆ ಸೂಚಿಸಲಾಯಿತು.

ಎಲ್ಲಾ ಅಂಗಸಂಸ್ಥೆಗಳು ತಮ್ಮ ವಾರ್ಷಿಕ ಮಹಾಸಭೆಯನ್ನು ಜೂನ್ 30ರೊಳಗೆ ಜರುಗಿಸಬೇಕೆಂದು ವಿನಂತಿಸಿದ ಪ್ರಧಾನ ಕಾರ್ಯದರ್ಶಿಗಳು, ಮುಂದಿನ ಕಾರ್ಯಕಾರಿಣಿ ಸಭೆಯನ್ನು ಜೂನ್ 30ರಂದು ಜರುಗಿಸಲಾಗುತ್ತಿದ್ದು, ಅಂಗಸಂಸ್ಥೆಗಳು ಆ ದಿನ ತಮ್ಮ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬಾರದೆಂದು ವಿನಂತಿಸಿಕೊಂಡರು.

ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಶ್ರೀ ಎ. ಜಗದೀಶ ಕಾರಂತ ಮಾತನಾಡಿ ಉದ್ದೇಶಿತ ಕೂಟಬಂಧು ಭವನದ ನಿರ್ಮಾಣಕ್ಕೆ ಶ್ರೀ ದೇವಳದ ಸಂಪೂರ್ಣ ಬೆಂಬಲ ಹಾಗೂ ಸಹಕಾರವನ್ನು ಘೋಷಿಸಿದರು. ನಿಕಟ ಪೂರ್ವ ಕೇಂದ್ರಾಧ್ಯಕ್ಷ ಡಾ. ಕೆ. ಎಸ್. ಕಾರಂತ ಮಾತನಾಡಿ ಉದ್ದೇಶಿತ ಮಾಹತ್ವಾಕಾಂಕ್ಷಿ ಯೋಜನೆಗೆ ಸರ್ವರ ಸಹಕಾರವನ್ನು ಕೋರಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳ ಸಭೆಯ ಸೂಚನಾ ಪತ್ರವನ್ನು ಮಂಡಿಸಿದರು. ಉಪಾಧ್ಯಕ್ಷ ಶ್ರೀ ಪಿ. ಶೇಷಗಿರಿ ರಾವ್ ಧನ್ಯಾವಾದ ಸಮರ್ಪಿಸಿದರು.

**ವರದಿ : ಪಿ. ಮಂಜುನಾಥ ಉಪಾಧ್ಯ,**

ಉಪಾಧ್ಯಕ್ಷರು, ಸಾಲಿಗ್ರಾಮ ಅಂಗಸಂಸ್ಥೆ.

ವಾರ್ತಾಸಂಚಯ

## ೧. ಬೆಂಗಳೂರು ಅಂಗಸಂಸ್ಥೆಗೆ ಭೂದಾನ

ಕೂಟ ಮಹಾಜಗತ್ತು ಸಾಲಿಗ್ರಾಮ (ರಿ) ಬೆಂಗಳೂರು ಅಂಗಸಂಸ್ಥೆಗೆ ಶ್ರೀ ಪಿ. ಸುರೇಶ ಹಂದೆಯವರು ತಮ್ಮ ಮಾತೃಶ್ರೀ ದಿ। ನಾಗವೇಣಿಯಮ್ಮನವರ ಸ್ಮರಣಾರ್ಥವಾಗಿ ಬೆಂಗಳೂರಿನ ವಸಂತಪುರದಲ್ಲಿ ತನ್ನ ಧರ್ಮಪತ್ನಿ ಶ್ರೀಮತಿ ಆಶಾ ಎಸ್. ಹಂದೆಯವರ ಹೆಸರಿನಲ್ಲಿರುವ 2240 ಚ. ಅಡಿ ವಿಸ್ತೀರ್ಣದ ನಿವೇಶನವನ್ನು ಮಕ್ಕಳಾದ ಕು। ಶುಭಾ, ಕು। ಸಂಗೀತ ಹಾಗೂ ಚಿ। ಸುಮಂತ ಕುಟುಂಬ ಸಮೇತರಾಗಿ, ಪ್ರೀತಿಯಿಂದ ನಮ್ಮ ಸಮಾಜಕ್ಕೆ ಭೂದಾನವಾಗಿ ನೀಡಿರುತ್ತಾರೆ.



ಅನಂತರ ಭೂದಾನ ಪತ್ರವನ್ನು ಶ್ರೀ ಪಿ. ಸುರೇಶ ಹಂದೆಯವರ ಹುಟ್ಟು ಹಬ್ಬದ ಶುಭ ದಿವಸವಾದ 28-2-2013ರಂದು ದಾನಿಗಳಾದ ಶ್ರೀಮತಿ ಪಿ. ಆಶಾ ಎಸ್. ಹಂದೆ ಮತ್ತು ಶ್ರೀ ಪಿ. ಸುರೇಶ ಹಂದೆಯವರಿಂದ ಅಂಗಸಂಸ್ಥೆಯ ಹೆಸರಿಗೆ ನೊಂದಾಯಿಸಿಕೊಳ್ಳಲಾಗಿದೆ. ಈ ನೊಂದಣಿ ಸಂದರ್ಭದಲ್ಲಿ ಅಂಗಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸದಸ್ಯರು ಮತ್ತು ವಿಶೇಷ ಆಹ್ವಾನಿತರಾಗಿ ಶ್ರೀ ಕೆ. ಎನ್. ರಾಘವೇಂದ್ರ ಹೇರ್ಳೆಯವರು ಉಪಸ್ಥಿತರಿದ್ದರು. ನೊಂದಣಿ ಕಾರ್ಯದಲ್ಲಿ ಭಾಗವಹಿಸಿದವರೆಲ್ಲರಿಗೂ ಸಂಸ್ಥೆಯಿಂದ ಸಿಹಿಯನ್ನು ಮತ್ತು ಶ್ರೀ ಎ. ಪದ್ಮನಾಭ ಕಾರಂತರಿಂದ ಕಾಫಿಯನ್ನು ನೀಡಲಾಯಿತು.

ನಂತರ ಶ್ರೀ ಪಿ. ಸುರೇಶ ಹಂದೆಯವರ ಸ್ವಗೃಹದಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ಪಿ. ಮಂಜುನಾಥ ಮಯ್ಯರು ದಾನಿಗಳನ್ನು ಶಾಲು ಹೊದಿಸಿ ಅಭಿನಂದಿಸುತ್ತಾ, ಶ್ರೀ ಸುರೇಶ ಹಂದೆಯವರು ಕೂಟ ಸಮಾಜಕ್ಕೆ ಭೂದಾನ ನೀಡಿ ಮಾದರಿಯಾಗಿದ್ದಾರೆ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಶ್ರೀ ಕೆ. ಎನ್. ರಾಘವೇಂದ್ರ ಹೇರ್ಳೆಯವರು ದಾನಿಗಳ ಕುಟುಂಬದ ಕೊಡುಗೆಯನ್ನು ಶ್ಲಾಘಿಸಿದರು.

ಶ್ರೀ ಪಿ. ಸುರೇಶ ಹಂದೆಯವರಿಂದ ಎಲ್ಲರಿಗೂ ಮಧ್ಯಾಹ್ನದ ಸವಿ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಭೋಜನದ ನಂತರ ಶ್ರೀ ಪಿ. ಸುರೇಶ ಹಂದೆ ದಂಪತಿಗಳು ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಸಮ್ಮಾನಿಸಿ, ದಾನ ನೀಡಿದ ನಿವೇಶನದ ಎಲ್ಲಾ ಮೂಲ



ದಾಖಲೆಗಳನ್ನು ಅಧ್ಯಕ್ಷರಿಗೆ ಹಸ್ತಾಂತರಿಸಿ ತಮ್ಮ ಸಂತೋಷವನ್ನು ಹಂಚಿಕೊಂಡರು.

ವರದಿ : ಚಂದ್ರಶೇಖರ ಕಾರಂತ

## ೨. ಸಾಲಿಗ್ರಾಮದಲ್ಲೊಂದು ಮಹಿಳಾ ಸಮ್ಮೇಳನ

ಬೆಳಗಿನ ಚುಮು ಚುಮು ಚಳಿ, ತಂಗಾಳಿ, ಸನಿಹದಲ್ಲಿ ದೇವರ ಮಂತ್ರ, ಗಂಟೆಯ ನಾದ, ಅರಿವಿಲ್ಲದೆ ಬರುವ ಗುನುಗುನು ದೇವರ ಸ್ತೋತ್ರ ಈ ವಾತಾವರಣದಲ್ಲಿ ಸಾಲಿಗ್ರಾಮದಲ್ಲಿ ಹಬ್ಬಿದ ಸಂಭ್ರಮ. ಮಹಿಳೆಯರು ಮಕ್ಕಳು ಹಾಗೂ ಮಹನೀಯರು ಎಂದು 8 ಗಂಟೆಗೆಲ್ಲಾ ಸೇರಿ ಶ್ರೀ ಗುರುನರಸಿಂಹ ದೇವರಲ್ಲಿ ಪ್ರಾರ್ಥನೆ. ಆ ಕ್ಷಣದಿಂದ ಕೂಟ ಮಹಿಳಾ ಸಮ್ಮೇಳನ 2013ಕ್ಕೆ ಚಾಲನೆ. ಸಮವಸ್ತ್ರ ಧರಿಸಿದ ಮಕ್ಕಳ ಬ್ಯಾಂಡ್ ಸೆಟ್, ಬೊಂಬೆ ಕುಣಿತ, ಕಲಶ ಹಿಡಿದ ಕನ್ನಿಕೆಯರು, ಕಲಶದಿಂದ ಶೋಭಿಸುವ ಸುಮಂಗಲಿಯರು, ನಡುವೆ ಸಮ್ಮೇಳನಾಧ್ಯಕ್ಷೆ ಶ್ರೀಮತಿ ಯು. ವರಮಹಾಲಕ್ಷ್ಮಿ ಹೊಳ್ಳರು, ಉದ್ಘಾಟಕಿ ಶ್ರೀಮತಿ ವತ್ಸಲಾ ಸೋಮಯಾಜಿಯವರು, ಮಹಿಳಾ ವೇದಿಕೆ ಸದಸ್ಯರು, ಮಹಿಳೆಯರು ಸೇರಿದ ಮೆರವಣಿಗೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಮುಗಿಸಿದರು. ಮೆರವಣಿಗೆಯಲ್ಲಿ ದೇವಸ್ಥಾನದ ಜ್ಞಾನಮಂದಿರದ ಸಭಾಂಗಣಕ್ಕೆ ಗಣ್ಯರೆಲ್ಲರ ಆಗಮನ.



**ಉದ್ಘಾಟನಾ ಸಮಾರಂಭ :** ಮಹಿಳಾ ವೇದಿಕೆಯ ಅಧ್ಯಕ್ಷೆ ಭಾರತಿ ಪ್ರಕಾಶ ಹೇರ್ಳೆ ಸ್ವಾಗತಿಸಿದರು. ಗೌರವಾಧ್ಯಕ್ಷೆ ಶ್ರೀಮತಿ ಜಾಹ್ನವಿ ಹೇರ್ಳೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿನಿ ಗೀತಾ ಅಧಿಕಾರಿ ಗಣ್ಯರೆಲ್ಲರ ಪರಿಚಯ ಮಾಡಿದರು. ಶ್ರೀಮತಿ ವತ್ಸಲಾ ಸೋಮಯಾಜಿಯವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟನೆ ಮಾಡಿ ಒಳ್ನುಡಿಗಳನ್ನಾಡಿ ಶುಭ ಹಾರೈಸಿದರು. ಇನ್ನೋರ್ವ ಗಣ್ಯವ್ಯಕ್ತಿ ಶ್ರಿ ಗುರುನರಸಿಂಹ ದೇವಸ್ಥಾನದ ಆಡಳಿತ ಮಂಡಲಿ ಅಧ್ಯಕ್ಷ ಶ್ರೀ ಐರೋಡಿ ಜಗದೀಶ ಕಾರಂತರು ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಯ ಉದ್ಘಾಟನೆಯನ್ನು ಕೊನೆ ಅರಳಿಸುವ ಮೂಲಕ ಮಾಡಿದರು. ಹಾಗೆಯೇ ಮಹಿಳಾವೇದಿಕೆಯ ಯಾವತ್ತು ಕಾರ್ಯಕ್ರಮಗಳಿಗೆ ದೇವಸ್ಥಾನದ ಸಹಕಾರ, ಬೆಂಬಲ ನೀಡುವುದಾಗಿ ಹೇಳಿ ಪ್ರೋತ್ಸಾಹಿಸಿದರು. ವೇದಿಕೆಯಲ್ಲಿ ಶುಭಾಶಂಸನೆಗಾಗಿ ಕೂಟಮಹಾಜಗತ್ತು ಕೇಂದ್ರ ಸಂಸ್ಥೆಯ ಅಧ್ಯಕ್ಷ ಶ್ರೀ ಪಿ. ವೆಂಕಟರಾವ್ ಉಪಸ್ಥಿತರಿದ್ದು, ಈ ಸಮಾರಂಭ, ಆ ಯೋಜನೆ ಹಾಗೂ ಸಂಘಟನೆಗಾಗಿ ಶ್ಲಾಘಿಸಿ, ಸದಾ ತಮ್ಮ ನೆರವು ನೀಡುವುದಾಗಿ ಹುರಿದುಂಬಿಸಿದರು. ಮಹಿಳಾವೇದಿಕೆಯ ಮಾತೃ ಸಂಸ್ಥೆ ಸಾಲಿಗ್ರಾಮ ಅಂಗಸಂಸ್ಥೆಯ ಅಧ್ಯಕ್ಷರಾಗಿರುವ ಶ್ರೀ ಕೆ. ಶಂಕರನಾರಾಯಣ ಹೊಳ್ಳರು 'ಅಂಗಸಂಸ್ಥೆ ಹಾಗೂ ಮಹಿಳಾವೇದಿಕೆಯ ಕಾರ್ಯಕ್ರಮಗಳು ಬೇರೆ ಬೇರೆಯಲ್ಲ - ನಾವೆಂದೂ ಪೂರ್ತಿ ಸಹಕಾರ ನೀಡುವವರಿದ್ದೇವೆ' ಎಂಬ ಆತ್ಮೀಯ ಮಾತುಗಳನ್ನಾಡಿದರು.

ಸಮ್ಮೇಳನಾಧ್ಯಕ್ಷೆ ಶ್ರೀಮತಿ ಯು. ವರಮಹಾಲಕ್ಷ್ಮಿ ಹೊಳ್ಳರು ಸುದೀರ್ಘವಾದ ತನ್ನ ನುಡಿ ತೋರಣದಲ್ಲಿ ಕೂಟ ಮಹಿಳೆಯರು ಸಂಪ್ರದಾಯ ಸಂಸ್ಕೃ ತಿ ಬೆಳೆಸಿದವರು ಹಾಗೆಯೆ ಆಧುನಿಕತೆಗೆ ತಮ್ಮನ್ನು ತೊಡಗಿಸಿಕೊಂಡವರು ಹೌದು ಎನ್ನುತ್ತಾ ಉದಾಹರಣೆಗಾಗಿ ಅಕ್ಕಣಿಯಮ್ಮ, ಪದ್ಮಾವತಿ ಹಂದೆಯವರಂತಹ ಅನೇಕರನ್ನು ನೆನಪಿಸಿದರು. ಆಧುನಿಕ ಜಗತ್ತಿನ ಎಲ್ಲಾ ಆಯಾಮಗಳಲ್ಲಿ ತೊಡಗಿಸಿಕೊಂಡು ಸಮಾಜದ ಸ್ವಾಸ್ಥ್ಯ ಕಾಪಾಡಿ ಇತರರಿಗೆ ಈ ಮಹಿಳೆಯರು ಮಾರ್ಗದರ್ಶಕರಾಗಲಿ ಎಂಬ ಆಶಯದೊಂದಿಗೆ ಮಹಿಳೆಯರ ಜವಾಬ್ದಾರಿ ಬಿಂಬಿಸಿದರು. ಅರ್ಥಪೂರ್ಣ ಸಮ್ಮೇಳನ, ಸಂಘಟನೆಗಾಗಿ ಶ್ಲಾಘಿಸಿದರು.

ಶ್ರೀ ಗುರುನರಸಿಂಹ ದೇವಸ್ಥಾನದ ಧರ್ಮದರ್ಶಿಗಳಾದ ಶ್ರೀ ಕೆ. ಅನಂತ ಪದ್ಮನಾಭ ಐತಾಳ, ಶ್ರೀ ಆನಂದರಾಮ ಮಧ್ಯಸ್ಥ, ಶ್ರೀ ಸದಾರಾಮ ಹೇರ್ಳೆ, ಶ್ರೀ ನಾಗರಾಜ ರಾವ್, ಕೂ. ಮ. ಜ. ಕೇಂದ್ರ ಸಂಸ್ಥೆಯ ಪದಾಧಿಕಾರಿಗಳಾದ ಶ್ರೀ ಸುಬ್ರಹ್ಮಣ್ಯ ಕಾರಂತ, ಶ್ರೀ ರಾಮಕೃಷ್ಣ ಐತಾಳರು, ಬಿಲಿಯನ್ ಫೌಂಡೇಶನ್ನಿನ ಕಾರ್ಯದರ್ಶಿ ಶ್ರೀ ವಾಸುದೇವ ಮಧ್ಯಸ್ಥರು ಹೀಗೆ ಆನೇಕ ಗಣ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ಭಾಗವಹಿಸಿದ ಅಂಗಸಂಸ್ಥೆ ಹಾಗೂ ಮಹಿಳಾ ವೇದಿಕೆ ಸದಸ್ಯರಲ್ಲಿ ತೀರ್ಥಹಳ್ಳಿ, ಬೆಂಗಳೂರು, ಮಂಗಲ್ಪಾಡಿ, ಶೃಂಗೇರಿ, ಕುಂದಾಪುರ, ಉಡುಪಿ, ಬಂಟ್ವಾಳ, ಬೆಳ್ತಂಗಡಿ, ಪೊಳಲಿ, ವಾಮಂಜೂರು, ಕಾಟಿಪಳ್ಳ, ಕಾಸರಗೋಡು, ಕಮಲಶಿಲೆ, ಜಯಪುರ, ಮಂಗಳೂರು, ಕಿರಿಮಂಜೇಶ್ವರದವರಿದ್ದು ಸಭೆ ಸಂಪನ್ನಗೊಂಡಿತು. ಮೂವರು ವಿದೇಶಿಯರು ಪಾಲ್ಗೊಂಡಿರುವುದು ವಿಶೇಷ.

ಮಹಿಳಾವೇದಿಕೆಯ ಉಪಾಧ್ಯಕ್ಷೆ ಶ್ರೀಮತಿ ಕಮಲಾಕ್ಷಿ ಹಂದೆ ವಂದನಾರ್ಪಣೆ ನಡೆಸಿಕೊಟ್ಟರು. ಕೋಶಾಧಿಕಾರಿಣಿ ಯಶೋದಾ ಹೊಳ್ಳ ಕಾರ್ಯಕ್ರಮ ನಿರೂಪಿಸಿದರು.

**ಸಮ್ಮೇಳನದಲ್ಲಿ ಗೋಷ್ಠಿಗಳು :**

**1. ನಮ್ಮ ಸಂಸ್ಕೃತಿ ಉಳಿಸುವಲ್ಲಿ ಮಹಿಳೆಯ ಪಾತ್ರ**

ಸಂಪನ್ಮೂಲ ವ್ಯಕ್ತಿ ವಿದ್ವಾನ್ ವಿಜಯಕುಮಾರ ಮಂಜರು ಪಾಂಡೇಶ್ವರ, ನ್ಯಾಯ ಶಾಸ್ತ್ರ ಮತ್ತು ವೇದಾಂತ ಶಾಸ್ತ್ರದಲ್ಲಿ ವಿದ್ವತ್ ಪದವಿ ಪಡೆದ ಇವರು ನಮ್ಮ ಸಂಸ್ಕೃ ತಿ ಸಂಸ್ಕಾರ ಉಳಿದುಕೊಂಡಿದೆ ಎನ್ನಲು ಇಂದಿನ ಈ ಸಭೆಯ ಇಷ್ಟೊಂದು ಜನರೇ ಸಾಕ್ಷಿ. 'ನಮ್ಮ ಸಂಸ್ಕೃ ತಿ, ಭಾರತೀಯ ಧರ್ಮ ಸಂಸ್ಕೃ ತಿ ಉಳಿದು ಬಂದಿರುವುದು ಸ್ತ್ರೀಯರಿಂದ, ಅದು ಉಳಿಯುವುದು ಅಲ್ಲಿ ಬೆಳೆಯಲಿ ಬೆಳಗಲಿ' ಎನ್ನುವ ತನ್ನ ಸರಳ ಸುಂದರ ಮಾತಿನ ಮೋಡಿನಿಂದ ಸಭೆಯನ್ನು ಮುಗ್ಧರಾಗಿಸಿದರು. ಈ ಗೋಷ್ಠಿಯ ನಿರ್ವಹಣೆ ಶ್ರೀಮತಿ ವನಿತಾ ಉಪಾಧ್ಯ ನಡೆಸಿದರು.

**2. ಕೌಟುಂಬಿಕ ಸಾಮರಸ್ಯ :**

ಸಂಪನ್ಮೂಲ ವ್ಯಕ್ತಿ ಶ್ರೀಮತಿ ಗೋಪಿಕಾ ಮಯ್ಯ ಉಡುಪಿ ಸ್ನಾತಕೋತ್ತರ ಪದವೀಧರೆಯಾಗಿ ಗಲ್ಫ್ ಕನ್ನಡಿಗ ಡಾಟ್‌ಕಾಮ್‌ನಲ್ಲಿ ಗೌರವ ಸಂಪಾದಕಿಯಾಗಿ ಸೇವೆ ಸಲ್ಲಿಸುತ್ತಿರುವ ಇವರು ಕುಟುಂಬದ ಹೊಂದಾಣಿಕೆ ಮುಖ್ಯವಾಗಿ ಪತಿ ಪತ್ನಿಯರಲ್ಲಿ ಎಂಬ ವಿಷಯಕ್ಕೆ ಒತ್ತು ಕೊಟ್ಟು, ಸಾಮಾನ್ಯ, ವಿದ್ಯಾವಂತ, ಉದ್ಯೋಗಸ್ಥ ಮಹಿಳೆಯ ಮಾನಸಿಕ ತುಮುಲ, ಬವಣೆ, ಸಮಸ್ಯೆ ಹಾಗೂ ಪರಿಹಾರಗಳ ವಿಚಾರ ಮಂಡಿಸಿದರು.

ಶ್ರೀಮತಿ ಜಯಶ್ರೀ ಮಧ್ಯಸ್ಥ ಕಾರ್ಯಕ್ರಮ ನಿರ್ವಹಿಸಿದರು.

**3. ಸಮಾಜ ಮತ್ತು ಮಹಿಳೆ :**

ಸಂಪನ್ಮೂಲ ವ್ಯಕ್ತಿ ಶ್ರೀಮತಿ ಶಾಲಿನಿ ಉಡುಪ, ಜಪ್ತಿ ಕುಂದಾಪುರದ ಬಂಡಾರ್‌ಕಾರ್ಸ್ ಕಾಲೇಜಿನ ವಿಜ್ಞಾನ ಉಪನ್ಯಾಸಕಿಯಾದ ಇವರು ಸ್ವಸ್ಥ ಸಮಾಜ ಮಹಿಳೆಯಿಂದ ಪ್ರಾರಂಭ ಹಾಗೂ ಸಾಧ್ಯ. ಹಾಗೆನೇ ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಸಮಾಜದಿಂದ ಎನ್ನುವುದನ್ನು ಕೇಂದ್ರ ವಿಷಯವಾಗಿರಿಸಿಕೊಂಡು ನೀಡಿದ ಉಪನ್ಯಾಸ ಸರ್ವರಿಂದ ಶ್ಲಾಘನೆ ಪಡೆಯಿತು.

ಶ್ರೀಮತಿ ವಸುಧಾ ಉಡುಪ ಗೋಷ್ಠಿಯ ನಿರ್ವಹಣೆ ನಡೆಸಿದರು.

**4. ಸ್ವಾವಲಂಬನಾ ಮಹಿಳೆ :**

ಸಂಪನ್ಮೂಲ ವ್ಯಕ್ತಿ ಶ್ರೀಮತಿ ಜಾನಕಿ ಹಂದೆ ಹಂದೆಟ್ಟು ಉತ್ತಮ ಸಹಕಾರಿ, ಸಂಘಟಕಿ, ಸಾಧನಾ ಮಹಿಳೆಯಾದ ಇವರು ಸತತ ಪ್ರಯತ್ನ, ಪ್ರೋತ್ಸಾಹ, ಛಲ, ಸಾಧನೆಗಳಿಂದ ಮಹಿಳೆ ಸುದೃಢ ಮಹಿಳೆಯಾಗಲು ಹೇಗೆ ಸಾಧ್ಯ ಎನ್ನುವ ಬಗ್ಗೆ ವಿಷಯ ಮಂಡಿಸಿದರು. ಶ್ರೀಮತಿ ಯಶೋದಾ ಹಂದೆ ಗೋಷ್ಠಿಯನ್ನು ನಿರ್ವಹಿಸಿಕೊಟ್ಟರು. ಗೋಷ್ಠಿಗಳ ನಡು ನಡುವೆ ಮಹಿಳಾವೇದಿಕೆ ಸದಸ್ಯರಿಂದ ಶೋಭಾನೆ ಹಾಡುಗಳು, ಮಕ್ಕಳಿಂದ ಭರತನಾಟ್ಯ, ಸಮೂಹ ನೃತ್ಯ, ಮಹಿಳೆಯರಿಂದ ನೃತ್ಯ, ಭಾವಗೀತೆ, ಸ್ವರಚಿತ ಕವನ ವಾಚನ ಎಲ್ಲರಿಗೂ ಸಂತಸ ತಂದಿತು. ವಿಶೇಷವಾಗಿ ನಾಟ್ಯ ಮುಯೂರಿ ಕು। ಜ್ಞಾನ ಐತಾಳ ನೃತ್ಯ ಆಯೋಜಿಸಲಾಗಿತ್ತು. ಆಗಮಿಸಿರುವ ಕೆಲ ಅಂಗಸಂಸ್ಥೆಯವರು ತಮ್ಮ ವಿಶೇಷತೆಯನ್ನು ಬಿಂಬಿಸುವ ಕಾರ್ಯಕ್ರಮ ನೀಡಿದರು.

ಮಧ್ಯಾಹ್ನ ಶ್ರೀ ದೇವರ ಪ್ರಸಾದ ಭೋಜನ ಪಡೆದು ಸಮ್ಮೇಳನದ ಪ್ರತಿನಿಧಿಗಳು ಧನ್ಯರಾದರು.



**ಸಮಾರೋಪ ಸಮಾರಂಭ :** ಸಮ್ಮೇಳನಾಧ್ಯಕ್ಷೆ ಸಾಹಿತಿ ಉಪ್ಪುಂದೆ ವರಮಹಾಲಕ್ಷ್ಮಿ ಹೊಳ್ಳರ ಅನುಮತಿಯೊಂದಿಗೆ ಕಾರ್ಯಕ್ರಮದ ಆರಂಭ. ಮಹಿಳಾವೇದಿಕೆ ಅಧ್ಯಕ್ಷೆ ಶ್ರೀಮತಿ ಭಾರತಿ ಪ್ರಕಾಶ ಹೇರ್ಳೆ ಸ್ವಾಗತಿಸಿದರು. ಕಾರ್ಯದರ್ಶಿನಿ ಗೀತಾ ಅಧಿಕಾರಿಯವರಿಂದ ಗಣ್ಯರ ಪರಿಚಯ ನಂತರ ಬೆಳಗಿನಿಂದ ಕಾರ್ಯಕ್ರಮವನ್ನು ವೀಕ್ಷಿಸಿ ಸಮಾರೋಪ ಭಾಷಣದಲ್ಲಿ ಎಲ್ಲಾ ಗೋಷ್ಠಿಗಳ ಸಾರಾಂಶ, ಮಹಿಳೆಯರೇನು ಮಾಡಲು ಸಾಧ್ಯ ಎನ್ನುವ ಬಗ್ಗೆ ತನ್ನ ನಿರರ್ಗಳ ಮಾತುಗಳಿಂದ ಸಮ್ಮೇಳನದ ಕಳೆ ಹೆಚ್ಚಿಸಿದವರು ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಲೋಚನಾ ಹೊಳ್ಳರು.

ಮುಖ್ಯ ಅತಿಥಿ ಸ್ಥಾನದಿಂದ ಡಾ। ವಿದ್ವಾನ್ ನಿಟಿಲಾಪುರ ಕೃಷ್ಣಮೂರ್ತಿಯವರು ಮಹಿಳೆ–ಸಂಸ್ಕೃತಿ–ಸಂಸ್ಕಾರ ಕುರಿತಂತೆ ಕೂಟಬಂಧು ಪತ್ರಿಕೆಗಳಲ್ಲಿ ತಾವು ಪ್ರಕಟಿಸಿದ ಲೇಖನಗಳ ಸಾರಾಂಶಗಳನ್ನು ಸರಳವಾಗಿ ಹಾಗೂ ಅಭಿಮಾನ ತುಂಬಿ ಹೇಳಿದರು. ಶ್ರೀಯುತರು ಬೆಳಗಿನಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಭೆಯ ಗೌರವ ಹೆಚ್ಚಿಸಿದರೆಂದರೆ ತಪ್ಪಾಗದು.

ಶ್ರೀ ಗುರುನರಸಿಂಹ ದೇವಸ್ಥಾನದ ಕಾರ್ಯದರ್ಶಿ ಶ್ರೀ ಆನಂದರಾಮ ಮಧ್ಯಸ್ಥ, ಕೂಟ ಮಹಾಜಗತ್ತು ಕೇಂದ್ರ ಸಂಸ್ಥೆಯ ಅಧ್ಯಕ್ಷ ಶ್ರೀ ಪಿ. ವೆಂಕಟರಾವ್ ಹಾಗೂ ಸಾಲಿಗ್ರಾಮ ಅಂಗಸಂಸ್ಥೆಯ ಉಪಾಧ್ಯಕ್ಷ ಶ್ರೀ ಮಂಜುನಾಥ ಉಪಾಧ್ಯರು ಕಾರ್ಯಕ್ರಮದ ಯಶಸ್ಸನ್ನು ಹೇಳಿದುದಲ್ಲದೆ ಮಹಿಳಾವೇದಿಕೆ ಮುಂದೆ ಸಮಾಜಕ್ಕಾಗಿ, ಮಹಿಳೆಯರಿಗಾಗಿ ಹಮ್ಮಿಕೊಳ್ಳಬಹುದಾದ ಯೋಜನೆ ಬಗ್ಗೆ ಮಾಹಿತಿ ಒದಗಿಸಿದರು.

ಸಮ್ಮೇಳನಾಧ್ಯಕ್ಷೆ ವರಮಹಾಲಕ್ಷ್ಮಿ ಹೊಳ್ಳರು ಬೆಳಗಿನ ಗೋಷ್ಠಿಗಳ ಒಟ್ಟು ವಿಷಯಗಳ ಕುರಿತಂತೆ ಮಹಿಳೆಯರ ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕ ಸೌಹಾರ್ದ ಮತ್ತು ಕರ್ತವ್ಯಗಳ ಕುರಿತು ತನ್ನ ಅಭಿಪ್ರಾಯ, ಕಾರ್ಯಕ್ರಮದ ಶಿಸ್ತು, ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಮಹಿಳಾ ವೇದಿಕೆಯ ಗೌರವಾಧ್ಯಕ್ಷೆ ಶ್ರೀಮತಿ ಜಾಹ್ನವಿ ಹೇರ್ಳೆ ಉಪಸ್ಥಿತರಿದ್ದರು. ಕೊನೆಯಲ್ಲಿ ಸಮ್ಮೇಳನಾಧ್ಯಕ್ಷೆ ಯು. ವರಮಹಾಲಕ್ಷ್ಮಿ ಹೊಳ್ಳರನ್ನು ಮಹಿಳಾ ವೇದಿಕೆ ವತಿಯಿಂದ ಗೌರವಿಸಿ ಸಮ್ಮಾನಿಸಲಾಯಿತು. ಶ್ರೀಮತಿ ಉಪಾಧ್ಯ (ಜೊತೆ ಕಾರ್ಯದರ್ಶಿನಿ) ವಂದನಾರ್ಪಣೆ ಮಾಡಿದರು.

**ವರದಿ : ಯಶೋದಾ ಹೊಳ್ಳ**

# ೩. ಕಾಸರಗೋಡಿನಲ್ಲಿ ಯುವವೇದಿಕೆಯ ದಶಮಾನೋತ್ಸವ

ಕಾಸರಗೋಡು: ನೈತಿಕತೆಯ ಕೊರತೆಯು ಸಮಾಜದಲ್ಲಿ ಇಂದು ಕಂಡುಬರುವ ಸಮಸ್ಯೆಯಾಗಿದ್ದು, ಎಲ್ಲವನ್ನೂ ಆರ್ಥಿಕ ದೃಷ್ಟಿಕೋನದಲ್ಲಿ ನೋಡಲಾಗುತ್ತಿದೆ. ಇದರಿಂದಾಗಿ ಮನುಷ್ಯ ಸಂಬಂಧಗಳೇ ಕಡಿಮೆಯಾಗುತ್ತಿದೆ ಎಂಬುದಾಗಿ ಕೇಂದ್ರಾಧ್ಯಕ್ಷ ಶ್ರೀ ಪಿ. ವೆಂಕಟ್ರಾವ್ ಅಭಿಪ್ರಾಯಪಟ್ಟರು. ಈ ನಿಟ್ಟಿನಲ್ಲಿ ಯುವಕರು ಸೆಟೆದು ನಿಂತು ಕಾರ್ಯಪ್ರವೃತ್ತರಾಗಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಕೂಟಮಹಾಜಗತ್ತಿನ ಕಾಸರಗೋಡು ಅಂಗಸಂಸ್ಥೆಯ ಯುವವೇದಿಕೆಯಾದ ನರಸಿಂಹ ದಳದ ದಶಮಾನೋತ್ಸವವನ್ನು ಮಧೂರಿನ ಪರಕ್ಕಿಲ ಶ್ರೀಮಹಾದೇವ ಶಾಸ್ತಾವಿನಾಯಕ ದೇವಾಲಯದ ನಟರಾಜ ಕಲ್ಯಾಣಮಂಟಪದಲ್ಲಿ ಜರಗಿದ್ದು, ಇದರಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ಕಾಸರಗೋಡು ಅಂಗಸಂಸ್ಥೆಯ ಅಧ್ಯಕ್ಷ ಬಿ. ನಾರಾಯಣ ಮಯ್ಯರು ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ಸಾಲಿಗ್ರಾಮದ ಶ್ರೀಗುರುನರಸಿಂಹ ದೇಗುಲದ ಧರ್ಮದರ್ಶಿ ಶ್ರೀ ನೀರಾಳ ಕೃಷ್ಣ ಹೊಳ್ಳ, ಕಾಸರಗೋಡಿನ ಕಿಮ್ಸ ಆಸ್ಪತ್ರೆಯ ಡಾ। ಗಣೇಶ್ ಮಯ್ಯ, ಮಂಗಲ್ಪಾಡಿ ಅಂಗಸಂಸ್ಥೆಯ ಅಧ್ಯಕ್ಷ ರಾಮಚಂದ್ರ ಮಯ್ಯ ಮುಂತಾದವರು ಶುಭವನ್ನು ಹಾರೈಸಿದರು. ಪುರೋಹಿತರಾದ ವೇದಮೂರ್ತಿ ವಾಸುದೇವ ಅಡಿಗ, ಕುಂಬಳೆ ಹಾಗೂ ವೇದಮೂರ್ತಿ ತುಂಗ ಶಂಕರನಾರಾಯಣ ಭಟ್ ಅವರು ಎಲ್ಲಾ ಕೂಟಬಂಧುಗಳಿಗೂ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ‘ಸಂಘಟನೆಯಲ್ಲಿ ಯುವಜನರ ಪಾತ್ರ’ ಎಂಬ ವಿಷಯದ ಕುರಿತಾಗಿ ಯುವಗೋಷ್ಠಿ ನಡೆಯಿತು. ವಿಷಯದ ಕುರಿತಾಗಿ ಕೂಟಮಹಾಜಗತ್ತು ಕೇಂದ್ರಸಂಸ್ಥೆಯ ಜತೆ ಕಾರ್ಯದರ್ಶಿ ರಮೇಶ ಮಯ್ಯರು ಮಾತನಾಡಿ, ‘ಇಂದಿನ ಯುವಕರಲ್ಲಿ ಹಿರಿಯರ ಬಗ್ಗೆ ಗೌರವ ಆದರಗಳು ಕಡಿಮೆಯಾಗುತ್ತಿದ್ದು, ಇದು ಪ್ರಗತಿಯ ಸಂಕೇತವಲ್ಲ ಎಂಬುದಾಗಿ ಹೇಳಿದರು. ಕೂಟ ಮಹಾಜಗತ್ತು ಕೇಂದ್ರಸಂಸ್ಥೆಯ ನಿಕಟಪೂರ್ವ ಅಧ್ಯಕ್ಷರೂ ಖ್ಯಾತ ಮನೋವೈದ್ಯರೂ ಆದ ಡಾ। ಕೆ. ಎಸ್. ಕಾರಂತರು ಮಾತನಾಡಿ ಯುವಜನತೆಯ ನೇತೃತ್ವ ಗುಣವನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಒತ್ತಿಹೇಳಿದರು. ಮಂಗಲ್ಪಾಡಿ ಅಂಗಸಂಸ್ಥೆಯ ಯುವ ವೇದಿಕೆ ಅಧ್ಯಕ್ಷ ಕೃಷ್ಣಪ್ರಸಾದ್






ಕಾಸರಗೋಡು ಅಂಗಸಂಸ್ಥೆಯ ಯುವ ವೇದಿಕೆ ಅಧ್ಯಕ್ಷ ರಾಜ ಎಂ. ಜಿ. ಮಹಿಳಾ ವೇದಿಕೆಯ ಅಧ್ಯಕ್ಷೆ ನಿರ್ಮಲಾ ತುಂಗ, ನರಸಿಂಹ ದಳ ನಿಕಟಪೂರ್ವ ಸಂಚಾಲಕ ಶಂಕರನಾರಾಯಣ ತುಂಗ ಮುಂತಾದವರು ಉಪಸ್ಥಿತರಿದ್ದರು.

ಯುವ ವೇದಿಕೆಯ ದಶಮಾನೋತ್ಸವದ ಪ್ರಯುಕ್ತ ಪೂರ್ವಾಹ್ಣ ಮಹಾಗಣಪತಿ ಹವನ, ನೃಸಿಂಹ ಹೋಮ, ಆಂಜನೆಯ ಪೂಜೆ ಮೂಂತಾದ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ವೇದಮೂರ್ತಿ ವಾಸುದೇವ ಅಡಿಗ ಹಾಗೂ ವೇದಮೂರ್ತಿ ತುಂಗ ಶಂಕರನಾರಾಯಣ ಭಟ್ ಇದರ ನೇತೃತ್ವವನ್ನು ವಹಿಸಿದ್ದರು.

ಸಮಾಜದ ಪ್ರತಿಭೆಗಳಿಂದ ಭಕ್ತಿಗೀತೆ ಹಾಗೂ ಯಕ್ಷಗಾನ ಕಲಾವಿದರ ನೇತೃತ್ವದಲ್ಲಿ ಶರಸೇತು ಬಂಧನ ಎಂಬ ಯಕ್ಷಗಾನ ತಾಳಮದ್ದಲೆ ಮುಂತಾದ ಸಾಂಸ್ಕೃ ತಿಕ ಕಾರ್ಯಕ್ರಮಗಳು ಜರಗಿದ್ದು, ದಶಮಾನೋತ್ಸವಕ್ಕೆ ಮೆರುಗನ್ನು ನೀಡಿದವು.

ಪ್ರಾರಂಭದಲ್ಲಿ ಗಣೇಶ ತುಂಗ ಸ್ವಾಗತಿಸಿ, ಕೊನೆಯಲ್ಲಿ ಅಂಗಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಂ. ನರಸಿಂಹ ರಾಜ ವಂದಿಸಿದರು. ಕೃಷ್ಣಪ್ರಸಾದ್ ಅಡಿಗ ಹಾಗೂ ಚಂದ್ರಶೇಖರರಾವ್ ಏತಡ್ಕ ನಿರೂಪಿಸಿದರು.

**ವರದಿ : ನರಸಿಂಹ ಮಯ್ಯ ಎಂ, ಮಧೂರು**



## ೪. ಮೈಸೂರಿನಿಂದ ಯಾತ್ರಾ ಪ್ರವಾಸ

ಕೂಟಮಹಾಜಗತ್ತುಮೈಸೂರುಅಂಗಸಂಸ್ಥೆಯಿಂದತಾ. 20-1-2013ನೇಭಾನುವಾರದಂದು ಗರ್ಗೇಶ್ವರ, ಟೀನರನೀಪುರದಲ್ಲಿರುವ ತಿರುಮಕೂಡಲು ಸೋಮನಾಥಪುರ, ಗಂಜಾಂ ನರಸಿಂಹಸ್ವಾಮಿ ದೇವಸ್ಥಾನ, ತಲಕಾಡು, ಮುಡುಕುತೊರೆ, ಮಲ್ಲಿಕಾರ್ಜುನ ಮತ್ತು ಮಧ್ಯರಂಗ ದೇವಸ್ಥಾನಕ್ಕೆ ಪ್ರವಾಸ ಏರ್ಪಡಿಸಿದ್ದರು. ಕೂಟಬಾಂಧವರನ್ನೊಳಗೊಂಡ ಮಿನಿ ಬಸ್ಸಿನಲ್ಲಿ 6.30ರ ವೇಳೆಗೆ ಮೈಸೂರಿನಿಂದ ಪ್ರಯಾಣ ಹೊರೆಟೆವು. ಮಾರ್ಗದಲ್ಲಿ ನರಸಿಂಹ ಸ್ತೋತ್ರವನ್ನು ಪಠಿಸುತ್ತಾ ಪಯಣ ಮುಂದುವರಿಸಿದೆವು. ಮೊದಲು ಋಷಿಗಳು ತಪಸ್ಸು ಮಾಡಿ ಶಿವಲಿಂಗವನ್ನು ಪೂಜಿಸಿದ ಸ್ಥಳ, ಶಕ್ತಿಶಾಲಿ ಮತ್ತು ಇಷ್ಟಾರ್ಥವನ್ನು ನೆರವೇರಿಸುವ ಗಣಪತಿಯಿರುವ ಸ್ಥಳವಾದ ಗರ್ಗೇಶ್ವರಕ್ಕೆ ಧಾವಿಸಿ ದೇವರ ದರ್ಶನ ಪಡೆದೆವು.

ನಂತರ ದಕ್ಷಿಣ ಕಾಶಿ ಎಂದೇ ಕರೆಯಲ್ಪಡುವ ಕಾವೇರಿ, ಕಪಿನಿ ಮತ್ತು ಗುಪ್ತಗಾಮಿನಿ ಸ್ಪಟಿಕ ಸರೋವರ ನದಿಯಾದ ತಿರುಮಕೂಡಲು ಮತ್ತು ಅಗಸ್ತ್ಯೇಶ್ವರ ದೇವಸ್ಥಾನಕ್ಕೆ ತೆರಳಿದೆವು. ಬೆಳಗಿನ ಉಪಹಾರವನ್ನು ಅಲ್ಲಿಯೇ ಮುಗಿಸಿದೆವು. ನಮ್ಮ ಸಂಘದ ಸದಸ್ಯ ಶ್ರೀ ಸತ್ಯನಾರಾಯಣ ಹೊಳ್ಳರು ಉಪಾಹಾರದ ಆತಿಥ್ಯವನ್ನು ವಹಿಸಿದ್ದರು. ಅಲ್ಲಿಂದ ಹೊರಟ ನಾವು ಸುಂದರವಾದ ಕೆತ್ತನೆಯನ್ನೊಳಗೊಂಡ ದೇವಾಲಯವಾದ ಸೋಮನಾಥಪುರಕ್ಕೆ ತೆರಳಿದೆವು. ಇಲ್ಲಿರುವ ಜನಾರ್ದನ ಮತ್ತು ವೇಣುಗೋಪಾಲನ ಮೂರ್ತಿ ನೋಡಲು ಮನೋಹರ.

ಸುಮಾರು 12.30ರ ವೇಳೆಗೆ ತಲಕಾಡು ತಲುಪಿದೆವು. ಅಲ್ಲಿರುವ ಪಂಚಲಿಂಗ ದರ್ಶನ ಪಡೆದು ಚೋಳರ ಕಾಲದ ವೈದ್ಯನಾಥೇಶ್ವರ ದೇವಾಲಯ, ಚೋಳರನ್ನು ಸೋಲಿಸಿದ ನೆನಪಿಗೆ ಹೊಯ್ಸಳರು ಕಟ್ಟಿಸಿದ ಕೀರ್ತಿನಾರಾಯಣ ದೇವಾಲಯ, ತಲಕಾಡು ಮರುಳಾದ ಕಥೆಯನ್ನು ಕೇಳಿದೆವು. ನಂತರ ಮಧ್ಯಾಹ್ನದ ಭೋಜನಾನಂತರ ಅಧ್ಯಕ್ಷರು ಬಾಂಧವರೆಲ್ಲರಿಗೂ ಕ್ವಿಜ್ ಕಾರ್ಯಕ್ರಮ ಇಟ್ಟಿದ್ದರು. ಅದರಲ್ಲಿ ಗೆದ್ದವರಿಗೆ ಬಹುಮಾನವನ್ನು ನೀಡಿದರು. ನಂತರ ನಮ್ಮ ಸಹಕಾರ್ಯದರ್ಶಿ ಕೃಷ್ಣಉರಾಳ್‌ರವರ ಪುತ್ರಿ ಕು|ವಿಸ್ಮಯಾ ಚಿತ್ರದಲ್ಲಿ ಗಿಡಗಳನ್ನು ಗುರುತಿಸಿ ಅದರ ವೈಜ್ಞಾನಿಕ ಹೆಸರುಗಳನ್ನು ಜ್ಞಾಪಿಸಿ ಹೇಳುವುದರ ಮೂಲಕ ಎಲ್ಲರನ್ನು ಅಚ್ಚರಿಗೊಳಿಸಿದಳು. ಐದು ಪ್ರಸಿದ್ಧ ಲಿಂಗಗಳಲ್ಲಿ ಒಂದಾದ ಸೋಮಗಿರಿ ಬೆಟ್ಟದಲ್ಲಿರುವ ಮುಡುಕುತೊರೆ, ಮಲ್ಲಿಕಾರ್ಜುನ ದೇವಾಲಯಕ್ಕೆ ನೂರು ಮೆಟ್ಟಿಲನ್ನು ಹತ್ತಿ ಹೋದೆವು. ಅನಂತರ ಶ್ರೀರಂಗನಾಥ ದೇವರಿರುವ



ಮಧ್ಯರಂಗ ದೇವಾಲಯಕ್ಕೆ ತೆರಳಿ, ಅಲ್ಲೇ ಸಂಜೆಯ ಲಘು ಉಪಾಹಾರ, ಕಾಫಿ ಮುಗಿಸಿ, ಮೈಸೂರಿನ ಕಡೆಗೆ ವಾಪಸಾದೆವು. ಅಧ್ಯಕ್ಷರು ಧನ್ಯವಾದವನ್ನರ್ಪಿಸಿದರು. ಪ್ರವಾಸವನ್ನು ಅಧ್ಯಕ್ಷರ ಪರಿಶ್ರಮದಿಂದ ಕೂಟಬಾಂಧವರ ಸಹಕಾರದೊಂದಿಗೆ ಅಚ್ಚುಕಟ್ಟಾಗಿ ನಿರ್ವಹಿಸಲಾಗಿತ್ತು.

**ವರದಿ : ನರಸಿಂಹ ಹೊಳ್ಳ**

## ೫. ಸಾಲಿಗ್ರಾಮ ರಥೋತ್ಸವದಂದು ಕೂಟಬಂಧು ಪತ್ರಿಕೆಯ ಸದಸ್ಯತ್ವದ ನೋಂದಾವಣೆಯ ಬೃಹತ್ ಅಂದೋಲನದ ಶುಭ ಚಾಲನೆ - 2013

ದಿನಾಂಕ 16-1-2013ರಂದು ಗುರುಸ್ಥಾನವಾದ ಸಾಲಿಗ್ರಾಮದಲ್ಲಿ ನಡೆದ ಶ್ರೀ ದೇವರ ಬ್ರಹ್ಮರಥೋತ್ಸವದ ಸಮಯದಲ್ಲಿ ಹಲವಾರು ಕೂಟಸ್ಥರು ಕೂಟಬಂಧು ಪತ್ರಿಕೆಯ ಸದಸ್ಯತ್ವವನ್ನು ನೋಂದಾಯಿಸಿಕೊಂಡರು.

**ಈ ಬೃಹತ್ ಕಾರ್ಯಕ್ರಮವನ್ನು ಕೂಟಬಂಧು ಟ್ರಸ್ಟಿನ ಸಕ್ರಿಯ ಸದಸ್ಯ ಬೆಂಗಳೂರಿನ ಶ್ರೀ ಚಂದ್ರಶೇಖರ ಕಾರಂತರು ಆಯೋಜಿಸಿದ್ದರು.**

**ಆತ್ಮೀಯ ಕೂಟ ಬಂಧುಗಳೇ ಕೂಟಬಂಧು ಪತ್ರಿಕೆಯ ಸದಸ್ಯತ್ವವನ್ನು ನೋಂದಾಯಿಸಲು ಮತ್ತು ಜಾಹಿರಾತುಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ.**

**ಚಂದ್ರಶೇಖರ ಕಾರಂತ**
ಕೂಟ ಬಂಧು ಟ್ರಸ್ಟ್ ಕಾರ್ಯಕಾರಿ ಮಂಡಳಿ ಸದಸ್ಯ
ಸಂತೃಪ್ತಿ, 40, ಮೊದಲನೇ ಅಡ್ಡರಸ್ತೆ, ಚೌಡಯ್ಯ ಬ್ಲಾಕ್, ಹೆಚ್.ಎಂ.ಟಿ. ಲೇಔಟ್
ಆರ್.ಟಿ.ನಗರ, ಬೆಂಗಳೂರು - 560 032, ಮೊ : 9448686862

# ಶ್ರೀ ದೇವಳಕ್ಕೆ ವಿವಿಧ ಸೇವೆಗಳಿಗಾಗಿ ಭಕ್ತರು ನೀಡಿದ ದೇಣಿಗೆ ವಿವರ

**ಬೆಳ್ಳಿ ರಥ** (1-2-2013ರಿಂದ 31-3-2013ರವರೆಗೆ ವಿವರ)

| | |
|---|---|
| ಶೇಷಪ್ಪಯ್ಯ ಹಂದೆ ಯು., ಬೆಂಗಳೂರು | 10001.00 |
| ಪ್ರಸನ್ನ ಐತಾಳ, ಬೆಂಗಳೂರು | 1000.00 |
| ಡಾ। ಮಂಜುನಾಥ ರಾವ್, ಉಡುಪಿ | 1005.00 |
| ಹರಿಕೃಷ್ಣ ಉರಾಳ್ | 1000.00 |
| ವಿಶಾಲಾಕ್ಷಿ, ಪಾರಂಪಳ್ಳಿ ಗ್ರಾಮ | 2000.00 |
| ಎಂ. ಗಣೇಶ್ ಭಟ್ಟ್, ಮಂಗಳೂರು | 1000.00 |
| ನಾಗೇಂದ್ರ ಮಯ್ಯ,ಕೇರಳ | 5000.00 |
| ದಿ। ಪಿ. ವಾಸುದೇವ ಹೇರ್ಳೆಯವರ ಸ್ಮರಣಾರ್ಥ ಮನೆಯವರಿಂದ ಪಡುಕೆರೆ ಪಾರಂಪಳ್ಳಿ | 50000.00 |
| ಪ್ರಭಾಕರ ಹೊಳ್ಳ, ಬೆಂಗಳೂರು | 10101.00 |
| ರತ್ನ ನಾವಡ ವಿ ಎಸ್, ಬೆಂಗಳೂರು | 2000.00 |
| ಧೀರಜ್ ಟಿ ಡಿ, ದಿನೇಶ್ ಟಿ ಎನ್‌ರ ಮಗ, ಎಸ್ಟೇಟ್ ಇಂಜಿನಿಯರ್, ಚಿಕ್ಕಮಂಗಳೂರು | 10001.00 |
| ಮಾಲಕರು, ಎಸ್ ಕೆ. ಟ್ರೇಡರ್ಸ್, ಬೆಂಗಳೂರು | 10005.00 |
| ಅಮ್ಮೆಂಬಳ ಪರಮೇಶ್ವರ ನಾವಡ ಎ ಮತ್ತು ಮಕ್ಕಳು | 5000.00 |
| **ಸೊತ್ತುಗಳು :** | |
| ನರಸಿಂಹರಾಜ ಹೊಳ್ಳ – ಬೆಳ್ಳಿಯ ಕಾಲು ದೀಪ –2 | 12,348.00 |
| ಭೋಜನ ನಿಧಿ : | |
| ಚಂದ್ರಶೇಖರ ಮಯ್ಯ, ಉಚ್ಚಿಲ | 1000.00 |
| ಡಾ। ಶಿವಾನಂದ ಮಯ್ಯ ಪಿ, ಬೆಂಗಳೂರು | 10000.00 |
| ಸಾವಿತ್ರಿ ನಾಗರಾಜ ಹೊಳ್ಳ, ಬೆಂಗಳೂರು | 5000.00 |
| ಭಾಸ್ಕರ ಹಂದೆ ಎಚ್, ಬೆಂಗಳೂರು | 5000.00 |
| ಉಪಾಧ್ಯ ಪಿ. ಆರ್, ಬೆಂಗಳೂರು | 1000.00 |
| ವಿಕ್ರಮ್ ಉರಾಳ್, ಬೆಂಗಳೂರು | 1000.00 |
| ನೀಲಕಂಠ | 1000.00 |
| ಆದ್ಯ ಅರುಣ ಉಪಾಧ್ಯ | 1001.00 |
| ಸುಶೀಲ ಹಂದೆ ವೈ, ಬೆಂಗಳೂರು | 5000.00 |
| ವಿಶ್ವೇಶ್ವರ ಕಾರಂತ್, ಬೆಂಗಳೂರು | 5000.00 |
| ರಾಮ್ ಪ್ರಕಾಶ್, ವಿಜಯನಗರ ಬೆಂಗಳೂರು | 1001.00 |
| ನಾರಾಯಣ ಪ್ರಸಾದ್ ಕೆ. ಎಸ್. ಮೈಸೂರು | 1001.00 |
| ಸಾವಿತ್ರಿ ಅಡಿಗ | 1000.00 |
| ವೆಂಕಟೇಶ ಕೊಟೇಶ್ವರ, ಬೆಂಗಳೂರು | 1000.00 |

| | |
|---|---|
| ನಾರಾಯಣ ಉಪಾಧ್ಯ, ಕುಮಾರಸ್ವಾಮಿ ಲೇಔಟ್ | 1000.00 |
| ಸುಬ್ರಾಯ ಹಂದೆ ಪಿ ಎನ್ ತಂಕನಿಡಿಯೂರು ಗ್ರಾಮ | 2500.00 |
| ಮಾಧವ ಭಟ್ | 1000.00 |
| ಅಧ್ಯಕ್ಷರು ಮತ್ತು ಸದಸ್ಯರು, ಕೂಮಜ ಸಾಲಿಗ್ರಾಮ(ರಿ) ಮಹಿಳಾವೇದಿಕೆ | 20000.00 |
| ಸೀತಾರತ್ನ ಭಟ್, ಹೊಟೇಲ್ ನ್ಯೂ ಸವಿತಾ | 1001.00 |
| ವಡ್ಡರ್ಸೆ ವೆಂಕಟರಮಣ ಹೊಳ್ಳ ಹಾಗೂ ವಾಗ್ದೇವಿಯಮ್ಮನವರ ಸ್ಮರಣಾರ್ಥ, ಶಿವಮೊಗ್ಗ | 50000.00 |
| ಬಾಲಕೃಷ್ಣ | 1001.00 |
| ರಾಮಚಂದ್ರ ಐತಾಳ ಪಿ., ಬೆಂಗಳೂರು | 1000.00 |
| ಕೃಷ್ಣಮೂರ್ತಿ ಬಿ ವಿ | 5001.00 |
| ದಿಲೀಪ್ ಕೃಷ್ಣ ಭಟ್, ಉಪ್ಪುಂದ | 1001.00 |
| ಉದಯಶಂಕರ ಎಚ್, ಹೊಸಪೇಟೆ | 1000.00 |
| ಶಿವರಾಮ ಕಾರಂತ ಕೆ., ಭೀಮನಗರ | 1000.00 |
| ಕೃಷ್ಣಮೂರ್ತಿ ಕೆ. ಎಸ್., ವಿದ್ಯಾನಗರ | 1000.00 |
| ಮೋಹನ್ ಭಟ್, ಬಿದ್ಕಲ್ಕಟ್ಟೆ | 2000.00 |
| ಆದಿತ್ಯ ನಕ್ಷತ್ರಿ, ಸುರತ್ಕಲ್ | 1000.00 |
| ಮಂಜುನಾಥ ಎಸ್ ಪಿ, ಬೆಂಗಳೂರು | 1001.00 |
| ರಾಘವೇಂದ್ರ ಕೆ. ವಿ., ಬೆಂಗಳೂರು | 1000.00 |
| ಮಹಾಬಲೇಶ್ವರ | 1000.00 |
| ಬಾಲಗಣಪತಿ ಭಟ್, ಮೈಸೂರು | 2000.00 |
| ಬಿ. ಎಸ್. ಶ್ರೀನಿವಾಸ ಐತಾಳ್, ಬೆಂಗಳೂರು | 1001.00 |
| ಎ. ವಿಷ್ಣುಮೂರ್ತಿ ಉರಾಳ | 1001.00 |

**ವೇದಾಧ್ಯಾಯನ ನಿಧಿ :**

| | |
|---|---|
| ಪ್ರಸನ್ನ ಐತಾಳ, ಬೆಂಗಳೂರು | 1000.00 |
| ಅಶೋಕ್ ಪಾಂಡೇಶ್ವರ ಹೊಳ್ಳ ಮತ್ತು ಸುಧಾ ಪಾಂಡೇಶ್ವರ ಹೊಳ್ಳ, ಬೆಂಗಳೂರು | 1116.00 |
| ಸತೀಶ ಮಯ್ಯ ಮತ್ತು ಗೋಪಿಕಾ ಮಯ್ಯ, ಉಡುಪಿ | 2500.00 |
| ಲಲಿತಾ ಅಂಬಾಗಿಲು, ರಾಯಲ್ ಸರ್ಕಲ್ | 1001.00 |
| ಯಜ್ಞನಾರಾಯಣ ಐತಾಳ ಸ್ಮರಣಾರ್ಥ ಪಿ ಪರಮೇಶ್ವರ ಐತಾಳ ಸಾಲಿಗ್ರಾಮ | 5000.00 |
| ಸುಮಿತ್ರಾ ಎಚ್ ಎಸ್, ಎಚ್. ಜೆ. ಶ್ರೀನಿವಾಸ ಹೊಳ್ಳರ ಮಗಳು, ಬೆಂಗಳೂರು | 50000.00 |

★★★★

# ಬಿಲಿಯನ್ ಫೌಂಡೇಶನ್ ವಾರ್ತೆಗಳು

## ಪ್ರಕಟಣೆ

**ಶ್ರೀ ಗುರುನರಸಿಂಹ ಬಿಲಿಯನ್ ಫೌಂಡೇಶನ್ ಟ್ರಸ್ಟ್(ರಿ.) ಸಾಲಿಗ್ರಾಮ, ಉಡುಪಿ ಜಿಲ್ಲೆ**
ಆಡಳಿತ ಕಛೇರಿ : ನಂ. 83, 2ನೇ ಹಂತ, 2ನೇ ಘಟ್ಟ, ಪಶ್ಚಿಮ ಕಾರ್ಡ್‌ರಸ್ತೆ, ಮಹಾಲಕ್ಷ್ಮೀಪುರಂ,
ಬೆಂಗಳೂರು – 560086, ದೂ. ವಾ. 080–23492916, ಮೊ. 99801 94952
E-mail hpbasri@yaoo.co.in Website-www.kootabandhu.org

ಮುಂದಿನ ದಿವಸಗಳಲ್ಲಿ, ಶ್ರೀ ಗುರುನರಸಿಂಹ ಬಿಲಿಯನ್ ಫೌಂಡೇಶನ್ ಟ್ರಸ್ಟ್, ಕೂಟಬಂಧುಗಳ ಸಹಕಾರ ಮತ್ತು ಸಹಭಾಗಿತ್ವದಿಂದ, ಹಮ್ಮಿಕೊಳ್ಳಬೇಕೆಂದಿರುವ ಜನಪರ ಯೋಜನೆಗಳ ವಿವರ –

**ತಾ. 23-5-13ರಂದು ನಡೆಯಲಿರುವ ಶ್ರೀ ಗುರುನರಸಿಂಹ ಜಯಂತಿ ದಿವಸದಂದು, ಟ್ರಸ್ಟ್ ಪ್ರಾರಂಭಗೊಂಡು 9 ವರ್ಷಗಳಾಗಲಿದೆ.**

ಪ್ರತಿಫಲದ ಹಾಗೂ ಪ್ರಚಾರದ ಅಪೇಕ್ಷೆಯನ್ನು ಬಯಸದೆ, ತುಂಬು ಹೃದಯದಿಂದ ದೇಣಿಗೆ ನೀಡಿರುವ ಹಾಗೂ ಮುಂದೆ ಕೂಡ ನಿರಂತರವಾಗಿ ನೀಡಲಿರುವ ಪ್ರಜ್ಞಾವಂತ ಕೂಟ ಬಂಧುಗಳ ಸಹಕಾರದಿಂದ ಇವತ್ತಿನ ದಿವಸದಲ್ಲಿ, ಸುಮಾರು ರೂಪಾಯಿ 75.00 ಲಕ್ಷವನ್ನು ಕ್ರೋಡೀಕರಿಸಲು ಟ್ರಸ್ಟಿಗೆ ಸಾದ್ಯವಾಗಿದ್ದು ಅಲ್ಲದೆ ಅದರಿಂದ ಬಂದಿರುವ ವರಮಾನದಿಂದ ಸುಮಾರು ರೂಪಾಯಿ 18.00 ಲಕ್ಷವನ್ನು ಸಮಾಜದ ಅಸಹಾಯಕರ ಆರೋಗ್ಯ ಸೇವೆಗೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಸಂಕಷ್ಟಕ್ಕೊಳಗಾದ ಮಹಿಳೆಯವರಿಗೆ, ಸಹಾಯ ಧನವಾಗಿ, ಈ ವರೆಗೆ ನೀಡಲಾಗಿದೆ. ಆದರೆ, ರೂಪಾಯಿ ಒಂದು ಕೋಟಿ ದೇಣಿಗೆಯನ್ನು ಸಂಗ್ರಹಿಸಿ, ವಾರ್ಷಿಕವಾಗಿ ರೂಪಾಯಿ 10.00 ಲಕ್ಷವನ್ನು ಸಮಾಜದ ಅಸಹಾಯಕರಿಗೆ ಸಹಾಯಧನವಾಗಿ ನೀಡುವುದು ಟ್ರಸ್ಟಿನ ಸದ್ಯದ ಗುರಿ ಆಗಿದೆ. ನಿಮಗೆ ತಿಳಿದಿರುವಂತೆ, ರೂಪಾಯಿ ನೂರು ಕೋಟಿ (Billion) ದೇಣಿಗೆ ಸಂಗ್ರಹಿಸಿ, ವರ್ಷಕ್ಕೆ ರೂಪಾಯಿ 10.00 ಕೋಟಿ ಸಹಾಯಧನ ನೀಡುವ ಅಂತ್ಯ ಗುರಿಯನ್ನು ಹೊಂದಿರುವ ಬಿಲಿಯನ್ ಫೌಂಡೇಶನ್ ಟ್ರಸ್ಟ್, ಮುಂದಿನ ದಿವಸಗಳಲ್ಲಿ, ಕೂಟ ಜನಾಂಗದ ಸರ್ವತೋಮುಖವಾದ ಅಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತದೆ. ದೇಶ ವಿದೇಶಗಳಲ್ಲಿರುವ ಸಂಪನ್ಮೂಲ ಕೂಟ ಬಂಧುಗಳು ಮನಸ್ಸು ಮಾಡಿದರೆ, ಟ್ರಸ್ಟಿನ ಈ ಅಂತಿಮ ಗುರಿಯನ್ನು ತಲಪುವುದು ಕಷ್ಟಸಾಧ್ಯವಲ್ಲ ಎಂಬುದು ನಮ್ಮ ಅಭಿಮತ.

ಟ್ರಸ್ಟಿನ ಜನಪರ ಕಾರ್ಯಕ್ರಮಗಳನ್ನು ಮುಂದಿನ ದಿವಸಗಳಲ್ಲಿ ವಿಸ್ತರಿಸುವ ಬಗ್ಗೆ ವಿವರಣೆ.

1. ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು, ಅವರ ವಿದ್ಯಾಭ್ಯಾಸದ ಸಂಪೂರ್ಣ ಖರ್ಚನ್ನು ಭರಿಸುವುದು. ಕೂಟ ಸಮಾಜದ ವಿದ್ಯಾರ್ಥಿಗಳು ಹಣದ ಕೊರತೆಯಿಂದ ವಿದ್ಯಾಭ್ಯಾಸ ನಿಲ್ಲಿಸಬಾರದೆಂಬುದು ಟ್ರಸ್ಟಿನ ಮುಖ್ಯ ಧ್ಯೇಯವಾಗಿದೆ.
2. ಆರ್ಥಿಕ ನಿಶ್ಯಕ್ತರ ಆಸ್ಪತ್ರೆಯ ಮತ್ತು ಔಷಧದ ಖರ್ಚನ್ನು ಸಂಪೂರ್ಣವಾಗಿ ಟ್ರಸ್ಟಿನಿಂದ ನೀಡುವುದು.
3. ಸಂಕಷ್ಟಕ್ಕೊಳಗಾದ ಮಹಿಳೆಯವರಿಗೆ ಧನ ಸಹಾಯ ಹಾಗೂ ಅಸಹಾಯಕ ವಿಧವೆಯರಿಗೆ ಮಾಸಾಶನ ನೀಡುವುದು.
4. ಬಡ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯದ ವೆಚ್ಚವನ್ನು ಭರಿಸುವುದು.
5. ವಿದ್ಯಾರ್ಥಿ ನಿಲಯ, ವೃದ್ಧಾಶ್ರಮ ಹಾಗೂ ಶಾಂತಿಧಾಮಗಳನ್ನು ಕ್ರಮೇಣ ನಿರ್ಮಿಸುವುದು.
6. ಹಂತ ಹಂತವಾಗಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳಸುವುದು.
7. ಕೂಟ ಸಮಾಜದವರ ಪ್ರತಿಭೆಯನ್ನು ಗುರುತಿಸಿ ಅವರನ್ನು ಪುರಸ್ಕರಿಸಿ ಪ್ರೋತ್ಸಾಹಿಸುವುದು.
8. ವೇದಧ್ಯಾಯನಕ್ಕೆ ಹೆಚ್ಚಿನ ಆರ್ಥಿಕ ನೆರವು ನೀಡುವುದು.
9. ದೇವಸ್ಥಾನಗಳ ಜೀರ್ಣೋದ್ಧಾರ ಕೆಲಸಗಳಿಗೆ ಸಹಾಯ ಧನ ನೀಡುವುದು.

ಜನ ಸೇವೆಯೇ ಜನಾರ್ದನ ಸೇವೆ ಎಂದು ಪರಿಗಣಿಸಿ ಆರೋಗ್ಯ-ಆನಂದಕರವಾದ ಕೂಟ ಸಮಾಜವನ್ನು ಕಟ್ಟಲು ಎಲ್ಲಾ ಕೂಟ ಬಂಧುಗಳ ಸಹಕಾರ ಮತ್ತು ಸಹಭಾಗತ್ವವನ್ನು ಬಿಲಿಯನ್ ಫೌಂಡೇಶನ್ ಟ್ರಸ್ಟಿನ ಆಡಳಿತ ಮಂಡಳಿಯು ವಿನಯಪೂರ್ವಕವಾಗಿ ಅಪೇಕ್ಷಿಸುತ್ತದೆ. ಶ್ರೀ ಗು.ನ.ಬಿ.ಫೌ. ಟ್ರಸ್ಟನ್ನು ಕೂಟ ಬ್ರಾಹ್ಮಣರ ಒಂದು ಬಲಿಷ್ಟವಾದ ಆರ್ಥಿಕ ಸಹಾಯ ನೀಡುವ ವ್ಯವಸ್ಥೆಯನ್ನಾಗಿ ಮಾಡುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಆಗಿದೆ. ತಾ. 23-5-13ರ ಶ್ರೀ ಗುರುನರಸಿಂಹ ಜಯಂತಿ ದಿವಸದಂದು ನಿಮ್ಮಗಳ ಸ್ಪಂದನೆಯನ್ನು ಅಪೇಕ್ಷಿಸುತ್ತೇವೆ.

ಶ್ರೀ ಗುರುನರಸಿಂಹ ದೇವರು ಎಲ್ಲರಿಗೂ ಸನ್ಮಂಗಳವನ್ನುಂಟುಮಾಡಲಿ ಎಂದು ಹಾರೈಸುತ್ತೇವೆ.

ತಮ್ಮ ವಿಶ್ವಾಸಿ,
**ಹೆಚ್. ಪರಮೇಶ್ವರ ಶಾಸ್ತ್ರಿ**
(ಗೌ. ಅಧ್ಯಕ್ಷರು)

★★★★

ಕ್ರ ಸಂಖ್ಯೆ 13-14/015 ತಾ 10-05-2013

**ಶ್ರೀ ಗುರು. ನರಸಿಂಹ ಬಿಲಿಯನ್ ಫೌಂಡೇಶನ್ ಟ್ರಸ್ಟ್(ರಿ.) ಸಾಲಿಗ್ರಾಮ, ಉಡುಪಿ ಜಿಲ್ಲೆ, ಇದರಲ್ಲಿ ದೇಣಿಗೆ ನೀಡಿ, ಸದಸ್ಯತ್ವವನ್ನು ಪಡೆದಿರುವ/ ಸದಸ್ಯತ್ವ ನವೀಕರಿಸಿ ಕೊಂಡಿರುವ (01-12-12 ರಿಂದ 25-03-13ರ ವರೆಗೆ) ಸಹೃದಯಿ ಕೂಟ ಬಂಧುಗಳ ಮುಂದುವರಿದ ವಿವರಣೆ.( ದೇಣಿಗೆ ರೂಪಾಯಿಯಲ್ಲಿ)**

**ವಿದೇಶದಿಂದ ದೇಣಿಗೆ (USA)**

| | |
|---|---|
| ದಿ|| ಐರೋಡಿ ಮಹಾಬಲ ಹೆಬ್ಬಾರ್ ಮತ್ತು ದಿ|| ಶಾರದಾ ಹೆಬ್ಬಾರರವರ ಸ್ಮರಣಾರ್ಥ ಮಗಳು ಶ್ರೀಮತಿ ಸುಧಾ ಶೇಖರ್ ರವರಿಂದ | **50,699 =00** |
| ಶ್ರೀ ಯು. ಎನ್. ಪರಮೇಶ್ವರ ರಾವ್ ರವರ ಸವಿ ನೆನಪಿಗಾಗಿ ಮಗ ಡಾ|| ಶಿವ್ ನಾವಡರಿಂದ | **10,000=00** |

**ಬೆಂಗಳೂರು ಅಂಗ ಸಂಸ್ಥೆ**

| | |
|---|---|
| ದಿವಂಗತ ಕೆ.ಪದ್ಮನಾಭ ಉರಾಳರ ಸ್ಮರಣಾರ್ಥ ಮಗ ಶ್ರೀ ಕೆ. ಮಂಜುನಾಥ ಉರಾಳರಿಂದ | **50,001=00** |
| ಶ್ರೀ ಮಣೂರು ವಾಸುದೇವ ಮಯ್ಯ | **50,000=00** |
| ದಿ|| ಹಂದಟ್ಟು ಸೀತಾರಾಮ ಬಾಸ್ರಿಯವರ ಸ್ಮರಣಾರ್ಥ ಮಗಳು ಶ್ರೀಮತಿ ಸರಸ್ವತಿ ಜಿ ಮಯ್ಯ ಮತ್ತು ಶ್ರೀಮತಿ ಶಕುಂತಳ ಆರ್ ಹೊಳ್ಳರವರಿಂದ | **50,000=00** |
| ಶ್ರೀ ಹರಿಕೃಷ್ಣ ಎಸ್ ಹೊಳ್ಳ (ಈ ಹಿಂದೆ ನೀಡಿದ ದೇಣಿಗೆ ರೂ1,00,000=00) | **30,000=00** |
| ಶ್ರೀ ಎಂ. ಪರಮೇಶ್ವರ ಕಾರಂತ | **25,200=00** |
| ಶ್ರೀ ಎಂ. ಶ್ರೀಧರ ಮಯ್ಯ ( ಈ ಹಿಂದೆ ನೀಡಿದ ದೇಣಿಗೆ ರೂ **10,000=00)** | **10,000=00** |
| ಶ್ರೀ ಕೆ. ನಾಗರಾಜ ಐತಾಳ, ಕಲ್ಮಾಡಿ. | **10,000=00** |
| ಶ್ರೀ ಎಸ್. ಜನಾರ್ಧನ ಬಾಸ್ರಿ ( ಈ ಹಿಂದೆ ನೀಡಿದ ದೇಣಿಗೆ ರೂ **20,000=00)** | **10,000=00** |
| ಶ್ರೀಮತಿ ಹೆಚ್. ಪಿ. ಸುಮತಿ ಬಾಸ್ರಿ (ಈ ಹಿಂದೆ ನೀಡಿದ ದೇಣಿಗೆ ರೂ **8,000=00**) | **10,000=00** |
| ಶ್ರೀ ಪಿ. ದಿನೇಶ್ ಕಾರಂತ (ಈ ಹಿಂದೆ ನೀಡಿದ ದೇಣಿಗೆ ರೂ **20,000=00**) | **10,000=00** |
| ಶ್ರೀ ಪಿ. ನರಸಿಂಹ ಮೂರ್ತಿ ಮಧ್ಯಸ್ಥ ( ಈ ಹಿಂದೆ ನೀಡಿದ ದೇಣಿಗೆ ರೂ **10,000=00)** | **10,000=00** |
| ಶ್ರೀಮತಿ ಹಿರಾ ರವರ ಸ್ಮರಣಾರ್ಥ ಪತಿ ಶ್ರೀ ಎಸ್ ಶ್ಯಾಮ ಸುಂದರ್ ರವರಿಂದ | **10,000=00** |
| ಶ್ರೀ ಎ. ಜಿ.ಹೊಳ್ಳ (ಈ ಹಿಂದೆ ನೀಡಿದ ದೇಣಿಗೆ ರೂ **50,000=00**) | **10,000=00** |
| ಶ್ರೀ ಪಿ. ಬಾಲಕೃ ಷ್ಣ ರಾವ್ (ಈ ಹಿಂದೆ ನೀಡಿದ ದೇಣಿಗೆ ರೂ **10,241=00** | **6,390=00** |
| ಡಾ|| ಪಿ. ವಾಸುದೇವ ಹೇರ್ಳೆ (ಈ ಹಿಂದೆ ನೀಡಿದ ದೇಣಿಗೆ ರೂ **23,331=00)** | **5,555-00** |
| ಶ್ರೀ ಕೆ. ವಿ. ಲಕ್ಷ್ಮೀನಾರಾಯಣ ಕಾರಂತ | **5,000=00** |
| (ಈ ಹಿಂದೆ ನೀಡಿದ ದೇಣಿಗೆ ರೂ **25,000=00**) | |
| ಶ್ರೀ ಎಸ್. ಪಿ. ಮಹಾಬಲೇಶ್ವರ ಉರಾಳ (ಈ ಹಿಂದೆ ನೀಡಿದ ದೇಣಿಗೆ ರೂ**5,000=00**) | **5,000=00** |
| ಶ್ರೀ ಕೆ. ಆರ್. ವಾಸುದೇವ ಕಾರಂತ ( ಈ. ಹಿಂದೆ ನೀಡಿದ ದೇಣಿಗೆ ರೂ **5,000=**00) | **5,000=00** |
| ಶ್ರೀ ಕೆ. ವಿ. ಗಿರೀಶ ಕಾರಂತ ( ಈ ಹಿಂದೆ ನೀಡಿದ ದೇಣಿಗೆ ರೂ **5,000=00)** | **5,000=00** |
| ಶ್ರೀ ಹರಿಶ್ಚಂದ್ರ ಹಂದೆ (ಈ ಹಿಂದೆ ನೀಡಿದ ದೇಣಿಗೆ ರೂ **10,000=00**) | **5,000=00** |
| ಶ್ರೀ ಪಿ. ಆರ್. ಎಸ್. ಹೊಳ್ಳ | **5,000=00** |
| ಶ್ರೀ ಸಿ. ಶಿವರಾಮ ಮಧ್ಯಸ್ಥ | **5,001=00** |
| ಶ್ರೀ ಎಂ. ರಾಘವೇಂದ್ರ ಮಯ್ಯ (ಈ ಹಿಂದೆ ನೀಡಿದ ದೇಣಿಗೆ ರೂ **5,000=00)** | **5,000=00** |
| ಶ್ರೀ ಲಕ್ಷ್ಮೀನಾರಾಯಣ ಕಾರಂತ | **5,000=00** |
| ಶ್ರೀ ಕೆ. ಲಕ್ಷ್ಮೀನಾರಯಣ ಉಪಾಧ್ಯ | **2,000=00** |
| ಶ್ರೀ ಜಿ. ಎಸ್. ಹರಿಕೃಷ್ಣಯ್ಯ (ಈ ಹಿಂದೆ ನೀಡಿದ ದೇಣಿಗೆ ರೂ **33,401=00)** | **1,800=00** |
| ಶ್ರೀಮತಿ ಮಿನಾಕ್ಷಿ ಜಿ ಉರಾಳ | **1,100=00** |
| ಶ್ರೀ ಎಸ್. ಪಿ. ಕೃಷ್ಣ ಮೂರ್ತಿ ಉರಾಳ | **1,100=00** |
| ಶ್ರೀ ಕೆ. ಎಸ್. ಚಂದ್ರಶೇಖರ ನಕ್ಷತ್ರಿ | **1,001=00** |
| ಶ್ರೀ ಸಿ. ಶಶಾಂಕ ನಕ್ಷತ್ರಿ | **1,001=00** |
| ಶ್ರೀ ಬಿ. ಎಂ.ರಾಮಪ್ರಕಾಶ | **1,001=00** |
| ಶ್ರೀ ಹಂದಟ್ಟು ರಾಜಶೇಖರ ಐತಾಳ | **1,000=00** |
| **ಶ್ರೀ** ವೈ. ಅರ್, ನಾರಾಯಣ ಐತಾಳ | **1,000=00** |
| ಶ್ರೀ ಎ. ರಾಘವೇಂದ್ರ ಹೆಬ್ಬಾರ್ | **1,000=00** |
| ಶ್ರೀ ಎ. ಮಂಜುನಾಥ ಹೇರ್ಳೆ | **1,000=00** |
| ಶ್ರೀ ಪಿ. ಸತ್ಯಮೂರ್ತಿ ಮಧ್ಯಸ್ಥ | **1,000=00** |
| ಶ್ರೀ ಕೆ. ಶ್ಯಾಮಸುಂದರ ಐತಾಳ | **1,000=00** |
| ಶ್ರೀ ಬಿ. ಗಣೇಶ್ ರಾವ್ | **500=00** |
| ಶ್ರೀ ಪಿ. ಎನ್. ಚಕ್ರಪಾಣಿ ಹೇರ್ಳೆ | **500=00** |
| ಶ್ರೀ ಜಿ.ಚೆನ್ನಕೇಶವ ಉಡುಪ | **500=00** |
| ಶ್ರೀ ಪಿ. ಸುರೇಶ್ ಉಪಾಧ್ಯ | **500=00** |
| ಶ್ರೀ ಪಿ. ಹೆಚ್. ಶ್ರೀಧರ ಹೇರ್ಳೆ | **500=00** |
| ಶ್ರೀ ಜಿ. ಕೆ. ನಾರಾಯಣ ಐತಾಳ | **500=00** |
| ಶ್ರೀ ಕೇಶವ ಹೇರ್ಳೆ ಮತ್ತು ಮಕ್ಕಳು | **500=00** |
| ಶ್ರೀ ಎಸ್. ಎಸ್. ನಾವಡ | **500=00** |

| | |
|---|---|
| ಶ್ರೀ ಸುಬ್ರಾಯ ಮಯ್ಯ ಹರ್ತಟ್ಟು | **500=00** |
| ಶ್ರೀ ಶಶಿಧರ ಕಾರಂತ | **500=00** |
| ಶ್ರೀ ಜಿ. ರಾಮಚಂದ್ರ ಐತಾಳ | **500=00** |
| ಶ್ರೀ ಬಂಟ್ವಾಳ ಹರಿಕೃಷ್ಣ ಸೋಮಯಾಜಿ | **500=00** |
| ಶ್ರೀ ಜಗದೀಶ ಉರಾಳ | **500=00** |
| ಶ್ರೀ ಕೆ. ಎಸ್. ರವೀಂದ್ರ ಭಟ್ | **500=00** |
| ಶ್ರೀ ವಿ. ನಾರಾಯಣ ಹೊಳ್ಳ | **500=00** |
| ಶ್ರೀ ಜಿ.ಎನ್. ಕಾರಂತ<br>( ಈ ಹಿಂದೆ ನೀಡಿದ ದೇಣಿಗೆ ರೂ **5,000=00)** | **500=00** |
| ಶ್ರೀ ಕೆ. ಗಣಪಯ್ಯ ಕಾರಂತ | **365=00** |
| ಶ್ರೀಮತಿ ಜಿ. ಇಂದಿರಾ ಕಾರಂತ | **365=00** |
| ಶ್ರೀ ಕೆ. ರವಿ ಜಿ ಕಾರಂತ | **365=00** |
| ಡಾ|| ಹೆಚ್. ಎಸ್ ಅಶೋಕ | **300=00** |
| ಶ್ರೀ ಎಂ. ವಿ. ಭಾಸ್ಕರ ರಾವ್ | **251=00** |
| ಶ್ರೀ ಕೆ. ಓಂಪ್ರಕಾಶ ಕಾರಂತ | **250=00** |
| ಶ್ರೀ ಕೆ. ನಾಗರಾಜ ತುಂಗ | **250=00** |
| ಶ್ರೀ ಎಂ. ಸುಬ್ರಹ್ಮಣ್ಯ ಹೊಳ್ಳ | **250=00** |
| ಶ್ರೀ ಎಂ. ರಾಮಕೃಷ್ಣ ಹೇರ್ಳೆ | **202=00** |
| ಶ್ರೀ ಗಣೇಶ್ ಐತಾಳ | **200=00** |
| ಶ್ರೀ ಕೆ. ಎಸ್. ರಮೇಶ್ ಶಾಸ್ರಿ | **200=00** |
| ಶ್ರೀ ಕೆ. ಫದ್ಮನಾಭ ಭ ಟ್ | **200=00** |
| ಶ್ರೀ ಕೆ. ಎಸ್. ಕಾರಂತ | **200=00** |
| ಶ್ರೀಮತಿ ಕೆ. ಎಸ್. ಚಂದ್ರಾವತಿ | **200-00** |
| ಶ್ರೀ ಸಿ. ಎಸ್. ಹರೀಶ್ ಮದ್ಯಸ್ಥ | **200=00** |

**ಉಡುಪಿ ಅಂಗ ಸಂಸ್ಥೆ**

| | |
|---|---|
| ಶ್ರೀಮತಿ ವೀಣಾ ಎಸ್. ಐತಾಳ ಮತ್ತು ಶ್ರೀ ಶ್ರೀಧರ್ ಐತಾಳರವರಿಂದ(ಮಕ್ಕಳು ಚಿ| ಸತ್ಯಸ್ವರೂಪ ಮತ್ತು ಚಿ| ನಿತ್ಯಸ್ವರೂಪ ರವರ ಹುಟ್ಟು ಹಬ್ಬದ ನೆನಪಿಗಾಗಿ) | **51,,000=00** |
| **ಶ್ರೀ** ಕೆ. ಶಿವರಾಮ ಕಾರಂತ | **1,000=00** |
| ಶ್ರೀ ರಘುರಾಮ ರಾವ್ | **500=00** |
| ಶ್ರೀ ಸುಧಾ ಬಿ. ಹೊಳ್ಳ | **300=00** |
| ಶ್ರೀ ಗೋಪಾಲಕೃಷ್ಣ ಹೊಳ್ಳ | **250=00** |
| ಶ್ರೀ ಯು.ಶ್ರೀಕಾಂತ ಮಯ್ಯ | **200=00** |
| ಶ್ರೀ ಬಿ. ಸುಬ್ರಹ್ಮಣ್ಯ ಭಟ್ | **200=00** |

**ಸಾಲಿಗ್ರಾಮ ಅಂಗಸಂಸ್ಥೆ**

| | |
|---|---|
| ಶ್ರೀ ಕೆ. ರಮಾನಂದ ಶಾಸ್ರಿ | **1,000=00** |

| | |
|---|---|
| ಶ್ರೀ ಹೆಚ್. ಶ್ರೀನಿಧಿ ಹಂದೆ | **1,000=00** |
| ಶ್ರೀ ಜಿ. ಅನಂತ ಕೃಷ್ಣ ಮಯ್ಯ | **505=00** |
| ಶ್ರೀ ಪಿ. ವಾಸುದೇವ ಕಾರಂತ | **500=00** |
| ಶ್ರೀ ಕೆ. ರಮೇಶ್ ಹಂದೆ | **300=00** |
| ಶ್ರೀ ಪಾರಂಪಳ್ಳಿ ನರಸಿಂಹ ಐತಾಳ | **260=00** |
| ಶ್ರೀ ಎನ್. ಶ್ರೀನಿವಾಸ ಹೊಳ್ಳ | **200=00** |
| ಶ್ರೀಮತಿ ಸತ್ಯಭಾಮ | **200=00** |
| ಶ್ರೀ ಹೆಚ್. ಮಹಾಬಲ ಹಂದೆ | **200=00** |

**ಚಿಕ್ಕಮಗಳೂರು ಅಂಗ ಸಂಸ್ಥೆ**

| | |
|---|---|
| ಶ್ರೀ ಎಂ. ಕೆ. ಸತ್ಯನಾರಾಯಣ ಕಾರಂತ | **1,000=00** |
| ಶ್ರೀ ಎಂ. ಉಮಾಮಹೇಶ್ವರ ಹೊಳ್ಳ | **500=00** |

**ಬೆಳ್ತಂಗಡಿ ಅಂಗಸಂಸ್ಥೆ**

| | |
|---|---|
| ಶ್ರೀ ಕೆ. ಮಾಧವ ಹೊಳ್ಳ | **5,001=00** |
| ಶ್ರೀ ಎಂ. ಮೋಹನ ಕಾರಂತ | **1,500=00** |
| ಶ್ರೀ ವಸಂತ ರಾವ್ | **1,000=00** |
| ಶ್ರೀ ವಿಷ್ಣುಮೂರ್ತಿ ಕಾರಂತ | **660=00** |
| ಶ್ರೀ ಶ್ರೀನಿವಾಸ ಕಾರಂತ | **500=00** |
| ಶ್ರೀ ಎಸ್. ಸುಬ್ರಹ್ಮಣ್ಯ ಐತಾಳ | **500=00** |
| ಶ್ರೀ ಬಿ. ವೆಂಕಟರಮಣ ರಾವ್ | **500=00** |
| ಶ್ರೀಮತಿ ಸುಜಾತ ವಿ ರಾವ್ | **500=00** |
| ಶ್ರೀ ಸೂರಜ್ ಅಡೂರು | **500=00** |
| ಶ್ರೀ ದಿವಾಕರ ಕಾರಂತ | **500=00** |
| ಶ್ರೀ ಕೆ. ಸತೀಶ್ ಹೊಳ್ಳ | **500=00** |
| ಶ್ರೀ ವಿಷ್ಣು ಮೂರ್ತಿ ಎನ್. ಹೊಳ್ಳ | **500=00** |
| ಶ್ರೀ ನಾರಾಯಣ ಹೊಳ್ಳ | **500=00** |
| ಶ್ರೀ ಎನ್. ಶ್ರೀನಿವಾಸ ಹೊಳ್ಳ | **500=00** |
| ಶ್ರೀ ಕೆ. ಕೃಷ್ಣ ಕಾರಂತ | **500=00** |
| ಶ್ರೀ ವಾಸುದೇವ ಕಾರಂತ | **400=00** |
| ಶ್ರೀ ಸುದರ್ಶನ ರಾವ್ ಎನ್. | **370=00** |
| ಕೆ. ಜಯರಾಮ ಕಾರಂತ | **350=00** |
| ಶ್ರೀಮತಿ ಶಕುಂತಲ ಕಾರಂತ | **350=00** |
| ಶ್ರೀ ಎಂ ರಮೇಶ್ ಕಾರಂತ | **350=00** |
| ಶ್ರೀ ಬಿ. ಮೋಹನ ರಾವ್ | **350=00** |
| ಶ್ರೀ ಪಿ ಹೆಚ್ ಬಾಲಚಂದ್ರ | **350=00** |
| ಶ್ರೀ ಎಸ್. ನಾರಾಯಣ ಮಯ್ಯ | **350=00** |
| ಶ್ರೀ ಕೆ. ರಾಮಚಂದ್ರ ಮಯ್ಯ | **350=00** |
| ಶ್ರೀ ಕೆ. ರಾಧಾಕೃಷ್ಣ ಹೊಳ್ಳ | **350=00** |
| ಶ್ರೀ ಎಂ. ಕೃಷ್ಣಾನಂದ ಭಟ್ | **350=00** |

| | |
|---|---|
| ಶ್ರೀ ಬಿ. ರಮೇಶ್ ಮಯ್ಯ | **250=00** |

**ಕುಂದಾಪುರ ಅಂಗ ಸಂಸ್ಥೆ**

| | |
|---|---|
| ಶ್ರೀಮತಿ ರಶ್ಮೀ ಎಸ್. ಕಾರಂತ್ ( ಈ ಹಿಂದೆ ನೀಡಿದ ದೇಣಿಗೆ ರೂ **16,665=00)** | **5,555=00** |
| ಡಾ|| ಕೆ. ಎಸ್. ಕಾರಂತ್ ( ಈ ವರೆಗೆ ನೀಡಿದ ಒಟ್ಟುದೇಣಿಗೆ ರೂ **50,000=)** | **5554=00** |
| ಶ್ರೀ ಸದಾಶಿವಯ್ಯ ಹೆಚ್. | **2,000=00** |
| ಶ್ರೀಮತಿ ರೇವತಿ ಹೆಚ್ | **2,000=00** |
| ಶ್ರೀ ರವಿಶಂಕರ ಹೆಚ್ | **750=00** |
| ಶ್ರೀಮತಿ ಸವಿತಾ ಹೆಚ್ ರವಿಶಂಕರ | **750=00** |
| ಶ್ರೀ ಎನ್. ಕೇಶವ ಹೊಳ್ಳ | **500=00** |
| ಶ್ರೀ ಹೊಳೆಬದಿ ನಾರಾಯಣ ಕಾರಂತ | **500=00** |
| ಶ್ರೀ ಕೆ. ಚಂದ್ರಶೇಖರ ನಾವಡ | **500=00** |
| ಶ್ರೀ ಕಾರ್ತಿಕ ನಾವಡ ಕೆ. | **500=00** |
| ಡಾ|| ವೆಂಕಟರಾಜ್ | **500=00** |
| ಶ್ರೀಮತಿ ರಾಜೇಶ್ವರಿ | **500=00** |
| ಶ್ರೀಮತಿ ಮಾಲಿನಿ ಹೆಚ್ ಸೋಮನಾಥಯ್ಯ | **500=00** |
| ಶ್ರೀ ಜಿ. ಕೆ. ಭಾಸ್ಕರ ಮಯ್ಯ | **400=00** |
| ಶ್ರೀ ವಿ. ನಾರಾಯಣ ಹೊಳ್ಳ | **351=00** |
| ಡಾ|| ಸಿ. ಉದಯ ರಾವ್ | **300=00** |
| ಶ್ರೀ ವೈ. ಎನ್. ವೆಂಕಟೇಶಮೂರ್ತಿ ಭಟ್ಟ | **200=00** |

**ಕಮಲ ಶಿಲೆ ಅಂಗ ಸಂಸ್ಥೆ**

| | |
|---|---|
| ಶ್ರೀ ರಾಮಸ್ವಾಮಿ ಅಡಿಗ | **500=00** |
| ಶ್ರೀಮತಿ ಜಲಜಾಕ್ಷಿ ಜಿ ನಾವಡ | **250=00** |
| ಶ್ರೀ ವಿ. ವೆಂಕಟ್ರಮಣ ಮಯ್ಯ | **200=00** |
| ಶ್ರೀ ನಾಗೇಶ ಮಯ್ಯ | **200=00** |
| **ಶ್ರೀ** ಕೆ. ನಾಗೇಂದ್ರ ಅಡಿಗ | **200=00** |

**ಶೃಂಗೇರಿ ಅಂಗ ಸಂಸ್ಥೆ**

| | |
|---|---|
| ಶ್ರೀ ಜಿ. ಆರ್. ಚಂದ್ರ ಶೇಖರ ಐತಾಳ | **500=00** |
| ಶ್ರೀ ಹೆಚ್. ಎಂ ಗಣೇಶ ಶರ್ಮ | **350=00** |
| ಶ್ರೀ ಹೆಚ್ ಎಸ್. ಪ್ರಕಾಶ್ | **200=00** |

**ಮಂಗಳೂರು ಅಂಗ ಸಂಸ್ಥೆ**

| | |
|---|---|
| ಶ್ರೀ ಬಿ. ಎಸ್. ಎನ್. ಸೋಮಯಾಜಿ | **5,000=00** |
| ಶ್ರೀ ಪಿ. ಶೇಷಗಿರಿ ರಾವ್ | **1,000=00** |
| ಶ್ರೀಮತಿ ಲಕ್ಷ್ಮೀ ಎಸ್. ಎನ್ ರಾವ್ | **660=00** |
| ಶ್ರೀ ಎ. ಪರಮೇಶ್ವರ ನಾವಡ | **550=00** |
| ಶ್ರೀ ಡಿ. ಜಯರಾಮ | **550=00** |
| ಶ್ರೀ ಎಸ್. ಕೇಶವ ಹೊಳ್ಳ | **250=00** |

| | |
|---|---|
| ಶ್ರೀ ಎಂ. ವಿ. ಚಂದ್ರಶೇಖರ ಕಾರಂತ | **200=00** |
| ಶ್ರೀ ಕೆ. ಸೂರ್ಯನಾರಾಯಣ ರಾವ್ | **200=00** |
| ಶ್ರೀಮತಿ ಶೈಲಜಾ ಗೋಪಾಲಕೃಷ್ಣ | **185=00** |

**ಬೆಂಗಳೂರು ಉತ್ತರ ಹಳ್ಳಿ ಅಂಗಸಂಸ್ಥೆ**

| | |
|---|---|
| ಶ್ರೀಮತಿ ಸರೋಜ ಶಿವರಾಮು ಹೊಳ್ಳ, ಶ್ರೀ ಕೆ. ಕಿರಣ ಹೊಳ್ಳ ಮತ್ತು ಶ್ರೀಮತಿ ಸ್ವಾತಿ. ಕೆ. ಹೊಳ್ಳ | **1,00,000=00** |
| ಶ್ರೀ ಪಿ. ನಾರಾಯಣ ಕಾರಂತ (ಈ ಹಿಂದೆ ನೀಡಿದ ದೇಣಿಗೆ ರೂ**20,000=00**) | **10,000=00** |
| ಶ್ರೀ ರವೀಂದ್ರ ಕಾರಂತ (ಈ ಹಿಂದೆ ನೀಡಿದ ದೇಣಿಗೆ ರೂ **5,000=00)** | **2,500=00** |
| ಶ್ರೀ ನಾಗರಾಜ ಹೊಳ್ಳ ಕೆ. ಎಸ್. ( ಈ ಹಿಂದೆ ನೀಡಿದ ದೇಣಿಗೆ ರೂ **8,000=00)** | **2,000=00** |
| ಶ್ರೀ ಕೆ. ಎಸ್. ನರಸಿಂಹಮೂರ್ತಿ ಕಾರಂತ | **1,001=00** |
| ಶ್ರೀ ಬಿ. ಸದಾಶಿವ ಐತಾಳ | **500=00** |
| ಶ್ರೀ ಟಿ. ವೆಂಕಟರಮಣ ಮಯ್ಯ | **500=00** |
| ಶ್ರೀ ಪಿ. ಪ್ರಭಾಕರ ರಾವ್ | **500=00** |
| ಡಾ|| ರಾಮಚಂದ್ರ ರಾವ್ | **500=00** |
| ಶ್ರೀ ಶ್ರೀನಿವಾಸ ನಾವಡ | **500=00** |
| ಶ್ರೀ ಪಿ. ಜಗದೀಶ್ ಹೆಬ್ಬಾರ | **500=00** |
| ಶ್ರೀ ಹೆಚ್.ಎನ್. ರಾಮಕೃಷ್ಣ ಯ್ಯ ರೂ **200=00** | |
| ಶ್ರೀ ವಿ. ಕೃಷ್ಣಮೂರ್ತಿ ನಾವಡ | **200=00** |
| ಶ್ರೀ ಚಂದ್ರಶೇಖರ ನಾವಡ | **200=00** |

**ಶಿವಮೊಗ್ಗ ಅಂಗ ಸಂಸ್ಥೆ**

| | |
|---|---|
| ಶ್ರೀ ಎಂ ಮಹಾಬಲೇಶ್ವರ ನಾವಡ (ಈ ಹಿಂದೆ ನೀಡಿದ ದೇಣಿಗೆ ರೂ **60,000=00)** | **5,000=00** |
| ಶ್ರೀ ಕೆ. ಸದಾಶಿವ ಕಾರಂತ | **1,100=00** |
| ಶ್ರೀಮತಿ ಅರುಂಧತಿ | **501=00** |
| ಕುಮಾರಿ ಕಾವ್ಯ ಅಲ್ಸೆ | **501=00** |
| ಶ್ರೀ ಕೆ. ಶ್ರಿನಿವಾಸ ಕಾರಂತ | **201=00** |

**ಪುತ್ತೂರು ಅಂಗ ಸಂಸ್ಥೆ**

| | |
|---|---|
| **ಶ್ರೀ ಅವಿನಾಶ್ ರಾವ್** | **5,500=00** |

**ಕಾಟಿಪಳ್ಳ ಕೃಷ್ಣಾಪುರ ಅಂಗ ಸಂಸ್ಥೆ**

| | |
|---|---|
| **ಶ್ರೀ** ಪಿ. ನರಸಿಂಹ ಐತಾಳ | **600=00** |
| ಶ್ರೀ ಪಿ.ಎನ್. ಸುರೇಶ್ ಐತಾಳ್ | **500=00** |
| ಶ್ರೀ ಪಿ. ಸದಾಶಿವ ಹೆಬ್ಬಾರ | **400=00** |
| ಶ್ರೀ ಪಿ. ರಾಜಾರಾಮ ಐತಾಳ | **380=00** |
| ಶ್ರೀ ವೆಂಕಪ್ಪಯ್ಯ | **380=00** |
| ಶ್ರೀ ಪಿ. ಪದ್ಮನಾಭ ಐತಾಳ | **365=00** |

| | |
|---|---|
| ಶ್ರೀಮತಿ ಕೆ. ಸೀತಾಲಕ್ಷ್ಮೀ ಹೊಳ್ಳ | **220=00** |
| ಶ್ರೀ ಬಿ. ಶಾಂತಾರಾಮ ರಾವ್ | **200=00** |

**ಚೋಟಾನಿಕ್ಕರ ಎರ್ನಾಕುಲಂ ಕೇರಳ ಪ್ರಾಂತ್ಯ**

| | |
|---|---|
| ಶ್ರೀ ಎನ್. ಆರ್. ವಾಸುದೇವನ್ ಎಂಬ್ರೆನ್ | **5,000=00** |
| ಶ್ರೀ ಕೆ. ಕೆ. ಕೃಷ್ಣ ಎಂಬ್ರಾಂತಿರಿ | **1,000=00** |
| ಶ್ರೀ ಆರ್. ವೆಂಕಟರಮಣ ಹೊಳ್ಳ | **1,000=00** |

**ಮೈಸೂರು ಅಂಗ ಸಂಸ್ಥ**

| | |
|---|---|
| **ಶ್ರೀ ಹಂದೆ ವಿದ್ಯಾ ಭೂಷಣ**<br>**( ಈ ಹಿಂದೆ ನೀಡಿರುವ ದೇಣಿಗೆ ರೂ 30,000=00)** | **10,000=00** |

**1) ದೇಣಿಗೆ ನೀಡುತ್ತಿರುವ ಸಹೃದಯದ ಕೂಟ ಬಂಧುಗಳಿಗೂ,ಹಾಗೂ ದೇಣಿಗೆ ಸಂಗ್ರಹಿಸಲು ಸಹಕರಿಸುತ್ತಿರುವ ಎಲ್ಲಾ ಅಂಗಸಂಸ್ಥೆಯ ಪದಾಧಿಕಾರಿಗಳಿಗೂ ನಮ್ಮ ಕೃತಜ್ಞ ತಾಪೂರ್ವಕವಾದ ಅಭಿನಂದನೆಗಳು.**

**2) ತಾ॥ 25-03-13ರವರೆಗೆ ಸಂಗ್ರಹವಾಗಿರುವ ಒಟ್ಟು ದೇಣಿಗೆ ಮೊತ್ತ ರೂಪಾಯಿ 62,75,111=00( ಬಡ್ಡಿ ಸಂಗ್ರಹಣೆ ಹೊರತು)**

**3) ಸಹಾಯಧನ ಅಪೇಕ್ಷಿಸುವವರು, ಟ್ರಸ್ಟಿನ ಪ್ರತಿನಿಧಿ, ಅಂಗ ಸಂಸ್ಥೆಯ ಅಧ್ಯಕ್ಷರನ್ನು/ ಟ್ರಸ್ಟಿನ ಆಡಳಿತ ಕಛೇರಿಯನ್ನು ಸಂಪರ್ಕಿಸಬೇಕಾಗಿ ಕೋರಿಕೆ**

**4) ಶ್ರೀ ಗುರುನರಸಿಂಹ ದೇವಳದ ಕಛೇರಿಯಲ್ಲಿ ಟ್ರಸ್ಟಿಗೆ ದೇಣಿಗೆ ನೀಡಲು ಅವಕಾಶ ಮಾಡಿಕೊಡಲಾಗಿದೆ.**

**5) ತುರ್ತು ಆರೋಗ್ಯ ಸೇವೆಗೆ ಸಹಾಯಧನ ವನ್ನು ವರ್ಷ ಪೂರ್ಣ ನೀಡಲಾಗುವುದು. ಶಿಕ್ಷಣಕ್ಕೆ ಪ್ರೋತ್ಸಾಹ ಧನ ಸಪ್ಟಂಬರ ಮತ್ತು ಅಕ್ಟೋಬರ ತಿಂಗಳಲ್ಲಿ ಮಾತ್ರ ನೀಡಲಾಗುವುದು.**